(8) ಗಮನ ಸೆಳೆಯುವ ಸೂಚನೆ:

ತೆಂಗಿನ ಮರಗಳಿಗೆ ತಗಲಿರುವ ನುಸಿ ರೋಗ

+ ಶ್ರೀ ಜಿ.ರಾಜುಗೌಡ: ಮಾನ್ಯ ಅಧ್ಯಕ್ಷರೇ, ತೆಂಗಿನ ಮರಗಳಿಗೆ ತಗಲಿರುವ ನುಸಿ ರೋಗದ ಬಗ್ಗೆ ಮಾನ್ಯ ತೋಟಗಾರಿಕಾ ರಾಜ್ಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಬಿ.ಸೋಮಶೇಖರ್: ನಾವೆಲ್ಲಾ ಇದರ ಮೇಲೆ ಮಾತನಾಡಿದ ಮೇಲೆ ಮಾನ್ಯಮಂತ್ರಿಗಳು ಉತ್ತರ ಕೊಡಬಹುದು. ನಾವು ಕೆಲವು ವಿಚಾರಗಳನ್ನು ಹೇಳಬೇಕಾಗುತ್ತದೆ. ಅವರು ಒಂದೇ ಸಾರಿ ಉತ್ತರ ಕೊಡಲಿ.

MR.SPEAKER: On one condition that we have to complete it by 5.30. P.M ಅನಂತರ ನಾನು ಈ ಬಿಲ್ ಇಂಟ್ರಡ್ಯೂಸ್ ಮಾಡುವುದಕ್ಕೆ ಹೇಳುತ್ತೇನೆ.

ಶ್ರೀ ಜಿ.ರಾಜುಗೌಡ: ಈಗ ಮೊದಲು ನನಗೆ ಮಾತನಾಡಲು ಅವಕಾಶ ಕೊಡಿ.

ಶ್ರೀ ಸಿ.ಭೈರೇಗೌಡ: ತಾವು ಈಗಾಗಲೇ ಗಮನ ಸೆಳೆದಿದ್ದೀರಿ. ನಮ್ಮ ಮಾತುಗಳನ್ನೂ ಕೇಳಿ, ಆಮೇಲೆ ಅವರು ಉತ್ತರ ಕೊಡುತ್ತಾರೆ.

ಶ್ರೀ ಸಿ.ಚೆನ್ನಿಗಪ್ಪ: ಈ ಎಲ್ಲಾ ವಿಚಾರಗಳೂ ಒಂದೇ ವಿಷಯಕ್ಕೆ ಸೀಮಿತವಾಗಿರುವ ಕಾರಣ ಎಲ್ಲಾ ಸದಸ್ಯರೂ ಮಾತನಾಡಿದ ಮೇಲೆ ಮಾನ್ಯಮಂತ್ರಿಗಳು ಉತ್ತರ ಕೊಡಲಿ.

ಶ್ರೀ ಜಿ.ರಾಜುಗೌಡ: ಸ್ವಾಮಿ, ಈ ರಾಜ್ಯದಲ್ಲಿ ಪ್ರಮುಖ ವಾಣಿಜ್ಯ ಬೆಳೆಯಾದ ತೆಂಗಿನ ಬೆಳೆಗೆ ರಕ್ಷಣೆ ಇಲ್ಲವೆಂದು ನಾನು ಘಂಟಾಘೋಷವಾಗಿ ಹೇಳಬೇಕಾಗುತ್ತದೆ. ಏಕೆಂದರೆ ಈ ನುಸಿ ರೋಗದ ಬಾಧೆಯನ್ನು ಮುಂಜಾಗ್ರತೆಯಾಗಿ ನಿವಾರಣೆ ಮಾಡಬೇಕಾಗುತ್ತದೆ ಮತ್ತು ನಿಯಂತ್ರಣ ಮಾಡಬೇಕಾಗುತ್ತದೆ. ಆದರೆ, ಆ ಕೆಲಸವನ್ನು ಮಾಡಲಿಲ್ಲ. ವೈದ್ಯಕೀಯ ರಂಗದಲ್ಲಿ ಸಿಡುಬು ರೋಗವನ್ನೂ ನಿರ್ಮೂಲ ಮಾಡಿದ್ದಾರೆ. ಆದರೆ ಈ ನುಸಿ ರೋಗವನ್ನು ನಿರ್ಮೂಲ ಮಾಡತಕ್ಕ ಶಕ್ತಿ ನಿಮಗೆ ಬಂದಿಲ್ಲ. - ನಿಮ್ಮ ದಕ್ಷತೆಗೆ ಇದು ಸವಾಲಾಗಿದೆ ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಬಹುಶಃ ಈ ನುಸಿ ರೋಗ ಎಂಬುದು ತೆಂಗಿನ ಮರಕ್ಕೆ ಅಲ್ಲ, ಬಡವರ ತುತ್ತಿನ ಚೀಲದ ಮೇಲೆ ಆಗತಕ್ಕ ಮಾರಕ ರೋಗ ಇದು. ದಯಮಾಡಿ ನೀವು ಇದನ್ನು ಅರ್ಥಮಾಡಿಕೊಳ್ಳಬೇಕು. ಸಾಮೂಹಿಕವಾಗಿ ಎಲ್ಲಾ ಕಡೆ ಈ ರೋಗವನ್ನು ನಿಯಂತ್ರಣ ಮಾಡಬೇಕಾಗುತ್ತದೆ. ತಾವು ಒಪ್ಪಿಕೊಂಡಿದ್ದೀರಿ. ಆದರೆ, ವಿಜ್ಞಾನಿಗಳು ಹೇಳುತ್ತಾರೆ, ನಾವೇನು ಔಷಧಿಗಳನ್ನು ಬಳಸುತ್ತಿದ್ದೇವೆ, ಅದರಿಂದ ಏನೂ

ಪ್ರಯೋಜನ ಆಗುತ್ತಾ ಇಲ್ಲ. ಈ ರೋಗ ನಿರ್ಮೂಲವಾಗುವುದಿಲ್ಲವಂತೆ. ಈ ರೋಗ ಗಾಳಿಯಿಂದ ಹರಡುತ್ತದೆ ಎಂಬುದನ್ನು ನೀವೂ ಒಪ್ಪಿಕೊಂಡಿದ್ದೀರಿ. ನಾನೂ ಒಪ್ಪಿಕೊಳ್ಳುತ್ತೇನೆ. ಇದರ ಮೂಲ ಎಲ್ಲಿ? ಇದರ ಜನನ ಕೇಂದ್ರ ಎಲ್ಲಿ? ಇದು ಎಲ್ಲಿಂದ ಬಂತು? ಇದರ ಬಗ್ಗೆ ತಮಗೆ ತಿಳುವಳಿಕೆ ಬಂದಿದೆಯೇ? ಸುಮಾರು 65 ಕೋಟಿ ತೆಂಗಿನ ಮರಗಳಿಗೆ ಅಂದರೆ ಒಂದು ಬೆಳೆಗೆ ಸುಮಾರು 300-400 ಕೋಟಿ ರೂಪಾಯಿಗಳು ನಷ್ಟವಾಗುತ್ತದೆ. ಇದು ಪ್ರಕೃತಿ ವಿಕೋಪದಿಂದ ಆಗಿದೆಯೋ ಅಥವಾ ಸರ್ಕಾರದ ಆಲಸ್ಯದಿಂದ ಆಗಿದೆಯೋ ಇದಕ್ಕೆ ಪರಿಹಾರವನ್ನು ನಮ್ಮ ರೈತರಿಗೆ ಕೊಡಬೇಕೆಂದು ನಾನು ಒತ್ತಾಯಪೂರ್ವಕವಾಗಿ ಮಾನ್ಯ ಸಚಿವರಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮಿ, ತಾವೇ ಒಪ್ಪಿಕೊಂಡಿದ್ದೀರಿ. ಇದನ್ನು ನಿಯಂತ್ರಣ ಮಾಡಲಿಕ್ಕೇ 3.76 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕು. ಆದರೆ, ತಾವು ಇದಕ್ಕಾಗಿ ಬಿಡುಗಡೆ ಮಾಡಿದ್ದು ಎಷ್ಟು 2.46 ಕೋಟಿ ರೂಪಾಯಿಗಳು ಇದರಿಂದ ಏನಾಗಿದೆ, ತಾವು ಏನು ಔಷಧಿಯನ್ನು ಚೆಲ್ಲಿದಿರಿ, ಖಂಡಿತವಾಗಿಯೂ ಅದರ ವರ್ಚಸ್ಸನ್ನು ಕಳೆದುಕೊಂಡಿದೆ. ಆ ರೋಗವನ್ನು ನಿಯಂತ್ರಣ ಮಾಡತಕ್ಕ ಶಕ್ತಿ ಆ ಔಷಧಿಗೆ ಇಲ್ಲ. ತಾವು ಎಂತಹ ಔಷಧಿ ಮಾಡಿದ್ದೀರಿ. ಇದರಿಂದ ಏನಾದರೂ ಒಳ್ಳೆಯದು ಆಗಿದೆಯೇ? ಏನೂ ಆಗಿಲ್ಲ. ಇದು ಜಾಸ್ತಿಯಾಗುತ್ತದೆಯೇ ಹೊರತು ಕಡಿಮೆಯಾಗಿಲ್ಲ. ಈ ರೋಗವನ್ನು ನಿಯಂತ್ರಣ ಮಾಡತಕ್ಕಂಥ ಶಕ್ತಿಯನ್ನು ತಾವು ಕಳೆದುಕೊಂಡಿದ್ದೀರಿ. ಆದ್ದರಿಂದ ತಾವು ಈ ಕಾರ್ಯವನ್ನು ಮಾಡಲಿಕ್ಕೆ ಆಗುತ್ತದೆಯೇ ಇಲ್ಲವೇ ಮಾಡಲಿಕ್ಕೆ ಆಗುವುದಾದರೆ ಮಾಡುತ್ತೇವೆಂದು ಹೇಳಿ. ರೋಗ ಬರುವುದಕ್ಕೆ ಮೊದಲು ತಡೆಗಟ್ಟುವಂತಹ ವ್ಯವಸ್ಥೆ ಸರ್ಕಾರ ಮಾಡಿಲ್ಲ. ಇದರ ಬಗ್ಗೆ ನಮ್ಮ ತಜ್ಞರು ಸೋಲನ್ನು ಒಪ್ಪಿಕೊಂಡಿದ್ದಾರೆ. ಇದು ನಮಗೆ ಒಂದು ಸವಾಲಾಗಿ ಪರಿಣಮಿಸಿದೆ. ಒಂದು ಎಕರೆಯಲ್ಲಿ ಸುಮಾರು 20 ತೆಂಗಿನ ಮರಗಳು ಇದ್ದರೆ ಅದು ರೈತರಿಗೆ ಕಲ್ಪವೃಕ್ಷ. ಅಂತಹ ಮರ ಹೋದರೆ ರೈತ ಹೇಗೆ ಬದುಕುವುದಕ್ಕೆ ಆಗುತ್ತದೆ. ಇವತ್ತು ವಿದ್ಯುತ್ ಹೊಡೆತದಿಂದ ಬಹಳ ಹಾನಿಯಾಗುತ್ತಿದೆ. ಇವತ್ತು ಈ ರೋಗ 14 ಜಿಲ್ಲೆಗಳಲ್ಲಿ ಇದೆ ಎಂದು ಹೇಳಿದ್ದೀರಿ. ಆದರೆ ಎಲ್ಲಾ ಜಿಲ್ಲೆಗಳಲ್ಲಿದೆ. ತಾವೇನು ಅಂಕಿಅಂಶಗಳನ್ನು ಕೊಟ್ಟಿದ್ದೀರಿ ಅದಕ್ಕಿಂತ ಜಾಸ್ತಿಯಾಗಿದೆ. ತಾವು ಈ ರೋಗವನ್ನು ತಡಗಟ್ಟಬೇಕು, ಇಲ್ಲದಿದ್ದರೆ ಇದು ತೆಂಗಿನ ಮರಗಳ ಮೇಲೆ ಗದಾಪ್ರಹಾರ ಮಾಡುವಂತಹ ಕೆಲಸವಾಗುತ್ತದೆ. ಇದುವರೆಗೂ ತಾವು ಈ ರೋಗವನ್ನು ತಡೆಗಟ್ಟುವ ಸಲುವಾಗಿ ಎಷ್ಟು ಮೀಟಿಂಗ್‌ಗಳನ್ನು ಮಾಡಿದ್ದೀರಿ. ಎಷ್ಟು ಜನ ರೈತರನ್ನು ಕರೆದು ಮೀಟಿಂಗ್ ಮಾಡಿದ್ದೀರಿ. ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ಅದರಿಂದ ಈ ರೋಗ ಏನಾದರೂ ಕಂಟ್ರೋಲ್ ಆಗಿದೆಯೇ? ತಾವೇನು ಔಷಧಿಯ ಪ್ರಯೋಗ ಮಾಡಿದಿರಿ ಅದರ ಬಗ್ಗೆ ತಿಳುವಳಿಕೆಯನ್ನು ರೈತರಿಗೆ ಕೊಟ್ಟಿದ್ದೀರಾ? ಆ ಔಷಧಿ ರೋಗ ನಿಯಂತ್ರಣ ಮಾಡುವ ಶಕ್ತಿ ಕಳೆದುಕೊಂಡಿದೆ, ಅಂಥಾದ್ದಕ್ಕೆ ಏಕೆ ತಾವು ಹಣವನ್ನು ಖರ್ಚು

ಮಾಡುತ್ತೀರಿ. ಇವತ್ತು ನಮ್ಮ ರೈತರಿಗೆ ಏನು ನಷ್ಟವಾಗಿದೆ ನಿಮ್ಮ ಪ್ರಕೃತಿ ವಿಕೋಪದಿಂದಲೋ ನಿಮ್ಮ ಆಲಸ್ಯದಿಂದಲೋ ಅದಕ್ಕೆ ಪರಿಹಾರವನ್ನು ಕೊಡಬೇಕೆಂದು ನಾನು ಒತ್ತಾಯ ಮಾಡುತ್ತಾ, ಇನ್ನು ಮುಂದೆ ಈ ರೋಗ ಬರದಂತೆ ತಡೆಗಟ್ಟಲು ನಮ್ಮ ರೈತರಿಗೆ ಸರಿಯಾದ ತರಬೇತಿಯನ್ನು ಕೊಟ್ಟು ಬೆಳೆ ನಷ್ಟವಾಗದ ಹಾಗೆ ನೋಡಿಕೊಳ್ಳಬೇಕು. ಈಗ ಕಳೆದ ಒಂದು ವರ್ಷದಿಂದ ನಮ್ಮ ರೈತರಿಗೆ 4 ಕೋಟಿ ರೂಪಾಯಿಗಳು ಹೋಯಿತು. ಆ ತೆಂಗಿನ ಮರಗಳನ್ನೇ ನಂಬಿರತಕ್ಕಂಥ ರೈತರು ಇವತ್ತು ಕಂಗಾಲಾಗಿದ್ದಾರೆ. ಇದು ರೈತರ ವಾಣಿಜ್ಯ ಬೆಳೆ. ಸರ್ಕಾರ ರೈತರಿಗೆ ಪರಿಹಾರ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

+ ಶ್ರೀ ಸಿ. ಭೈರೇಗೌಡ (ವೇಮಗಲ್): ಮಾನ್ಯ ಅಧ್ಯಕ್ಷರೇ, ಇವತ್ತು ರಾಜ್ಯದ 5-6 ಜಿಲ್ಲೆಗಳ ರೈತರ ಮೇಲೆ ಅದರಲ್ಲೂ ಅವರ ಆರ್ಥಿಕ ಪರಿಸ್ಥಿತಿಯ ಮೇಲೆ ಭೀಕರವಾದ ಪರಿಣಾಮ ಬೀರಿರತಕ್ಕಂಥ ವಿಚಾರದ ಬಗ್ಗೆ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಟ್ಟಿದ್ದೀರಿ ಅದಕೋಸ್ಕರ ಧನ್ಯವಾದಗಳು. ಈ ನುಸಿ ಪೀಡೆ ರೋಗ ರಾಜ್ಯದ 5-6 ಜಿಲ್ಲೆಗಳಲ್ಲಿರತಕ್ಕಂಥಾ ತೆಂಗಿನ ಮರಗಳಿಗೆ ಕಳೆದ 5-6 ತಿಂಗಳುಗಳಿಂದ ಈ ರೋಗ ಪ್ರಾರಂಭವಾಗಿದೆ. ಈ ರೋಗ ತಜ್ಞರು ಹೇಳುವ ಪ್ರಕಾರ ಕೇರಳ ಮತ್ತು ತಮಿಳುನಾಡಿನಿಂದ ಬಂದಿದೆ ಎಂದು ಹೇಳುತ್ತಿದ್ದಾರೆ. ಈ ರೋಗ 1956ನೇ ಇಸವಿಯಲ್ಲಿ ಮೆಕ್ಸಿಕೋ ದೇಶದಲ್ಲಿ ಪ್ರಾರಂಭವಾಗಿದ್ದು ಅಲ್ಲಿಂದ ಕ್ರಮೇಣವಾಗಿ ಗಾಳಿ ಮತ್ತು ಗಿಡಗಳಿಂದ ಈ ರೋಗ ಇವತ್ತು ನಮ್ಮ ದೇಶಕ್ಕೂ ಹರಡಿದೆ. ಮೊದಲು ಪ್ರಾರಂಭವಾಗಿದ್ದು ಕೇರಳದಲ್ಲಿ ಅನಂತರ ನಮ್ಮ ರಾಜ್ಯಕ್ಕೂ ಸಹ ಬಂದಿದೆ. ನಮ್ಮ ರಾಜ್ಯ ತೆಂಗಿನ ಮರಗಳ ವಿಸ್ತೀರ್ಣದಲ್ಲಿ ಎರಡನೆ ಸ್ಥಾನದಲ್ಲಿದೆ. ತೆಂಗಿನ ಕಾಯಿಯ ಬೆಳವಣಿಗೆಯಲ್ಲೂ ಸಹ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠಕ್ಕೆ ಬಂದರು)

ಆದರೆ ಉತ್ಪತ್ತಿಯಲ್ಲಿ ನಮ್ಮ ರಾಜ್ಯ ಮೂರನೇ ಸ್ಥಾನದಲ್ಲಿದೆ. ನಮ್ಮ ರಾಜ್ಯದ ಜಿಲ್ಲೆಗಳಾದ ತುಮಕೂರು, ಚಿತ್ರದುರ್ಗ, ದಾವಣಗೆರೆ, ಹಾಸನ, ದಕ್ಷಿಣ ಕನ್ನಡ, ಉಡುಪಿ, ಚಾಮರಾಜನಗರ, ಚಿಕ್ಕಮಗಳೂರು, ಮಂಡ್ಯ, ಬೆಂಗಳೂರು, ಕೋಲಾರ, ಶಿವಮೊಗ್ಗ, ಉತ್ತರ ಕನ್ನಡ, ಬೆಳಗಾಂ ಜಿಲ್ಲೆಗಳಲ್ಲಿ ಇದು ರೈತರಿಗೆ ಆರ್ಥಿಕವಾಗಿ ಬಹಳ ಪ್ರಯೋಜನವಾಗುತ್ತಿರುವಂತಹ ಬೆಳೆ. ಇವತ್ತು ನಮ್ಮ ರಾಜ್ಯದಲ್ಲಿ ಸುಮಾರು 4.6 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೆಂಗಿನ ಮರಗಳನ್ನು ಬೆಳೆಯುವಂಥಾದ್ದನ್ನು ರೈತರು ಮಾಡುತ್ತಿದ್ದಾರೆ. ಪ್ರತಿವರ್ಷ 3120 ದಶಲಕ್ಷ ತೆಂಗಿನ ಕಾಯಿಗಳ ಉತ್ಪಾದನೆ ನಮ್ಮ ರಾಜ್ಯದಲ್ಲಿ ಆಗುತ್ತಿದೆ. ಅದರ ಒಂದು ಅಂದಾಜಿನ ಪ್ರಕಾರ ನಮ್ಮ ರಾಜ್ಯದಲ್ಲಿ ಸುಮಾರು 10 ಲಕ್ಷ ಜನ ಈ ವೃತ್ತಿಯನ್ನು ಅವಲಂಬಿಸಿದ್ದಾರೆ. ತೆಂಗಿನ ಮರ

ನೆಡತಕ್ಕಂಥಾದ್ದು, ಅದಕ್ಕೆ ಉಳುಮೆ ಮಾಡತಕ್ಕಂಥಾದ್ದು, ತೆಂಗಿನಕಾಯಿ ಕೀಳತಕ್ಕಂಥಾದ್ದು, ಅದನ್ನು ಶುದ್ಧೀಕರಣ ಮಾಡತಕ್ಕಂಥಾದ್ದು, ಕಾಯಿಯಲ್ಲಿ ಬರತಕ್ಕಂಥಾ ನಾರನ್ನು ತೆಗೆಯತಕ್ಕಂಥಾದ್ದು, ಅದನ್ನು ಬೇರೆ ಬೇರೆ ಪ್ರಾಡಕ್ಟ್ಸ್ ಆಗಿ ಕನ್‌ವರ್ಟ್ ಮಾಡತಕ್ಕಂಥಾದ್ದು, ಇದನ್ನೆಲ್ಲಾ ಸೇರಿಸಿದರೆ ಸುಮಾರು 10 ಲಕ್ಷ ಜನ ಈ ವೃತ್ತಿಯಲ್ಲಿ ತೊಡಗಿದ್ದಾರೆ. ಈ ತೆಂಗಿನ ಮರದ ಪ್ರತಿಯೊಂದು ಅಂಗ ಕೂಡ ಅದರಲ್ಲಿ ಮರದ ಕಾಂಡ ಇರಬಹುದು, ತೆಂಗಿನ ಗರಿ ಇರಬಹುದು ಅಥವಾ ಅಲ್ಲಿ ಬೀಳತಕ್ಕಂಥ ಕಸ ಕಡ್ಡಿ ಇರಬಹುದು, ಪ್ರತಿಯೊಂದು ಕೂಡ ಇವತ್ತು ಜನರ ಬಳಕೆಗೆ ಬರುತ್ತಿದೆ. ಮತ್ತು ಇಷ್ಟೇ ಅಲ್ಲದೆ ತೆಂಗಿನ ಉತ್ಪನ್ನಗಳನ್ನು ನಮ್ಮ ದೇಶದಿಂದ ಹೊರದೇಶಕ್ಕೆ ಕಳುಹಿಸುವಂತಹ ವ್ಯವಸ್ಥೆ ಕೂಡ ಇದೆ. ತೆಂಗಿನ ಎಣ್ಣೆಯನ್ನು ಸಹ ನಮ್ಮ ದೇಶದಿಂದ ಪರದೇಶಕ್ಕೆ ಕಳುಹಿಸಿಕೊಡತಕ್ಕಂಥಾದ್ದು ಇದೆ. ಆದ್ದರಿಂದ ಇದು ಆರ್ಥಿಕವಾಗಿ ಬಹಳ ಪ್ರಮುಖವಾದ ಬೆಳೆಯಾಗಿ ಪರಿಣಮಿಸಿದೆ. ರೈತರಾಗಿರುವಂತಹವರು ಬೇರೆ ಬೇರೆ ಬೆಳೆಗಳನ್ನು ಬೆಳೆಯುತ್ತಾರೆ. ಆದರೆ ಇವತ್ತು ನಮ್ಮ ರಾಜ್ಯದಲ್ಲಿ ಕೆಲವು ಜಿಲ್ಲೆಗಳಲ್ಲಿ ಪೂರ್ತಿಯಾಗಿ ತೆಂಗಿನ ಬೆಳೆಯನ್ನೇ ಅವಲಂಬಿಸಿರುವಂತಹ ರೈತರು ಇದ್ದಾರೆ. ಮತ್ತು ಒಟ್ಟು ತೋಟಗಾರಿಕಾ ಬೆಳೆಗಳಲ್ಲಿ, ನಮ್ಮ ರಾಜ್ಯದಲ್ಲಿರುವ ತೆಂಗಿನ ಬೆಳೆ ಎಷ್ಟು ಅಂದರೆ ಶೇಕಡ 30ರಷ್ಟು ಇದೆ ಎನ್ನುವ ಮಾತನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇಂತಹ ಪ್ರಮುಖವಾದ ಬೆಳೆಗೆ ಇವತ್ತು 4-5 ರೋಗಗಳು ಇವೆ. ಅದರಲ್ಲೂ ಮುಖ್ಯವಾದ ರೋಗಗಳೆಂದರೆ ಬ್ಲಾಕ್ ಹೆಡ್ಡೆಡ್ ಕ್ಯಾಟರ್ ಫಿಲ್ಲರ್ ಎನ್ನತಕ್ಕಂಥಾದ್ದು, ಇದೊಂದು ಕೀಟ. ಅದರ ಜೊತೆಯಲ್ಲಿಯೇ, ಎರಿಯೋಫೈಡ್ ಮೈಟ್ ಎನ್ನತಕ್ಕಂಥಾದ್ದು, ರೆಡ್‌ಫಾಮ್ ಗ್ರಿವಿಲ್ ಎನ್ನತಕ್ಕಂಥಾದ್ದು, ರೈನೋಸರಿಸ್ ಬೀಟಲ್ ಎನ್ನತಕ್ಕಂಥಾದ್ದು, ಈ ರೋಗಗಳು ಮತ್ತು ಕೀಟಗಳು ಬರತಕ್ಕಂಥಾದ್ದನ್ನು ನಾವು ಕಂಡಿದ್ದೇವೆ. ಸ್ಟಾಂಪ್‌ಬ್ಲೀಡಿಂಗ್ ಅಂದರೆ ಮರದ ಕಾಂಡದಲ್ಲಿರುವ ಒಂದು ರೀತಿಯಾದ ಅಂಟು ಬರುತ್ತಿರುತ್ತದೆ. ಈ ರೀತಿಯಾದ ಅಂಟು ಬರುತ್ತಾ ಬರುತ್ತಾ ಕೊನೆಗೆ ಮರ ಸಾಯುತ್ತದೆ. ನಷ್ಟವಾಗುತ್ತದೆ. ಮತ್ತೆ ಬಟ್‌ರಾಟ್ ಎನ್ನತಕ್ಕಂಥಾದ್ದು, ಒಂದು ಖಾಯಿಲೆ ಬರುತ್ತದೆ. ಇದನ್ನು ಬಟರ್ ಷಡ್ಡಿಂಗ್ ಎಂದು ಸಹ ಕರೆಯುತ್ತಾರೆ. ಈ ರೋಗದಿಂದ ಮರದಲ್ಲಿ ಸಣ್ಣ ಕಾಯಿಯಾದ ಕೂಡಲೆ ಅದು ಬೀಳುತ್ತದೆ. ಅದರ ಜೊತೆಯಲ್ಲಿಯೇ ಈ ಅಣಬೆ ರೋಗ ಎಂದು ಬರುತ್ತದೆ. ಮರದ ಬುಡದಲ್ಲಿ ಅಣಬೆ ಪ್ರಾರಂಭವಾಗುತ್ತದೆ, ಅದು ಒಂದು ಶಿಲಿಂದ್ರ. ಆ ಶಿಲಿಂದ್ರದಲ್ಲಿ ಅಣಬೆ ಹೆಚ್ಚಾದಾಗ ಮರ ಸಾಯುತ್ತದೆ. ಈ ಕೀಟಗಳಲ್ಲಿ ಬಹಳ ಮುಖ್ಯವಾಗಿರತಕ್ಕಂಥಾದ್ದು ಅಂದರೆ ಕಪ್ಪು ತಲೆ ಹುಳು ನಮ್ಮ ರಾಜ್ಯದಲ್ಲಿ 15-20 ವರ್ಷಗಳಿಂದ ಈ ರೋಗ ಇದೆ. ಇದರಿಂದ ಸಾವಿರಾರು ಎಕರೆ ಪ್ರದೇಶದಲ್ಲಿರುವ ತೆಂಗಿನ ಮರಗಳ ಗರಿ ಒಣಗಿದ ಹಾಗೆ ಆಗಿ ಅದನ್ನು ಏನು ಮಾಡಿದರೂ ಸಹ ಅದನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತಿಲ್ಲ. ಇದರಿಂದ ಇಳುವರಿ ಕೂಡ ಕಡಿಮೆಯಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ.

ಇದರ ಜೊತೆಗೆ ಈ ನುಸಿ ಪೀಡೆ ಸಹ ಬಂದು ಈ ಕೀಟರೋಗಗಳಿಗಿಂತ ಬಹಳ ಹೆಚ್ಚಿನ ಪ್ರಮಾಣದಲ್ಲಿ ಈ ನುಸಿ ಪೀಡೆ ತೆಂಗಿನ ಮರಗಳನ್ನು ಹಾಳುಮಾಡುತ್ತಿದೆ. ಈ ನುಸಿ ಪೀಡೆ ರೋಗ ನಮ್ಮ ಜಿಲ್ಲೆಯಾದ ಕೋಲಾರ ಜಿಲ್ಲೆಯಲ್ಲಿ ಸಹ ಕಳೆದ 5-6 ತಿಂಗಳ ಹಿಂದೆ ಕಾಣಿಸಿಕೊಂಡಿತು. ನಾನೇ ಸ್ಥಳಕ್ಕೆ ಹೋಗಿ ನೋಡಿದ್ದೇನೆ. ವಿಶ್ವವಿದ್ಯಾನಿಲಯದ ವಿಜ್ಞಾನಿಗಳನ್ನು ಸಹ ಅಲ್ಲಿಗೆ ಕಳುಹಿಸಿ ತತ್‌ಕ್ಷಣ ಅವರು ಈ ಬಗ್ಗೆ ಏನೇನು ಕ್ರಮ ತೆಗೆದುಕೊಳ್ಳಬೇಕೋ ತೆಗೆದುಕೊಳ್ಳಿ ಎಂದು ಹೇಳಿದಾಗ ಅವರು ಸಹ ಹೋಗಿ ನೋಡಿ ಬಂದು ಸಲಹೆಗಳನ್ನು ಸಹ ಕೊಟ್ಟಿದ್ದಾರೆ. ಇದಾದ ನಂತರ ಸರ್ಕಾರ ಬದಲಾವಣೆ ಆಗಿದೆ. ಇದು ಕೋಲಾರ ಜಿಲ್ಲೆಯಲ್ಲಿ ಪ್ರಾರಂಭವಾಗಿದ್ದು ಅಲ್ಲ ಬೆಂಗಳೂರು ಜಿಲ್ಲೆಯ ವರ್ತೂರಿನಲ್ಲಿ ಸಹ ಇದು ಪ್ರಾರಂಭವಾಗಿದೆ. ನಾನೇ ಖುದ್ದಾಗಿ ಕೆಲವು ತೋಟಗಳಿಗೆ ಹೋಗಿ ನೋಡಿ ಬಂದಿದ್ದೇನೆ. ತಕ್ಷಣ ನಾನು ಕೃಷಿ ಮತ್ತು ತೋಟಗಾರಿಕಾ ಇಲಾಖೆಯ ಅಧಿಕಾರಿಗಳನ್ನು ಕರೆಸಿ ಅವರಿಗೆ ಸೂಚನೆಯನ್ನು ನೀಡಿದ್ದೇನೆ. ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ನಾವು ಕ್ರಮ ತೆಗೆದುಕೊಂಡಿದ್ದೇವೆ. ಈಗ ಹೊಸ ಸರ್ಕಾರ ಬಂದಮೇಲೆ ನಾನು ತಿಳಿದುಕೊಂಡಿದ್ದೆ, ಹೊಸ ಸರ್ಕಾರ ಏನೇನೋ ಹೇಳುವುದಕ್ಕೆ ಹೊರಟರು. ಅದೇ ರೀತಿ ಹೊಸದಾಗಿ ಈ ಬಗ್ಗೆ ಕೂಡ ಏನೋ ಪ್ರಾರಂಭ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಆದರೆ ಇವರು ಬರೀ ಕೈಗಾರಿಕೆಗಳು, ಇನ್‌ಫರ್ಮೇಶನ್ ಟೆಕ್ನಾಲಜಿ, ಇದರ ಬಗ್ಗೆ ಒತ್ತು ಕೊಡುತ್ತಿರುವಂತಹ ಸಂದರ್ಭದಲ್ಲಿ ಈ ಬಗ್ಗೆ ಕೂಡ ಏನೋ ಕಾರ್ಯಕ್ರಮ ಹಾಕಿಕೊಳ್ಳುತ್ತಾರೆಂದು ತಿಳಿದುಕೊಂಡಿದ್ದೆ. ನಾನು ಈ ಸದನದಲ್ಲಿ ಕೂಡ ಹೇಳಿದ್ದೇನೆ ಹೊರಗಡೆ ಕೂಡ ಹೇಳಿದ್ದೇನೆ. ನೀವು ನಿಮ್ಮ ಆರ್ಥಿಕ ರಂಗದಲ್ಲಿ ಮಾತ್ರ ನಿಮ್ಮ ಶ್ರದ್ಧೆಯನ್ನು ತೋರಿಸುತ್ತಿದ್ದೀರಿ, ಮತ್ತೊಂದು ಮುಖ್ಯವಾಗಿರತಕ್ಕಂಥ ಭಾಗ ಕೃಷಿರಂಗ, ಈ ಕೃಷಿ ರಂಗವನ್ನು ನೀವು ಕೈಬಿಡುತ್ತಿದ್ದೀರಿ ಎನ್ನತಕ್ಕಂಥ ಆಪಾದನೆಯನ್ನು ನಾನು ಮಾಡಿದ್ದೇನೆ. ಇವರು ಈ ಆಪಾದನೆಯಿಂದ ತಪ್ಪಿಸಿಕೊಳ್ಳಬೇಕೆಂದು ಧಾರವಾಡದಲ್ಲಿ ಒಂದು ಕೃಷಿ ಶೃಂಗಸಭೆಯನ್ನು ಕರೆದರು. ಏನೋ ಒಂದು ದೊಡ್ಡ ಮಹತ್ಕಾರ್ಯ ನಡೆಯುತ್ತಿದೆ ಎಂದು ಕೇಳಿ ಬಹಳ ಸಂತೋಷಪಟ್ಟೆನು. ಪತ್ರಿಕೆಗಳಲ್ಲಿ ಬಂದ ಆ ಕುರಿತು ಸುದ್ದಿಗಳು, ವಿಚಾರಗಳು ಮುಂತಾಗಿ ಕೇಳಿ ಸಂತೋಷ ಪಟ್ಟಿದ್ದೆನು. ಪತ್ರಿಕೆಗಳಲ್ಲಿ ಆ ಕುರಿತು ಒಂದು ಸುಂದರವಾದ ಜಾಹೀರಾತು ಕೂಡ ಬಂತು. ಕೃಷೀಕರಣನ್ನು ಆರ್ಥಿಕವಾಗಿ ಬಹಳ ಮೇಲ್ಮಟ್ಟಕ್ಕೆ ಕರೆದುಕೊಂಡು ಹೋಗುತ್ತಾರೆ, ಎಂಬ ದೊಡ್ಡದೊಂದು ನಿರೀಕ್ಷೆಯು ನನ್ನಲ್ಲಿತ್ತು. ಆದರೆ ಆ ನಿರೀಕ್ಷೆಯು ಸಂಪೂರ್ಣವಾಗಿ ಇವೊತ್ತಿನ ದಿವಸ ವಿಫಲವಾಗಿದೆ. ಕೃಷಿ ಸಮ್ಮಿಟ್ ಬಗ್ಗೆ ಈ ಸಂದರ್ಭದಲ್ಲಿ ನಾನು ಮಾತನಾಡಲು ಹೋಗಬಯಸುವುದಿಲ್ಲ. ಇವೊತ್ತು ಕೃಷಿರಂಗದ ವಿಚಾರದಲ್ಲಿ ಸರಕಾರ ಮಾಡುತ್ತಿರುವುದು ಕೇವಲ ಘೋಷಣೆಗಳು ಮಾತ್ರ. ಇದು ಕೇವಲ ಘೋಷಣೆಗಳ ಸರಕಾರ. ಘೋಷಣೆಗಳಿಂದಲೇ ಕಳೆದ ನಾಲ್ಕೈದು ತಿಂಗಳುಗಳ ಕಾಲವನ್ನು ತಳ್ಳಿದ

ಸರಕಾರ ಇದು. ಅದನ್ನು ಸಾಬೀತು ಪಡಿಸುವ ರೀತಿಯಲ್ಲಿ ಸರಕಾರದ ವ್ಯವಹಾರಗಳು ನಡೆಯುತ್ತಿವೆ. ಇವೊತ್ತು ರಾಜೂಗೌಡರು ಹೇಳಿದ್ದಾರಲ್ಲವೆ? ಸರಕಾರ ತೆಂಗು ಕೃಷಿಕರಿಗೆ ಕೊಟ್ಟಂಥ ಔಷಧಿ ಎಂಥಾದ್ದು, ಮುಂತಾಗಿ ಅವರೇ ಹೇಳುತ್ತಾ ಇದ್ದಾರೆ. ಆಡಳಿತ ಪಕ್ಷದ ಸದಸ್ಯರು ಆಗ್ರಹಪೂರ್ವಕವಾಗಿ ನನ್ನ ಮಾತುಗಳನ್ನು ಪುಷ್ಟೀಕರಿಸುವಂಥ ರೀತಿಯಲ್ಲಿಯೇ ವಿಚಾರಗಳನ್ನು ಮಂಡಿಸಿದ್ದಾರೆ. ಈ ರೀತಿಯ ಸಾಕ್ಷಿಗಿಂತ ಹೆಚ್ಚು ನಾನು ಹೇಳಬೇಕಾದ ಅವಶ್ಯಕತೆಯೂ ಇಲ್ಲ. ಈ ಪಿಡುಗು ಎಲ್ಲಾ ಜಿಲ್ಲೆಗಳಲ್ಲಿಯೂ ಆಕ್ರಮಿಸಿರತಕ್ಕಂಥಾದ್ದನ್ನು ನಾವು ನೋಡಿದ್ದೇವೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ವ್ಯಾಪಕವಾಗಿ ಹರಡಿದೆ. ತರೀಕೆರೆ, ಚಿಕ್ಕಮಗಳೂರು, ಕಡೂರು, ಮುಂತಾಗಿ ರೋಗಪೀಡಿತವಾಗಿವೆ. ಚಿಕ್ಕಮಗಳೂರು ತಾಲ್ಲೂಕಿನ ಸುಮಾರು 3.65ಲಕ್ಷ ಮರಗಳು ರೋಗ ಪೀಡಿತವಾಗಿವೆ. ಕಡೂರು ತಾಲ್ಲೂಕಿನ ಸುಮಾರು 62 ಗ್ರಾಮಗಳಲ್ಲಿ ತೆಂಗಿನ ಮರಗಳು ರೋಗಪಿಡಿತವಾಗಿವೆ. ತರೀಕೆರೆ ತಾಲ್ಲೂಕಿನಲ್ಲಿ 37 ಗ್ರಾಮಗಳು, ಚಿಕ್ಕಮಗಳೂರು ತಾಲ್ಲೂಕಿನ 19 ಗ್ರಾಮಗಳು, ಒಟ್ಟು ಚಿಕ್ಕಮಗಳೂರು ಜಿಲ್ಲೆಯಲ್ಲಿನ 118 ಗ್ರಾಮಗಳಲ್ಲಿ ಈ ನುಸಿ ರೋಗವು ತಗುಲಿದೆ. ಚಿಕ್ಕಮಗಳೂರು ಜಿಲ್ಲೆಯ ಒಟ್ಟು 2665 ರೈತ ಕುಟುಂಬಗಳು ಇದರಿಂದ ತೊಂದರೆಯನ್ನು ಅನುಭವಿಸುತ್ತಿವೆ. ಚಿಕ್ಕಮಗಳೂರು ಜಿಲ್ಲೆಯಲ್ಲದೆ ಹಾಸನ ಜಿಲ್ಲೆಯಲ್ಲಿಯೂ ಕೂಡ ಈ ರೋಗವು ವ್ಯಾಪಕವಾಗಿ ಹರಡುತ್ತಿದೆ. ಚೆನ್ನರಾಯಪಟ್ಟಣ, ಅರಸೀಕೆರೆ, ಅರಕಲಗೂಡು ಮುಂತಾದ ಕಡೆಗಳಲ್ಲಿ ಒಳ್ಳೆಯ ತೆಂಗಿನ ತೋಟಗಳನ್ನು ನಾವು ನೋಡುತ್ತಾ ಇದ್ದೇವೆ. ಹಾಗೆಯೇ ಬೆಂಗಳೂರು ಜಿಲ್ಲೆಯ ಚೆನ್ನಪಟ್ಟಣ ಮುಂತಾದ ಕಡೆಗಳಲ್ಲಿ, ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉತ್ತರ ಕನ್ನಡ ಸ್ವಲ್ಪ ಭಾಗದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಈ ಬೆಳೆಯನ್ನು ಅವಲಂಬಿಸಿದ್ದಾರೆ. ಹಾಸನ ಜಿಲ್ಲೆಯಲ್ಲಿ ತೆಂಗು ಬೆಳೆಯು ಪ್ರಮುಖವಾದುದು. ಅಲ್ಲಿನ ರೈತರುಗಳಿಗೆ ಇದೆ ಪ್ರಮುಖ ಕೃಷಿ. ನಮ್ಮ ಕಂದಾಯ ಸಚಿವರು ಕೂಡ ಈ ವಿಚಾರ ಚೆನ್ನಾಗಿ ಅರಿತುಕೊಂಡಿದ್ದಾರೆ. ಅವರ ಕ್ಷೇತ್ರದಲ್ಲಿಯೂ ತೆಂಗು ಬೆಳೆ ಬಹಳ ಮುಖ್ಯವಾದುದು. ಅರಸೀಕೆರೆ, ಚೆನ್ನರಾಯಪಟ್ಟಣ, ಹೊಳೆನರಸೀಪುರ, ಹಾಸನ, ಅರಕಲಗೂಡು, ಹೀಗೆ ಒಟ್ಟು 54-55 ಸಾವಿರ ಹೆಕ್ಟೇರ್‌ಗಳಷ್ಟು ಪ್ರದೇಶದಲ್ಲಿ ತೆಂಗಿನ ಬೆಳೆಯಾಗುತ್ತಿದೆ. ಹಾಸನ ಜಿಲ್ಲೆಯ ಬಹುಭಾಗದ ತೆಂಗಿನ ಬೆಳೆಯಲ್ಲಿ ಸುಮಾರು 5 ಸಾವಿರ ಹೆಕ್ಟೇರ್ ಪ್ರದೇಶದ ಬೆಳೆಗೆ ನುಸಿರೋಗ ತಗುಲಿದೆ. ದಿನಗಳೆದಂತೆ ಅದು ವಿಸ್ತೀರ್ಣದಲ್ಲಿ ಮತ್ತು ಮರಗಳವಾರು ರೋಗ ತಗಲುವುದು ಜಾಸ್ತಿಯಾಗುತ್ತಿರುವುದನ್ನು ನಾವು ಕಾಣುತ್ತಾ ಇದ್ದೇವೆ. ಅರಸೀಕೆರೆ ತಾಲ್ಲೂಕು ಒಂದರಲ್ಲೇ ಅರ್ಧದಷ್ಟು ಪ್ರದೇಶದ ತೆಂಗುಬೆಳೆಯು ಈ ರೋಗಕ್ಕೆ ತುತ್ತಾಗಿದೆ. ಹಾಸನ ಜಿಲ್ಲೆಯು ಬಹಳ ಮುಖ್ಯವಾದ ಜಿಲ್ಲೆಯಾಗಿದ್ದು ಅಲ್ಲಿ ಈ ಪರಿಸ್ಥಿತಿಯು ಬಂದಿದೆ. ಅದೇ ಸ್ಥಿತಿಯು ಮಂಡ್ಯ ಜಿಲ್ಲೆಯಲ್ಲಿಯೂ ಇದೆ. ಮಾನ್ಯ ಮುಖ್ಯಮಂತ್ರಿಯವರ ತಾಲ್ಲೂಕು ಮದ್ದೂರು ಒಳ್ಳೆಯ ತೆಂಗಿನ ತೋಟಗಳು ಇರುವ

ಪ್ರದೇಶ. ಚೆನ್ನಪಟ್ಟಣಕ್ಕೆ ಹತ್ತಿರ ಇರುವ ಕಾರಣದಿಂದ ಈ ಮದ್ದೂರಿನಲ್ಲಿಯೂ ನುಸಿರೋಗದ ಬಾಧೆಯು ಹೆಚ್ಚಾಗಿ ತಗುಲಿದೆ. ಮಂಡ್ಯ ಜಿಲ್ಲೆಯ 34,140 ಹೆಕ್ಟೇರ್ ಪ್ರದೇಶದಲ್ಲಿ ತೆಂಗನ್ನು ಬೆಳೆಯುತ್ತಾ ಇದ್ದಾರೆ. ಹತ್ತು ಲಕ್ಷ ಮರಗಳಿಗೆ ನುಸಿರೋಗವು ತಗುಲಿದೆ. ಮುಖ್ಯಮಂತ್ರಿಗಳ ಜಿಲ್ಲೆ ಮತ್ತು ತಾಲ್ಲೂಕಿನಲ್ಲಿಯೇ ಈ ಪರಿಸ್ಥಿತಿ ಇದೆ. ಮದ್ದೂರು ತಾಲ್ಲೂಕಿನಲ್ಲಿ 3,33,304, ನಾಗಮಂಗಲ ತಾಲ್ಲೂಕಿನಲ್ಲಿ 2,67,500, ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ 88,488, ಮಂಡ್ಯ ತಾಲ್ಲೂಕಿನಲ್ಲಿ 1,21,613 ಹೆಕ್ಟೇರ್ ಪ್ರದೇಶ ಹೀಗೆ ವ್ಯಾಪಕವಾಗಿ ಮಂಡ್ಯಜಿಲ್ಲೆಯಲ್ಲಿ ಕೂಡ ನುಸಿ ರೋಗ ಹಬ್ಬಿದೆ. ಇದು ಚಿತ್ರದುರ್ಗ ಜಿಲ್ಲೆಗೂ ಹಬ್ಬಿದೆ. ಅಲ್ಲಿಗೆ ಮಾನ್ಯ ತೋಟಗಾರಿಕಾ ಸಚಿವರು ಹೋಗಿ ನೋಡಿಕೊಂಡು ಬಂದಿದ್ದಾರೆ. ಕೃಷಿ ಸಚಿವರು ಕೂಡ ಹೋಗಿ ಬಂದಿದ್ದಾರೆ. ಅಲ್ಲಿನ ಜನರು ಪಟ್ಟ ತೊಂದರೆಗಳು ಮತ್ತು ಅವರ ಭಾವನೆಗಳನ್ನು ತಾವುಗಳು ಪ್ರತ್ಯಕ್ಷವಾಗಿ ನೋಡಿದ್ದೀರಿ. ಅಲ್ಲಿನ ಪರಿಸ್ಥಿತಿಯನ್ನು ತಾವುಗಳು ಖುದ್ದಾಗಿ ನೋಡಿ ಅರಿತಿದ್ದೀರಿ. ಚಿತ್ರದುರ್ಗ ಜಿಲ್ಲೆಯಲ್ಲಿಯೂ ಕೂಡ ಸುಮಾರು 22,000 ಹೆಕ್ಟೇರ್ ಜಮೀನಿನ ಪೈಕಿ ಸುಮಾರು 8.5 ಲಕ್ಷ ಮರಗಳು ನುಸಿರೋಗಕ್ಕೆ ತುತ್ತಾಗಿವೆ. ಹಿರಿಯೂರು ತಾಲ್ಲೂಕಿನಲ್ಲಿಯೂ ಇದೇ ಪರಿಸ್ಥಿತಿಯಿದೆ. ಹಿರಿಯೂರು ತಾಲ್ಲೂಕಿನಲ್ಲಿ ಎಲ್ಲಿ ನೋಡಿದರೂ ಕೂಡ ನಾವು ತೆಂಗಿನ ಮರಗಳನ್ನು ಕಾಣುತ್ತಾ ಇರುತ್ತೇವೆ. ಅಲ್ಲಿ ನಾನು ಕೂಡ ವ್ಯಾಪಕವಾಗಿ ಪ್ರವಾಸ ಮಾಡಿದ್ದೇನೆ. ಕೃಷಿ ವಿಶ್ವವಿದ್ಯಾನಿಲಯದ ಒಂದು ಫಾರ್ಮ್ ಕೂಡ ಅಲ್ಲಿದೆ. ರಸ್ತೆಗಳ ಪಕ್ಕಗಳಲ್ಲಿ ನೋಡಿದಾಗ ಅಲ್ಲಿನ ತೆಂಗು ಬೆಳೆಯ ಅರಿವು ನಮಗೆ ಆಗುತ್ತದೆ. ತೆಂಗಿನ ಹೊಟ್ಟಿನ ನಾರನ್ನು ಹಗ್ಗವಾಗಿ ಮಾಡುವುದು ಅಲ್ಲದೇ ಬೇರೆ ಬೇರೆ ಉತ್ಪನ್ನಗಳನ್ನು ಮಾಡತಕ್ಕಂಥಾದ್ದು ಇದೆ. ಅಲ್ಲಿಗೆ ಜನವರಿಯೊಳಗಾಗಿ ಮಾನ್ಯ ಸಚಿವರುಗಳು ಭೇಟಿ ನೀಡಿದ ಕಾಲದಲ್ಲಿ ಜನವರಿಯೊಳಗಾಗಿ ನುಸಿರೋಗ ತಡೆಗಟ್ಟಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಆಶ್ವಾಸನೆಯನ್ನು ಕೊಟ್ಟು ಬಂದಿದ್ದರು. ಆದರೆ ಇವೊತ್ತು ಮಾರ್ಚ್ ತಿಂಗಳು ಮುಗಿಯುತ್ತಾ ಬಂದಿದೆ. ಇಲ್ಲಿಯವರೆಗೆ ಅಲ್ಲಿ, ಇಲ್ಲಿ, ಸ್ವಲ್ಪ ಹಣ ಬಿಡುಗಡೆಯಾಗಿರಬಹುದು, ಅದನ್ನು ಬಿಟ್ಟರೆ, ಈ ನುಸಿ ರೋಗವನ್ನು ತಡೆಗಟ್ಟುವ ಯಾವುದೇ ಕೆಲಸವು ಆಗಲಿಲ್ಲ. ಇದು ದಿನಕಳೆದಂತೆ ವಿಷ ಏರಿದ ಹಾಗೆ ವ್ಯಾಪಕವಾಗಿ ಹರಡುತ್ತಾ ಇದೆ. ತುಮಕೂರು ಕೃಷಿ ಮಂತ್ರಿಗಳ ಸ್ವಂತ ಜಿಲ್ಲೆ. ತಾವುಗಳು ಅಲ್ಲಿಗೆ ಹೋದಾಗ ಪರಿಶೀಲನೆ ಮಾಡಿದ್ದೀರಿ, ರೈತರು ತಮ್ಮನ್ನು ಭೇಟಿಯಾಗಿ ತಮ್ಮ ಕಷ್ಟ ಹೇಳಿಕೊಂಡಿದ್ದಾರೆ, ನೀವು ಆಶ್ವಾಸನೆಯನ್ನು ಕೊಟ್ಟಿದ್ದೀರಿ, ಆದರೆ ಅಲ್ಲಿ ಏನಾಗಿದೆ? ಚಿಕ್ಕನಾಯಕನ ಹಳ್ಳಿ, ಗುಬ್ಬಿ, ತಿಪಟೂರು ಪ್ರದೇಶಗಳು ಬಹಳ ಪ್ರಸಿದ್ಧವಾದ ತೆಂಗು ಬೆಳೆಯುವ ಪ್ರದೇಶಗಳು. ಗುಬ್ಬಿ ಕಾಯಿ, ತಿಪಟೂರು ಕಾಯಿ, ಅರಸೀಕೆರೆ ಕಾಯಿ ಎಂದು ಕರೆಯುತ್ತಿರುವುದನ್ನು ನಾವೆಲ್ಲರೂ ಅರಿತಿದ್ದೇವೆ. ಆದರೆ ಇಂಥ ಪ್ರಮುಖ ಪ್ರದೇಶಗಳಲ್ಲಿಯೂ ರೋಗ ತಡೆಗಟ್ಟುವ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ.

ಇಡೀ ದೇಶದಲ್ಲಿಯೇ ತಿಪಟೂರು ತೆಂಗಿನ ಬೆಳೆಗೆ ದೊಡ್ಡ ಮಾರುಕಟ್ಟೆ ಇರುವಂಥಾದ್ದು. ತೆಂಗಿನ ಕೊಬ್ಬರಿಯ ವ್ಯಾಪಾರವು ತಿಪಟೂರಿನಲ್ಲಿ ದೊಡ್ಡ ಪ್ರಮಾಣದಲ್ಲಿ ನಡೆಯುತ್ತದೆ. ಆ ಪ್ರದೇಶಗಳಲ್ಲಿನ ತೆಂಗಿನ ತೋಟಗಳನ್ನು ನೋಡುವುದಕ್ಕೆ ಬಹಳ ಆನಂದವಾಗುತ್ತದೆ. ಮರಗಳ ತುಂಬ ತೆಂಗಿನಕಾಯಿಗಳನ್ನು ನೋಡಿ ಸಂತೋಷಪಡಬೇಕು. ಅದೇರೀತಿಯಲ್ಲಿ ಮೈಸೂರು ಜಿಲ್ಲೆಗೂ ಈ ರೋಗವು ಹಬ್ಬಿದೆ.

5.00 ಪಿ.ಎಂ

ಮೈಸೂರು ತಾಲ್ಲೂಕು ನಂಜನಗೂಡು, ಕೆ.ಆರ್.ನಗರ, ಟಿ.ನರಸೀಪುರ ಹೀಗೆ ನಿಮ್ಮ ಜಿಲ್ಲೆಯಲ್ಲೂ ಕೂಡ ಹರಡಿದೆ. ಹೀಗೆ ಒಟ್ಟಿನಲ್ಲಿ ಮೈಸೂರು, ತುಮಕೂರು ಮತ್ತು ನಮ್ಮ ಜಿಲ್ಲೆ, ನಮ್ಮದು ತೆಂಗಿಗೆ ಹೆಸರಾಗಿರುವ ಜಿಲ್ಲೆಯಲ್ಲ. ಆದರೂ ಕಳೆದ 15-20 ವರ್ಷಗಳಿಂದ ಇದ್ದಿದ್ದರಲ್ಲಿ ನಾಲ್ಕು ಕಾಸು ಬರುತ್ತದೆಂದು ತೆಂಗಿನತೋಪು ಬೆಳೆಸುವ ಕೆಲಸ ನಮ್ಮ ರೈತರೂ ಮಾಡುತ್ತಿದ್ದಾರೆ. ಅಲ್ಲೂ ವ್ಯಾಪಕವಾಗಿ ಎಲ್ಲ ತಾಲ್ಲೂಕುಗಳಲ್ಲಿ ಹರಡಿದೆ. ಅದರಲ್ಲೂ ಪ್ರಮುಖವಾಗಿ ಮಾಲೂರು, ಕೋಲಾರ ತಾಲ್ಲೂಕುಗಳಲ್ಲಿ ಈ ರೋಗ ಹರಡಿರುವುದನ್ನು ನಾವು ಕಾಣುತ್ತೇವೆ. ಇದಕ್ಕೆ ಹತೋಟಿ ಕ್ರಮಗಳೇನು ಎಂಬುದು ಸಹ ಇದೆ. ಕ್ರಿಮಿನಾಶಕಗಳನ್ನು ವ್ಯಾಪಕವಾಗಿ ಬಳಸಬೇಕಾಗುತ್ತದೆ. ಮೊದಲಿನಿಂದಲೂ ಕೂಡ ಮೆಫೆಂಜಿಸಸ್ ಎಂಬ ಬರಿ ಒಣಗಿಸುವ ರೋಗ ಏನಿದೆ ಅದಕ್ಕಾಗಲಿ ಅಥವಾ ನುಸಿಗಾಗಲಿ ಇರುವ ಮನೋಪಟೊಫಾಸ್ ಎನ್ನುವ ಅದನ್ನು ಸಿಸ್ಟಮಿಕ್ ಇನ್‌ಸೆಕ್ಟಿಸೈಡ್ ಎಂದು ನಾವು ಕರೆಯುತ್ತೇವೆ ಅಂದರೆ ಮರದ ಎಲ್ಲ ಭಾಗಗಳೂ ಈ ಕೀಟಗಳಿಗೆ ಅದರ ವಿಷ ಸೇರಿ ಅದನ್ನು ಮುಟ್ಟಿದ ಕ್ರಿಮಿಕೀಟಗಳು ಸಾಯುತ್ತವೆ. ಈ ಔಷಧಿಗಳನ್ನು ಕೆಲವು ಸಲ ಮರದಲ್ಲಿ ರಂಧ್ರ ಮಾಡಿ ಅದರಲ್ಲಿ ಸುರಿದು ಪ್ಲಗ್ ಮಾಡುವ ಅಭ್ಯಾಸ ಕೂಡ ಇದೆ. ಈಗ ಅದನ್ನು ಸಿರಿಂಜ್ ಮೂಲಕವೂ ಮರಗಳಿಗೆ ಕೊಡುತ್ತಾರೆ. ಜೊತೆಗೆ ಮರದ ಉತ್ತಮ ಬೇರುಗಳನ್ನು ವಿಂಗಡಿಸಿ ಆ ಬೇರಿಗೆ ಸಣ್ಣ ಬಾಟಲಿನಲ್ಲಿ ಔಷಧಿ ಹಾಕಿ ಕಟ್ಟುವುದು ಕೂಡ ನಡೆದಿದೆ. ಅದು ಯಶಸ್ವಿಯೂ ಆಗಿದೆ. ಇದು ಒಂದು ಭಾಗವಾದರೆ ಇದಾದಮೇಲೆ ಕೆಲವು ದಿವಸಗಳಾದ ಮೇಲೆ ಗೊಂಚಲುಗಳಿಗೆ ಔಷಧಿಗಳನ್ನು ಸ್ಪ್ರೇ ಮಾಡುವುದು ಕೂಡ ಇದೆ. ಇವೆಲ್ಲವೂ ಹತೋಟಿಯ ವಿಧಾನಗಳು. ಇದೆಲ್ಲವನ್ನೂ ಕೇವಲ ಒಂದು ತೋಟದಲ್ಲಿ ಒಬ್ಬ ರೈತ ಮಾಡಿದರೆ ಸಾಧ್ಯವಿಲ್ಲ. ವ್ಯಾಪಕವಾಗಿ ಇಡೀ ರಾಜ್ಯಾದ್ಯಂತ ಈ ಕೆಲಸವನ್ನು ಮಾಡಬೇಕಾಗುತ್ತದೆ. ಇಡೀ ರಾಜ್ಯವಲ್ಲ ಪಕ್ಕದ ಕೇರಳ, ಆಂಧ್ರ, ತಮಿಳುನಾಡುಗಳೂ ಮಾಡಬೇಕಾಗುತ್ತದೆ. ಇದನ್ನು ಕಂಡತಕ್ಷಣವೇ ನಾನು ಅಂದಿನ ತೋಟಗಾರಿಕಾ ಕಾರ್ಯದರ್ಶಿಗಳನ್ನು ಕರೆದು ಒಂದು ಸಲಹೆ ಕೊಟ್ಟೆ ಪಲ್ಸ್ ಪೋಲಿಯೊ ಕಾರ್ಯಕ್ರಮವನ್ನು ಯಾವ ರೀತಿ ಒಂದೇ ದಿವಸ ದೇಶದ ಎಲ್ಲ ಮಕ್ಕಳಿಗೂ ಲಸಿಕೆ ಪೋಲಿಯೊ

ಕಾರ್ಯಕ್ರಮವನ್ನು ಯಾವ ರೀತಿ ಒಂದೇ ದಿವಸ ದೇಶದ ಎಲ್ಲ ಮಕ್ಕಳಿಗೂ ಲಸಿಗೆ ಹಾಕುವ ಕೆಲಸ ಮಾಡುತ್ತಿದ್ದೇವೆ, ಅದಕ್ಕಾಗಿ ನೀವು ತಾರೀಖನ್ನು ನಿಗದಿಪಡಿಸಿ ಸಂಬಂಧಿಸಿದ ಇಲಾಖೆಯಷ್ಟೇ ಅಲ್ಲ ಇಡೀ ಸರ್ಕಾರದ ವ್ಯವಸ್ಥೆ ಏನಿದೆ ಅದನ್ನು ಇದಕ್ಕೆ ಬಳಸಬೇಕಾಗುತ್ತದೆ. ಇಲ್ಲದೇ ಇದ್ದರೆ ರೈತರನ್ನು ಉಳಿಸಲು ಸಾಧ್ಯವಿಲ್ಲ. ಆದ್ದರಿಂದ ಎಲ್ಲ ಇಲಾಖೆಗಳನ್ನೂ ಸೇರಿಸಿಕೊಂಡು ಇಂಥಿಂಥ ದಿವಸ ರೋಗ ಹರಡಿರುವ ಮರವಿರಬಹುದು, ಹರಡದಿರುವ ಮರವಿರಬಹುದು ಎಲ್ಲಕ್ಕೂ ಸ್ಪ್ರೇ ಮಾಡುವ ಕೆಲಸ ಆಗಬೇಕು. ಇದಕ್ಕೆ ಮಾನ್ಯ ಸಚಿವರು ಅಷ್ಟು ಕೋಟಿ ರೂಪಾಯಿಗಳನ್ನು ಕೊಡುತ್ತೇವೆ, ಇಷ್ಟು ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿ ಈಗ ಕೊಟ್ಟಿರುವುದು ಎಷ್ಟಪ್ಪ ಅಂದರೆ 2.44 ಕೋಟಿ ರೂಪಾಯಿಗಳು ಮಾತ್ರ. ಆದ್ದರಿಂದಲೇ ಈ ಸರ್ಕಾರ ಬಂದಾಗಿನಿಂದ ಹೇಳುತ್ತಿದ್ದೇನೆ. ಇದು ರೈತರ ಪರವಿರುವ ಸರ್ಕಾರವಲ್ಲ ಎಂಬ ನನ್ನ ಅನಿಸಿಕೆ ಇವತ್ತಿನ ಸರ್ಕಾರದ ವರ್ತನೆಯಿಂದ ಸಾಬೀತಾಗುತ್ತಿದೆ. ಇಡೀ ತೆಂಗಿನಮರಗಳು ಸರ್ವನಾಶವಾಗುವ ಪರಿಸ್ಥಿತಿ ರಾಜ್ಯದಲ್ಲಿ ಉಂಟಾಗಿದೆ. ಈಗ 10 ಲಕ್ಷ ಜನರಿಗೆ ಕಸುಬಿಲ್ಲ ಸಾವಿರಾರು ಕುಟುಂಬಗಳು ಅದನ್ನೇ ನಂಬಿರುವುವು ಸರ್ವನಾಶವಾಗುತ್ತವೆ. ಸರ್ಕಾರ ಈ ವಿಚಾರದಲ್ಲಿ ಸಂಪೂರ್ಣ ವಿಫಲವಾಗಿದೆ. ನಾನು ಕೆಲವು ಕಡೆ ಕೇಳಿದೆ ಏನು ಮಾಡುತ್ತಿದ್ದೀರಿ ಎಂದು ಅದಕ್ಕೆ ಕೃಷಿ ತೋಟಗಾರಿಕೆ ಹಾಗೂ ಅರಣ್ಯ ಇಲಾಖೆ ಮೂರನ್ನೂ ಸೇರಿಸಿ ತಂಡಗಳನ್ನಾಗಿ ಮಾಡಿ ಹಳ್ಳಿಗಳಿಗೆ ಕಳಿಸುತ್ತಿದ್ದೇವೆ. ಮತ್ತು ಅದಕ್ಕೆ ಸಂಬಂಧಪಟ್ಟ ಸಾಹಿತ್ಯವನ್ನೂ ಪ್ರಿಂಟ್ ಮಾಡಿಸಿ ಹಂಚಿದ್ದೇವೆ ಎಂದರು. ಬಕಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಎಂಬಂತೆ ಈ ಸಮಸ್ಯೆಯನ್ನು ಎದುರಿಸುತಿದ್ದಾರೆ ವಿನಾ ಈ ಸಮಸ್ಯೆಯ ಗಾತ್ರ, ಅದರ ಮುಂದಿನ ಪರಿಣಾಮ ಏನಿದೆ ಅದರ ಬಗ್ಗೆ ಇವರಿಗೆ ಕಲ್ಪನೆ ಎನ್ನುವುದೇ ಇಲ್ಲ. ಇಂತಹ ಕಲ್ಪನಾ ಶೂನ್ಯ ಸರ್ಕಾರ ಇವತ್ತಿರುವುದರಿಂದ ನಮ್ಮ ರೈತರು ನಾಶದ ಅಂಚಿನಲ್ಲಿದ್ದಾರೆ. ಇವತ್ತು ತೆಂಗನ್ನು ಕಲ್ಪವೃಕ್ಷ ಕಾಮಧೇನು ಎಂದು ಕರೆಯುತ್ತಾರೆ. ಅಂತಹ ತೆಂಗನ್ನು ಬೆಳೆಯುವ ರೈತರು ವಿನಾಶದ ಅಂಚಿನಲ್ಲಿದ್ದಾರೆ. ಇದರ ಬಗ್ಗೆ ಇವತ್ತಲ್ಲದೆ ನಾಳೆಯೂ ಚರ್ಚೆಯಾಗಲಿ. ನಾವು ಏನು ಹೇಳಬೇಕಾಗಿದೆಯೋ ಹಾಗೆ ಮಾಡುವುದು ನಮ್ಮ ಕರ್ತವ್ಯ ಅದನ್ನು ನಾನು ನಿರ್ವಹಿಸುತ್ತಿದ್ದೇನೆ. ಮಾನ್ಯ ರಾಜುಗೌಡರು ಇನ್ನೊಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ಇವರು ಕೊಡುತ್ತಿರುವ ಔಷಧಿ ಕೆಲಸಾನೇ ಮಾಡುತ್ತಿಲ್ಲ. ಆ ಔಷಧಿ ಸರಿಯಲ್ಲವೆಂದು ನಾನು ಹೇಳುವುದಿಲ್ಲ. ನನಗೂ ಅಷ್ಟೋ ಇಷ್ಟೋ ಗೊತ್ತಿದೆ. ಔಷಧಿಗಳು ಸರಿ ಇವೆ, ಅವುಗಳನ್ನು ಲ್ಯಾಬೊರೇಟರಿಗಳಲ್ಲಿ ಟೆಸ್ಟು ಮಾಡಿರುತ್ತಾರೆ. ಈ ಕೀಟಗಳು ಜೀವ ಇರುವಂಥವು, ಇವಕ್ಕೆ ಔಷಧಿಗಳನ್ನು ತಡೆಗಟ್ಟುವ ಶಕ್ತಿಯನ್ನು ವೃದ್ಧಿಪಡಿಸಿಕೊಳ್ಳುವ ಶಕ್ತಿ ಇದೆ. ನಾವು ಯಾವಾಗ ಒಂದೇ ಔಷಧಿ ಸಿಂಪಡಿಸುತ್ತೇವೆ, ಅವಾಗಲೂ ಸರಿಯಾದ ಪ್ರಮಾಣದಲ್ಲಿ ಸಿಂಪಡಿಸಬೇಕು ಅದು ಬಹಳ ಮುಖ್ಯ. ಆದರೆ ಸ್ಥಳೀಯ ಅಧಿಕಾರಿಗಳು ರೈತರಿಗೆ ಸರಿಯಾಗಿ ಸಲಹೆ ಸೂಚನೆ ಕೊಡದೇ ಇರೋ

ಕಾರಣದಿಂದ ಮಿಶ್ರಣ ಸರಿಯಾಗಿ ಮಾಡುವುದು ಆಗಿಲ್ಲ. ಅದರಿಂದ ಔಷಧಿ ಕೆಲಸ ಮಾಡಲಿಲ್ಲ. ಅನೇಕ ಸಂದರ್ಭಗಳಲ್ಲಿ ಗುಣಮಟ್ಟ ಇಲ್ಲದೇ ಇರುವ ಔಷಧಿಗಳು ಸರಬರಾಜಗತಕ್ಕದ್ದು ನಿಜ. ಒಂದುವೇಳೆ ಗುಣಮಟ್ಟ ಇದ್ದರೂ ಕೂಡ ಈ ಔಷಧಿಯನ್ನು ಉಪಯೋಗ ಮಾಡುವ ವಿಧಾನ ಗೊತ್ತಿಲ್ಲದೇ ಇರುವ ಕಾರಣದಿಂದಲೂ ಇದಾಗುತ್ತದೆ. ಹಣ ಖರ್ಚಾಗುತ್ತಿದೆಯೇ ವಿನಃ ಇದರಿಂದ ಆ ರೈತರಿಗೆ ಪ್ರಯೋಜನವಾಗುವುದಿಲ್ಲ. ಕಾರಣವೇನೆಂದರೆ ಸ್ಥಳದಲ್ಲಿರುವ ಆ ಅಧಿಕಾರಿಗಳು ವಿಫಲರಾಗಿರುವುದು ಎಂದು ನನ್ನ ಭಾವನೆ. ಜೊತೆಗೆ ಈ ಔಷಧಿಯನ್ನು ಕೊಡುವ ಸಂದರ್ಭದಲ್ಲೂ ಕೂಡ ಅದನ್ನು ಲ್ಯಾಬೊರೇಟರಿಯಲ್ಲಿ ಪರೀಕ್ಷೆಗೆ ಒಳಪಡಿಸಿ ಅದರ ಗುಣಮಟ್ಟವನ್ನು ಅರಿತು ರೈತರಿಗೆ ವಿತರಣೆ ಮಾಡಬೇಕಾಗಿರುವುದು ಇವರ ಕೆಲಸ. ಈ ಎರಡೂ ಲೋಪಗಳಿಂದ ಇವತ್ತಿನ ದಿವಸ ಅದನ್ನು ಬಳಸಿದರೂ ಕೂಡ ಅದರ ಪೂರ್ಣ ಪ್ರಯೋಜನ ಆ ರೈತರಿಗಾಗಿಲ್ಲ ಎಂದು ವ್ಯಕ್ತವಾಗುತ್ತದೆ. ಹತೋಟಿ ಕ್ರಮಗಳಲ್ಲಿ ಮೂರು-ನಾಲ್ಕು ವಿಧಾನಗಳಿವೆ. ಈಗಾಗಲೇ ವಿಚಾರಿಸಿದಂತೆ ರಾಸಾಯನಿಕಗಳನ್ನು ಬಳಸುವ ಜೊತೆ ಇವತ್ತಿನ ದಿವಸ ಪ್ರಪಂಚದಾದ್ಯಂತ ಕೆಲವು ವಿಧಾನಗಳನ್ನು ವಿಜ್ಞಾನಿಗಳು ಕಂಡುಹಿಡಿದ್ದಾರೆ. ಅದನ್ನು ಇಂಟೆಗ್ರೇಟೆಡ್ ಪೆಸ್ಟ್ ಮ್ಯಾನೇಜ್‌ಮೆಂಟ್ (ಐಪಿಎಂ) ಎಂದು ಕರೆಯುತ್ತಾರೆ. ಅದರಲ್ಲಿ ಈ ರಾಸಾಯನಿಕಗಳನ್ನು ಬಳಸುವುದರ ಜೊತೆಗೆ ಹುಳಗಳನ್ನು ಅಥವಾ ಕೀಟಗಳನ್ನು ಹಿಡಿದು ಸಾಯಿಸತಕ್ಕಂಥದ್ದು ಒಂದು ವಿಧಾನ. ಪರೋಪಜೀವಿಗಳನ್ನು ಮರಗಳಿಗೆ, ಗಿಡಗಳಿಗೆ ಮತ್ತು ಬೆಳೆಗಳಿಗೆ ಬಿಡುವುದು ಮತ್ತೊಂದು ವಿಧಾನ. ಮತ್ತು ಜೀವ ಇರುವುದಕ್ಕೆ ಬಯೊಕಂಟ್ರೋಲ್ಸ್ ಎಂದು ಹೇಳುತ್ತಾರೆ. ಅಂದರೆ ಪರೋಪಜೀವಿಗಳನ್ನು ಬಿಡುವುದು ಹೀಗೆ ಎಲ್ಲಾ ವಿಧಾನಗಳನ್ನು ಕೂಡ ಅನುಸರಿಸಬೇಕಾಗಿರತಕ್ಕ ಅವಶ್ಯಕತೆ ಇದೆ. ಇವುಗಳ್ಯಾವುವು ಬಳಕೆಯಾಗಿಲ್ಲ. ವಿಜ್ಞಾನಿಗಳಿಗೆ ಇದೆಲ್ಲಾ ತಂತ್ರಜ್ಞಾನ ಗೊತ್ತಿದ್ದರೂ ಸಹಾ ಏನೂ ಆಗಿಲ್ಲ. ಇವುಗಳು ಗೊತ್ತಿಲ್ಲದೆ ಏನೂ ಇಲ್ಲ. ನಾವು ಇದ್ದಾಗ ಭೀಕರವಾದ ಪರಿಸ್ಥಿತಿ ಗುಲ್ಬರ್ಗಾ ಜಿಲ್ಲೆಯಲ್ಲಿ ಉಂಟಾಗಿತ್ತು. ರಾತ್ರೋರಾತ್ರಿ ಔಷಧಿ ಪುಡಿಯನ್ನು ಲಾರಿಯಲ್ಲಿ ತಂದು ಅಲ್ಲಿ ಡಂಪ್ ಮಾಡಿ ಹೋಗುತ್ತಿದ್ದರು. ಅಂಥವರ ಮೇಲೆ ಕಠಿಣವಾದ ಕಾನೂನು ಕ್ರಮ ತೆಗೆದುಕೊಂಡಿರುವುದೂ ಉಂಟು. ಅದರ ಬಗ್ಗೆ ನಾವು ಬೇಕಾದರೆ ಚರ್ಚೆ ಮಾಡುವುದಕ್ಕೆ ತಯಾರಿದ್ದೇವೆ. ಎಲ್ಲಾದರೂ ಗುಣ ಮಟ್ಟ ಇಲ್ಲದೇ ಇರುವ ಔಷಧಿಗಳು ಬಳಕೆಯಾದಾಗ ಆ ಸಂಬಂಧಪಟ್ಟ ಅಧಿಕಾರಿಗಳನ್ನು ಜವಾಬ್ದಾರಿಯನ್ನಾಗಿ ಮಾಡಿ ಅವರನ್ನು ಕೂಡ ತನಿಖೆಗೆ ಒಳಪಡಿಸಿ ಅವರ ಮೇಲೂ ಕೇಸ್ ಹಾಕಿಸಿರುವುದೂ ಉಂಟು. ಇದೆಲ್ಲಾ ಮಾಹಿತಿಯನ್ನು ಬೇಕಾದರೆ ನಾನು ಕೊಡುವುದಕ್ಕೆ ಸಿದ್ಧನಿದ್ದೇನೆ. ಇದು ಮಾನ್ಯ ಖರ್ಗೆಯವರಿಗೂ ಕೂಡ ಗೊತ್ತಿದೆ. ನಾನೇ ಗುಲ್ಬರ್ಗಾಕ್ಕೆ ಹೋಗಿ ಯಾರ್‍ಯಾರು ಕಳಪೆ ಗುಣಮಟ್ಟದ ಔಷಧಿಗಳನ್ನು ವಿತರಿಸುತ್ತಾರೆ, ಅವರ ಕೈಗೆ ಬೇಡಿ

ತೋಡಿಸುತ್ತೇವೆಂದು ಹೇಳಿದ್ದು. ಅದರ ಜೊತೆಯಲ್ಲೇ ಅವರು ನನ್ನ ಮೇಲೆ ಪ್ರತಿಭಟನೆ ಮಾಡಿ ಬಂದ್ ಮಾಡಿದ್ದು ತಮಗೆ ಗೊತ್ತಿದೆ ಎಂದು ನಾನು ಭಾವಿಸುತ್ತೇನೆ. ಈ ರೀತಿಯಾದ ಕ್ರಮಗಳನ್ನು ಈ ಸಂದರ್ಭದಲ್ಲೂ ಇವರು ತೆಗೆದುಕೊಂಡಿಲ್ಲ. ನನಗೆ ಮೊದಲು ಏನು ಅನುಮಾನವಿತ್ತು, ಈ ಸರ್ಕಾರ ಎನ್ನುವುದು ಇನ್‌ಫರ್ಮೇಷನ್ ಟೆಕ್ನಾಲಜಿ ಇರಬಹುದು ಅಥವಾ ಕೈಗಾರಿಕೆಗಳಿಗೆ ಆ ಅನುಕೂಲವಿರಬಹುದು. ಮೊನ್ನೆ ಒಂದು ಇನ್‌ಫರ್ಮೇಷನ್ ಟೆಕ್ನಾಲಜಿ ಪಾಲಿಸಿಯ ಪ್ರಚಾರವನ್ನು ಮಾಡಿದ್ದಾರೆ. ಅದೇನೊ ಕೃಷಿ ಬಗ್ಗೆ ಕೂಡ ಮಾಡುತ್ತೇವೆಂದು ಹೇಳುತ್ತಿದ್ದರು. ಅದೇನು ಮಾಡುತ್ತೀರೊ ನೋಡೋಣ. ಧಾರವಾಡ ಡಿಕ್ಲರೇಷನ್ ಕೂಡ ನೋಡಿದ್ದೇನೆ. ಧಾರವಾಡದ ಡಿಕ್ಲರೇಷನ್‌ನನ್ನು ಹುಡುಕಿ. ಹುಡುಕಿ ನಾನು ಅವತ್ತಿನದಿವಸ ನಿಮ್ಮ ಡಿಕ್ಲರೇಷನ್ ಹೊರಗಡೆ ಬರುತ್ತಿದ್ದಂತೆ ನಾನು ಇಲ್ಲಿಗೆ ತರಿಸಿದೆ. ಏನೊ ಅಮೋಘವಾದ ಒಂದು ದೊಡ್ಡ ಕೆಲಸ ಈ ಸರ್ಕಾರದಲ್ಲಿ ಆಗಿದೆ.

ಶ್ರೀ ಡಿ.ಬಿ.ಚಂದ್ರೇಗೌಡ: ಈಗ ಇನ್‌ಫರ್ಮೇಷನ್ ಟೆಕ್ನಾಲಜಿಗೂ ನುಸಿ ಹೊಡೆಯುವುದಕ್ಕೆ ಶುರುವಾಗಿದೆಯಲ್ಲ

ಶ್ರೀ ಸಿ.ಭೈರೇಗೌಡ: ಆ ಇನ್‌ಫರ್ಮೇಷನ್ ಟೆಕ್ನಾಲಜಿಯನ್ನು ನೀವು ನಂಬಿ ತೆಂಗಿನ ಮರಗಳಿಗೆ ನುಸಿ ರೋಗ ಹಬ್ಬಿಸುತ್ತಿರುವವರು ತಾವು.

ಶ್ರೀ ಕಾಗೋಡು ತಿಮ್ಮಪ್ಪ: ಊರಿನಲ್ಲಿರುವ ಕ್ಯಾಮರಾಗಳು, ಊರಿನಲ್ಲಿರುವ ಟಿ.ವಿ.ಗಳು ಎಲ್ಲಾ ಇವರಿಗೆ ಬೇಕು. ಇದು ಬೇರೆಯವರಿಗೆ ಮಾತ್ರ ಬೇಡವೇ?

ಶ್ರೀ ಸಿ.ಭೈರೇಗೌಡ: ನಾನು ಅದನ್ನು ಪೂರ್ತಿಯಾಗಿ ಬಳಕೆ ಮಾಡಬಾರದು ಎಂದು ಯಾವತ್ತೂ ಹೇಳಿಲ್ಲ. ಅತೀ ಆಧುನಿಕವಾದಂಥದ್ದು ಏನೇನು ಇದೆಯೋ ಅದೆಲ್ಲವೂ ಕೂಡ ನಮ್ಮ ಆರ್ಥಿಕಾಭಿವೃದ್ಧಿಗೆ ಬಳಕೆಯಾಗಬೇಕು. ನಾನು ಇನ್‌ಫರ್ಮೆಷನ್ ಟೆಕ್ನಾಲಜಿ ಬಳಕೆ ಮಾಡಬಾರದು, ಕಂಪ್ಯೂಟರನ್ನು ನೀವು ಉಪಯೋಗಿಸಬಾರದು ಎಂದು ನಾನು ಎಲ್ಲಿಯೂ ಹೇಳಿಲ್ಲ. ಅದೆಲ್ಲಾ ಕೂಡ ಬಳಕೆಯಾಗಬೇಕು. ಅದರ ಜೊತೆಯಲ್ಲಿ ಮತ್ತೊಂದು ಅಂಗವಾದಂಥ ಕೃಷಿರಂಗ ಇದೆಯಲ್ಲ, ಇದನ್ನು ಕೂಡ ತಾವು ಹಿಂದಕ್ಕೆ ಸರಿಸಬಾರದು. ಆ ತಪ್ಪು ಈ ದೇಶದಲ್ಲಿ ಮೊದಲನೇ ಪಂಚವಾರ್ಷಿಕಯೋಜನೆ ಪ್ರಾರಂಭವಾಯಿತಲ್ಲ, ಆಗಿನಿಂದ ಪ್ರಾರಂಭವಾಗಿ ಇಲ್ಲಿಯತನಕವೂ ಆ ತಪ್ಪನ್ನು ಮಾಡುತ್ತಾ ಬಂದ ಕಾರಣದಿಂದಲೇ ಇವತ್ತು ರೈತರ ಪರಿಸ್ಥಿತಿ ಚಿಂತಾಜನಕವಾಗಿರತಕ್ಕಂಥದ್ದು. ಆ ಮೊದಲು ಮಾಡಿದ ತಪ್ಪನ್ನು ಈಗಲೂ ಕೂಡ ಮಾಡುವುದಕ್ಕೆ ನೀವು ಪ್ರಯತ್ನಪಡುತ್ತಿದ್ದೀರಿ. ಇದಕ್ಕೆ ನನ್ನ ವಿರೋಧ ಇದೆ ಎನ್ನುವುದನ್ನು ಆ ದೃಷ್ಟಿಕೋನದಿಂದ ಈ ಮಾತನ್ನು ನಾನು ಬಳಸುತ್ತಿದ್ದೇನೆಯೇ ವಿನಹಾ

ನೀವು ಕಂಪ್ಯೂಟರ್‌ನ್ನು ಬಳಕೆ ಮಾಡಬೇಡಿ, ಇನ್‌ಫರ್ಮೇಷನ್ ಟೆಕ್ನಾಲಜಿಯನ್ನು ತರಲೇಕೂಡದು ಎಂದು ಹೇಳುವಷ್ಟು ಮೂರ್ಖ ನಾನಲ್ಲವೆಂದು ತಮಗೆ ಸ್ಪಷ್ಟಪಡಿಸುತ್ತೇನೆ. ಈಗಲಾದರೂ ಕೂಡ ಸರ್ಕಾರ ಎಚ್ಚೆತ್ತುಕೊಳ್ಳಬೇಕಾಗಿರುವುದು ಇದರಲ್ಲಿ ಎಲ್ಲಾ ಇಲಾಖೆಗಳನ್ನು ತೊಡಗಿಸಿ. ಇದು ಬಹಳ ಮಾರಕವಾದ ರೋಗವಾಗುತ್ತದೆ. ಕೇರಳದಲ್ಲಿ ಬೇರಿಗೆ ಒಂದು ರೋಗವಿದೆ. ಅದನ್ನು ರೂಟ್‌ವಿಲ್ಟ್ ಎಂದು ಕರೆಯುತ್ತಾರೆ. ನಾನು ಕೇರಳಕ್ಕೂ ಕೂಡ ಹೋಗಿ ನೋಡಿಕೊಂಡುಬಂದಿದ್ದೇನೆ. ಆ ರೂಟ್‌ವಿಲ್ಟ್ ಎನ್ನುವ ರೋಗ ಬಂದರೆ ಏನಾಗುತ್ತದೆ ಎಂದರೆ ಮನುಷ್ಯನಿಗೆ ತೊನ್ನು ರೋಗ ಬಂದಾಗ ನಮ್ಮ ಕಡೆ ಅದನ್ನು ದೊಡ್ಡರೋಗವೆನ್ನುತ್ತಾರೆ. ಅದು ಬಂದಾಗ ಯಾವರೀತಿ ಬೆರಳು ಮತ್ತೊಂದು ಎಲ್ಲಾ ಕೂಡ ಅವಷ್ಟಕ್ಕೆ ಅವೇ ಶ್ರಿಂಕ್ ಆಗುತ್ತವೆ, ಅದೇ ರೀತಿ ತೆಂಗಿನ ಮರದಲ್ಲಿರುವ ಗರಿಗಳು ಇರುತ್ತವಲ್ಲಾ, ಅವೆಲ್ಲಾ ಕೂಡ ಕ್ರಮೇಣ ಸಣ್ಣಸಣ್ಣದಾಗಿ ಕಡೆಗೆ ಇಳುವರಿ ಕೂಡ ಕಡಿಮೆಯಾಗಿ ಕೊನೆಗೆ ಮರವೂ ಕೂಡ ಸತ್ತು ಹೋಗುತ್ತದೆ. ಆ ರೋಗ ಇವತ್ತು ಸಣ್ಣಪ್ರಮಾಣದಲ್ಲಿ ಪ್ರಾರಂಭವಾಗಿರುವುದು ಕೇರಳದ ಮೂರು-ನಾಲ್ಕು ಜಿಲ್ಲೆಗಳಲ್ಲಿ ಇವತ್ತಿನದಿವಸ ಹರಡುತ್ತಿದೆ. ಅದಕ್ಕೆ ಔಷಧಿನೆ ಕಂಡುಹಿಡಿಯುವುದಕ್ಕಾಗಿಲ್ಲ. ದೊಡ್ಡದೊಡ್ಡ ವಿಜ್ಞಾನಿಗಳು ಕೂಡ ಇದರ ಬಗ್ಗೆ ಕೆಲಸ ಮಾಡುತ್ತಿದ್ದಾರೆ. ಇಲ್ಲಿಯವರೆಗೂ ಏನೂ ಮಾಡುವುದಕ್ಕಾಗಲಿಲ್ಲಾ. ಅದೇ ರೀತಿ ಬಂದಿರುವ ನುಸಿರೋಗವೂ ಸಹಾ ವ್ಯಾಪಕವಾಗಿ ಇವತ್ತಿನದಿವಸ ರಾಜ್ಯದಲ್ಲಿ ಹರಡಿ ನಮ್ಮ ರೈತರ ಆರ್ಥಿಕ ಪರಿಸ್ಥಿತಿಗೆ ಕುಂದುಂಟು ಮಾಡುವ ಪರಿಸ್ಥಿತಿ ಇದೆ. ಆದ್ದರಿಂದ ಈಗಲಾದರೂ ಕೂಡ ಸರ್ಕಾರ ಎಚ್ಚೆತ್ತುಕೊಂಡು ಎಲ್ಲಾ ಇಲಾಖೆಗಳನ್ನು ಇದರಲ್ಲಿ ತೊಡಗಿಸಬೇಕು. ಇದಕ್ಕೆ 2.44 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆಂದರೆ ನಾನು ಆಗಲೇ ಹೇಳಿದಂತೆ 'ಬಕಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ' ಯಾದಂತಾಗಿ ಅದು ಸಾಕಾಗುವುದಿಲ್ಲ. ಅದು ಎರಡು ಕೋಟಿಯಾಗುತ್ತದೋ, ಇಪ್ಪತ್ತು ಕೋಟಿಯಾಗುತ್ತದೋ, ಇವತ್ತು ರೈತನನ್ನು ರಕ್ಷಣೆ ಮಾಡಬೇಕಾಗಿದ್ದರೆ 200-300 ಕೋಟಿ ರೂಪಾಯಿಗಳನ್ನು ಖರ್ಚುಮಾಡುವುದಕ್ಕೆ ಸರ್ಕಾರ ಮುಂದೆ ಬರಬೇಕು. ರೈತರನ್ನು ಉಳಿಸಬೇಕಾಗಿರುವುದು ಇಂದಿನ ಆದ್ಯಕರ್ತವ್ಯ. ಮತ್ತೆ ಕೆಲವು ಸಾರ್ವಜನಿಕ ಸಂಸ್ಥೆಗಳು ಕೂಡ ಇದರಲ್ಲಿವೆ. ಕೃಷಿ ವಿಶ್ವವಿದ್ಯಾನಿಲಯ ಇದೆ. ಇವರೆಲ್ಲರನ್ನೂ ಕೂಡ ಬಳಸಿಕೊಂಡು ಈ ರೋಗವನ್ನು ಹತೋಟಿ ಮಾಡತಕ್ಕದ್ದು. ನಾನು ಹೇಳಿದಂತೆ ಐಪಿಎಂ ಕಾರ್ಯಕ್ರಮವನ್ನು ಕೂಡ ಜಾರಿಗೆ ತಂದು ಎಷ್ಟೇ ಹಣ ಖರ್ಚಾದರೂ ಕೂಡ ಈ ರೋಗವನ್ನು ಹತೋಟಿ ಮಾಡುವ ಕೆಲಸ ತತ್‌ಕ್ಷಣ ಆಗಬೇಕು. ನೀವು ಒಂದು ದಿವಸ ಕಳೆದರೆ ನೂರು ಮರ ಜಾಸ್ತಿಯಾಗಬಹುದು, ಲಕ್ಷ ಮರಗಳು ಜಾಸ್ತಿಯಾಗಬಹುದು. ಅವುಗಳು ಈ ರೋಗಕ್ಕೆ ತುತ್ತಾಗಬಹುದು. ಇವೆಲ್ಲವನ್ನೂ ಕೂಡ ಗಮನಿಸಬೇಕಾದುದು ಅತ್ಯಾವಶ್ಯಕ. ಇಲ್ಲದಿದ್ದರೆ ನೀವು ರೈತರನ್ನು ಆರ್ಥಿಕವಾಗಿ

ತುಳಿಯುವ ಕೆಲಸವಾಗುತ್ತದೆ. ಇದರ ಬಗ್ಗೆ ಎಚ್ಚೆತ್ತುಕೊಳ್ಳಬೇಕಾಗಿದೆ. ಹಣ ಎಷ್ಟೇ ಖರ್ಚಾದರೂ ಚಿಂತೆ ಇಲ್ಲ. ಇದರ ಬಗ್ಗೆ ವ್ಯಾಪಕವಾಗಿ ಪ್ರಚಾರ ಮಾಡಿ ಎಂದು ಸಲಹೆಯನ್ನು ಸರ್ಕಾರಕ್ಕೆ ಕೊಡುತ್ತಾ ಇಷ್ಟೊಂದು ವೇಳೆಯನ್ನು ಕೊಟ್ಟಿದ್ದಕ್ಕೂ ತಮಗೂ ಕೂಡ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಸನ್ಮಾನ್ಯ ಉಪಾಧ್ಯಕ್ಷರೆ, ಇತ್ತೀಚಿನ ವರ್ಷಗಳಲ್ಲಿ ರೋಗಗಳು ಮರಗಳಿಗೆ ಬರುತ್ತದೆ ಎನ್ನುವುದಕ್ಕಿಂತ ಹೆಚ್ಚಾಗಿ ಬೆಳೆ ಬೆಳೆಯತಕ್ಕಂಥ ರೈತರ ಬದುಕಿಗೆ ರೋಗ ಹಬ್ಬಿದೆಯೆಂದು ನಾವು ಹೇಳಬೇಕಾಗುತ್ತದೆ. ಕಾರಣವಿಷ್ಟೆ: ಸುಮಾರು 15-20 ವರ್ಷಗಳ ಕಾಲ ರೈತರುಗಳು ಬೆವರು ಸುರಿಸಿ ಬೆಳೆದಿರತಕ್ಕಂಥ ಈ ತೆಂಗಿನ ಬೆಳೆ ಇವೊತ್ತು 'ಕೈಗೆ ಬಂದದ್ದು ಬಾಯಿಗಿಲ್ಲ' ಎನ್ನುವ ಗಾದೆ ಪ್ರಕಾರ ಇತ್ತೀಚಿನ ವರ್ಷಗಳಲ್ಲಿ ತೆಂಗು ಬೆಳೆಗೆ ತಗುಲಿರುವ ಮಾರಕವಾಗಿರುವ ಈ ನುಸಿರೋಗದಿಂದ ಮಾರುಕಟ್ಟೆಯಲ್ಲಿ ಆಗತಕ್ಕಂಥ ಏರುಪೇರುಗಳಿಂದಾಗಿ ರೈತರ ಬದುಕು ಅಸಹನೀಯವಾಗಿದೆ. ಹಿರಿಯ ಸದಸ್ಯರಾದ ಮಾನ್ಯ ಭೈರೇಗೌಡರು ತೆಂಗು ಬೆಳೆಯ ನುಸಿರೋಗದ ಬಗ್ಗೆ ಮಾತನಾಡುತ್ತಾ ಈಗಾಗಲೇ ಅನೇಕ ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ನಾನು ಅದನ್ನು ಪುನಃ ಚರ್ವಿತ ಚರ್ವಣಗೊಳಿಸಲು ಹೋಗುವುದಿಲ್ಲ. ತೆಂಗು ಅತ್ಯಂತ ಪ್ರಮುಖವಾಗಿರುವ ಈ ರಾಜ್ಯದ ಆರ್ಥಿಕ ಬೆಳೆಯಾಗಿದ್ದು, ಈ ಬೆಳೆಗೆ ಇತ್ತೀಚಿನ ವರ್ಷಗಳಲ್ಲಿ ಕಪ್ಪುತಲೆ ಹುಳು, ರಸ ಸೋರುವ ರೋಗ, ಸುಳಿ ಕೊಳೆಯುವ ರೋಗ ಬಾಧಿಸುತ್ತಿರುವುದರಿಂದ ಸಾಕಷ್ಟು ರೈತರು ಕಂಗೆಟ್ಟಿದ್ದಾರೆ. ಸುಮಾರು ಎರಡು ತಿಂಗಳ ಹಿಂದಿನಿಂದ ಯಾವುದೇ ಪತ್ರಿಕೆಯನ್ನು ತೆಗೆದು ನೋಡಿದರೂ ಕೂಡ ನುಸಿರೋಗಕ್ಕೆ ಸಂಬಂಧಪಟ್ಟಿರುವ ಸುದ್ದಿಗಳೇ ಬರುತ್ತಿದೆ. ಕೋಟಿಗಟ್ಟಲೆ ಆಶ್ವಾಸನೆಗಳು, ಧೈರ್ಯ, ರೈತರ ಅಳಲು, ಇವೆಲ್ಲವೂ ಕೂಡ ಚಿತ್ರಸಹಿತವಾಗಿ ಪತ್ರಿಕೆಗಳಲ್ಲಿ ಬರುತ್ತಿದೆ. ಇತ್ತೀಚೆಗಂತೂ ರಾಜ್ಯದಲ್ಲಿರುವ ರೈತ ವರ್ಗ ಸಂಪೂರ್ಣವಾಗಿ ಕಂಗಾಲಾಗಿದೆ. ರಾಜ್ಯದ 14 ಜಿಲ್ಲೆಗಳಲ್ಲಿ ಈಗಾಗಲೇ ಈ ರೋಗ ವ್ಯಾಪಕವಾಗಿ ಹರಡಿರುವುದಲ್ಲದೆ, ಅತ್ಯಂತ ಪ್ರಮುಖವಾಗಿರುವ ನಾರು ಉದ್ಯಮ, ಎಣ್ಣೆ ಉದ್ಯಮ ಹಾಗೂ ವಿಶೇಷವಾಗಿ ರಫ್ತು ಆಗತಕ್ಕಂಥ ಕೊಬ್ಬರಿಯ ಆದಾಯದ ಮೇಲೆ ಭಾರಿ ಹೊಡೆತ ಬಿದ್ದಿದ್ದು ಇದರ ಪರಿಣಾಮ ರಾಜ್ಯ ಸರ್ಕಾರ ಮತ್ತು ಜನತೆಯ ಮೇಲಾಗುತ್ತಿದೆ. ಈ ರೋಗ ಹತೋಟಿಗೆ ಬರುತ್ತಿಲ್ಲ. ಇದರ ಬಗ್ಗೆ ಅನಾವಶ್ಯಕವಾಗಿ ಘೋಷಣೆ ಮಾಡಿ ರೈತರಿಗೆ ಒಂದಿಷ್ಟು ಧೈರ್ಯ ತುಂಬಬಹುದು. ಆದರೆ, ವಾಸ್ತವಿಕವಾಗಿ ನಾವು ರೈತರುಗಳ ಬಳಿಗೆ ಹೋಗಿ ವಿಚಾರಿಸಿದಾಗಲೂ ನುಸಿರೋಗ ಬಾಧಿತ ತೆಂಗಿನ ಮರಗಳಿಗೆ ಅವರು ಯಾವುದೇ ರಾಸಾಯನಿಕಗಳನ್ನು ಸಿಂಪಡಿಸಿದಾಗಲೂ ಕೂಡ ಇದುವರೆವಿಗೆ ರೋಗ ನಿಯಂತ್ರಣ ಬರುತ್ತಿಲ್ಲ. ಇದನ್ನು ನಾವುಗಳೆಲ್ಲರೂ ಅರ್ಥೈಸಿಕೊಂಡು ವಿಶೇಷವಾಗಿ ಸರ್ಕಾರ ಇತ್ತ ಮುತುವರ್ಜಿ

ವಹಿಸಬೇಕಾಗುತ್ತದೆ. ಈ ಕುರಿತು ನಾವು ನಿಮ್ಮನ್ನು ಟೀಕಿಸುವುದಾಗಲೀ ಅಥವಾ ನೀವೇ ಈ ರೋಗವನ್ನು ತಂದು ಹರಡಿದ್ದೀರಿ ಎಂದು ಹೇಳುತ್ತಿಲ್ಲ. ಆದರೆ, ಇಷ್ಟೊಂದು ದೊಡ್ಡ ಆಘಾತವಾಗಿರುವ ಸಂದರ್ಭದಲ್ಲಿ ಸರ್ಕಾರ ಯಾವ ರೀತಿಯಾದ ತನ್ನ ಕಳಕಳಿ ವ್ಯಕ್ತಪಡಿಸಿ ನೆರವನ್ನು ನೀಡಬೇಕೆಂಬ ಬಗ್ಗೆ ನಿಮಗ್ಯಾರಿಗೂ ಗಮನವಿಲ್ಲ. ಈ ಕಳಕಳಿ ಹಾಗೂ ಕಾಳಜಿಯನ್ನು ಸರ್ಕಾರ ತೋರಿಸದೆ ಹೋದರೆ ರೈತರು ಮತ್ತಷ್ಟು ಸಂಕಷ್ಟಕೊಳ್ಳಗಾಗುತ್ತಾರೆ. ಹಿಂದೆಲ್ಲಾ ಸಾಕಷ್ಟಾಗಿದೆ. ರೈತರು ಬೆಳೆದಂಥ ಮೆಣಸಿಕಾಯಿಗೆ ಮಾರುಕಟ್ಟೆಯಲ್ಲಿ ಸೂಕ್ತ ಧಾರಣೆ ಸಿಗದೆ ಹೋದಾಗ ರಸ್ತೆ ಮೇಲೆ ಚೆಲ್ಲಿ ತಮ್ಮ ಪ್ರತಿಭಟನೆ ವ್ಯಕ್ತಪಡಿಸಿರುವಂತೆಯೇ ಟೊಮ್ಯಾಟೋ ಬೆಳೆಯನ್ನು ಸಹ ಮಂತ್ರಿಗಳ ಮನೆ ಬಾಗಿಲ ಮುಂದೆ ತಂದು ಸುರಿದು ತಾವು ಬೆಳೆದಂಥ ಬೆಳೆಗೆ ಸೂಕ್ತ ಧಾರಣೆ ಒದಗಿಸಿಕೊಡುವಂತೆ ಪ್ರತಿಭಟಿಸಿ ಆಗ್ರಹಿಸಿರುವುದು ತಮಗೆಲ್ಲಾ ಗೊತ್ತಿದೆ. ಅದೇ ರೀತಿ ಇವೊತ್ತು ತೆಂಗು ಬೆಳೆದಿರುವಂಥ ರೈತರ ನೆರವಿಗೆ ಸರ್ಕಾರ ಧಾವಿಸದಿದ್ದರೆ ಅವರೆಲ್ಲರೂ ವಿಧಾನಸೌದ ಬಾಗಿಲಿಗೆ ಬಂದು ಕುಳಿತು ಪ್ರತಿಭಟಿಸುವಂಥ ದಿನ ಬಹಳ ದೂರವೇನಿಲ್ಲ. ಏಕೆಂದರೆ, ಅವರ ಸಾವು-ಬದುಕಿನ ಪ್ರಶ್ನೆ ಇದಾಗಿರುವುದರಿಂದ ಅನಾವಶ್ಯಕವಾಗಿ ಕಾಲ ವಿಳಂಬ ಮಾಡದೆ ಅವರ ನೆರವಿಗೆ ಸರ್ಕಾರ ಧಾವಿಸಬೇಕೆಂಬುದು ನಮ್ಮ ಮನವಿಯಾಗಿದೆ. ನುಸಿರೋಗ ಬಾಧಿತ ತೆಂಗಿನ ಮರಗಳಿಗೆ ರಾಸಾಯನಿಕಗಳನ್ನು ಸಿಂಪಡಿಸಬೇಕೆಂದು ನಿಮ್ಮ ಇಲಾಖೆಯ ಅನೇಕ ವರಿಷ್ಠ ಅಧಿಕಾರಿಗಳು ಸಲಹೆ-ಸೂಚನೆಗಳನ್ನು ಕೊಡುತ್ತಿದ್ದಾರೆ. ಅವರ ಸೂಚನೆ ಪ್ರಕಾರ ಮಾನೋಕ್ರೋಟಪಾಸ್ ಔಷಧಿಯನ್ನು ತೆಂಗಿನ ಮರದ ಬೇರಿಗೆ ಪಾಲಿಥಿನ್ ಚೀಲದಲ್ಲಿ ಹಾಕಿ ಕಟ್ಟಿದ ಹದಿನೈದು ದಿವಸಗಳ ನಂತರ ಡೈಕೋಫಾಲ್ ಅಥವಾ ಈಥೈಲ್ ಔಷಧಿಯನ್ನು ಬಲಿತ ತೆಂಗಿನ ಕಾಯಿ ಮತ್ತು ಹೂಗಳಿಗೆ ಸಿಂಪಡಿಸಬೇಕಂತೆ. ಇದರ ಪರಿಣಾಮ ಇಡೀ ಮರ ವಿಷಮಯವಾಗಿ ರೋಗಕ್ಕೆ ಕಾರಣವಾದ ನುಸಿಗಳನ್ನು ಕೊಲ್ಲುತ್ತದೆಂದು ಹೇಳುತ್ತಾರೆ. ನುಸಿಗಳನ್ನು ಕೊಲ್ಲುವುದರಲ್ಲಿ ಆ ಔಷಧಿ ವಿಫಲವಾದರೂ ಮನುಷ್ಯರನ್ನು ಕೊಲ್ಲುವುದರಲ್ಲಂತೂ ಸಫಲವಾಗುತ್ತಿದೆ! ಇವೊತ್ತು ಮಾರುಕಟ್ಟೆಗೆ ಬಂದಿರುವ ಎಳನೀರು ವ್ಯಾಪಾರವಾಗುತ್ತಿಲ್ಲ, ರಾಶಿ ರಾಶಿಯಾಗಿ ಕೊಳೆಯುತ್ತಾ ಬಿದ್ದಿದೆ. ಏಕೆಂದರೆ, ಪತ್ರಿಕೆಗಳಲ್ಲಿ ವರದಿಯಾಗಿರುವ ಸುದ್ದಿ ಹಾಗೂ ರೋಗ ಬಾಧಿತ ಮರಗಳಿಗೆ ಸಿಂಪಡಿಸಿರುವ ಎರಡೂ ರಾಸಾಯನಿಕಗಳ ಬಗ್ಗೆ ಏನು ಹೇಳಿದ್ದಾರೆ ಅನೇಕ ದೇಶಗಳಲ್ಲಿ ಈ ಔಷಧಿಗಳನ್ನು ಈಗಾಗಲೇ ನಿಷೇಧಿಸಿದ್ದಾರೆ. ದೆಹಲಿಯಲ್ಲಿರುವ ಭಾರತೀಯ ಕೃಷಿ ಅನುಸಂಧಾನ್ ಪರಿಷತ್ತು ಮನೊಕ್ರೋಟಾಪಾಸ್ ಔಷಧಿಯು ಆರೋಗ್ಯಕ್ಕೆ ಅಪಾಯಕಾಯಾಗಿದೆಯೆಂದು ನಿಷೇಧಿಸಲು ಶಿಫಾರಸ್ಸು ಮಾಡಿದೆ. ಆದರೂ ಇಂತಹ ಔಷಧಿಯನ್ನು ನುಸಿರೋಗ ಬಾಧಿತ ತೆಂಗಿನ ಮರಗಳಿಗೆ ಸಿಂಪರಣೆ ಮಾಡಬೇಕೆಂದು ಹೇಳುತ್ತಿರುವುದರಿಂದ ಇದರ ಪರಿಣಾಮ ಏನಾಗುತ್ತಿದೆಯೆಂದು ಜನರಿಗೆ ಗೊತ್ತಿದೆ. ಎಳನೀರಿನ ಬಗ್ಗೆ ತಮಗೆಲ್ಲರಿಗೂ

ಗೊತ್ತಿರುವಂತೆ ಈ ಹಿಂದೆ ಆಸ್ಪತ್ರೆಗಳಲ್ಲಿ ರೋಗಿಗೆ ಎಳನೀರನ್ನು ಡ್ರಿಪ್ ಕೊಡುವ ಮೂಲಕ ಚುಚ್ಚುತ್ತಿದ್ದರು. ಈಗ ಬೇಸಿಗೆ ಕಾಲವಾಗಿರುವುದರಿಂದ ಸಾಕಷ್ಟು ಜನರು ಎಳನೀರನ್ನು ಕುಡಿಯುವಂಥ ಪರಿಸ್ಥಿತಿ ಇರುವುದರಿಂದ, ತೆಂಗು ಬೆಳೆಗೆ ತಗುಲಿರುವ ನುಸಿರೋಗದ ಅರಿವಿಲ್ಲದ ಅನೇಕ ಅಮಾಯಕ ಜನರು ಇವೊತ್ತು ಎಳನೀರನ್ನು ಕುಡಿಯುತ್ತಿದ್ದಾರೆ. ರೋಗಬಾಧಿತವಾಗಿರುವ ಎಳನೀರನ್ನಾಗಲೀ, ಬಲಿತ ಕಾಯಿಯನ್ನಾಗಲೀ ಸುಮಾರು ನಲವತ್ತು ದಿವಸಗಳ ಕಾಲ ಕೀಳಬಾರದೆಂದು ರೈತರುಗಳಿಗೆ ಸೂಚನೆಯಿದ್ದಾಗ್ಯೂ ಕೂಡ ಈ ಸೂಚನೆಯ ಅರಿವಿದ್ದೋ ಅರಿವಿಲ್ಲದೆಯೋ ಅವರ ಕೈಯಲ್ಲಿ ಕಾಸಿಲ್ಲದಿರುವುದರಿಂದ ಏನಾದರಾಗಲಿ ಎಂದುಕೊಂಡು ಬಿದ್ದು ಉದುರಿಹೋಗುವ ತೆಂಗಿನಕಾಯಿಗಳನ್ನು ಮರಗಳಿಂದ ಕಿತ್ತು ಮಾರುಕಟ್ಟೆಗೆ ತಂದು ಹಾಕುತ್ತಿದ್ದಾರೆ. ಈ ಪರಿಸ್ಥಿತಿಯಿಂದಾಗಿ ಎಳನೀರು ಕುಡಿಯುವ ಅಮಾಯಕ ಜನರು ಮತ್ತು ಮಾರಾಟ ಮಾಡುತ್ತಿರುವ ರೈತರುಗಳ ಮೇಲೆ ಸಾಕಷ್ಟು ರೀತಿಯಲ್ಲಿ ದುಷ್ಪರಿಣಾಮುಗಳುಂಟಾಗುತ್ತಿದೆ. ನಲವತ್ತು ದಿವಸಗಳ ಕಾಲ ರಾಸಾಯನಿಕ ಔಷಧಿ ಸಿಂಪಡಿಸಿದ ಪರಿಣಾಮ ಇಡೀ ವೃಕ್ಷ ವಿಷವಾಗಿ ನಿಲ್ಲತಕ್ಕಂಥ ಸಂದರ್ಭದಲ್ಲಿ ಇದನ್ನು ಆಹಾರವಾಗಿ ಉಪಯೋಗಿಸತಕ್ಕಂಥ ಜನರ ಪಾಡೇನು? ಇದರ ಬಗ್ಗೆ ಸರ್ಕಾರ ಯೋಚನೆ ಮಾಡಿ ವಾಸ್ತವಿಕ ಅಂಶದ ನೆಲೆಗಟ್ಟಿನ ಮೇಲೆ ತಕ್ಷಣವೇ ಪರಿಹಾರೋಪಾಯಗಳನ್ನು ಕಂಡುಕೊಳ್ಳಬೇಕಾಗುತ್ತದೆ. ಆದುದರಿಂದ, ರೋಗಬಾಧಿತ ಎಳನೀರಿನ ಸೇವನೆ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟು ಮಾಡುವುದರಿಂದ ತೆಂಗಿನ ಮರಗಳನ್ನು ಕಡಿದು ಹಾಕಿಸಿ ಅದಕ್ಕೆ ಆಗತಕ್ಕಂಥ ಸಂಪೂರ್ಣ ವೆಚ್ಚವನ್ನು ಸರ್ಕಾರವೇ ರೈತರಿಗೆ ಕೊಡಿಸಬೇಕು. ಔಷಧಿ ಸಿಂಪರಣೆ ಮತ್ತು ಔಷಧಿ ಕೊಳ್ಳುವಿಕೆ, ಇವೆರಡೂ ಕೂಡ ಅತ್ಯಂತ ವೆಚ್ಚದಾಯಕವಾಗಿರುವುದರಿಂದ ರೈತರುಗಳಿಗೆ ಔಷಧಿಗಳನ್ನು ಉಚಿತವಾಗಿ ಕೊಡತಕ್ಕಂಥ ವ್ಯವಸ್ಥೆಯನ್ನು ಇವೊತ್ತು ಸರ್ಕಾರ ಮಾಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ವಿಶೇಷವಾಗಿ ಹಣಕಾಸಿನ ನೆರವನ್ನು ನೀಡಬೇಕು. ಸರ್ಕಾರದವರು ಅನಾವಶ್ಯಕವಾದ ಧೋರಣೆ ಮಾಡುತ್ತಾರೆ. 'ಇವೊತ್ತು ಸರ್ಕಾರ ಹಣಕಾಸು ಒದಗಿಸಿಕೊಟ್ಟಿದೆ, ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ಟಾಸ್ಕ್ ಫೋರ್ಸ್ ಸಮಿತಿಗಳನ್ನು ರಚಿಸಲಾಗಿದೆ, ಜೊತೆಗೆ ಆರೋಗ್ಯ ಮತ್ತು ಇತರ ಇಲಾಖೆಗಳವರನ್ನೂ ಕೂಡ ಇದರಲ್ಲಿ ಇನ್‌ವಾಲ್ವ್ ಮಾಡಿದ್ದೇವೆಂದು ಬೇಕಾದಷ್ಟು ಹೇಳಬಹುದು. ಸರ್ಕಾರ ಇವೊತ್ತು ಕೊಡುತ್ತಿರುವ ಹಣ ಕೂಡ ಯಾರಿಗೋ, ಎಲ್ಲಿಗೋ ಹೋಗಿ ಮುಟ್ಟುತ್ತಿದೆ, ಇದರ ಬಗ್ಗೆ ತಾವು ಯೋಚಿಸಬೇಕು. ಮಾನ್ಯ ತೋಟಗಾರಿಕೆ ಸಚಿವರು ಸದನದಲ್ಲಿರುವುದರಿಂದ, ಉದಾಹರಣೆಗೆ ಹೇಳುವುದಾದರೆ, ನಿಮ್ಮ ಇಲಾಖೆಯಲ್ಲಿರುವ ಸಾಂಬಾರು ಬೆಳೆ ಯೋಜನೆಯಲ್ಲಿ ಮೊನ್ನೆ ದಿವಸ ಶುಂಠಿ ಕೊಂಡರು. ಸಮಾಜ ಕಲ್ಯಾಣ ಸಚಿವರಾದ ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಗೊತ್ತಿರುವಂತೆ ನಮ್ಮ ಮತ್ತು ಅವರ

ಊರಿನಲ್ಲಿಯೇ ಶುಂಠಿ ಬೆಳೆಯುವುದು. ಇವೊತ್ತು ಒಂದು ಕ್ವಿಂಟಾಲ್ ಶುಂಠಿಗೆ 1,500 ರೂಪಾಯಿಗಳಿದ್ದು, ಸರ್ಕಾರದವರು 4,200 ರೂಪಾಯಿಗಳನ್ನು ಖರ್ಚು ಮಾಡಿ ಶುಂಠಿಯನ್ನು ಕೊಂಡುಕೊಂಡು ಬಂದು ರೈತರಿಗೆ ಕೊಡುತ್ತಿದ್ದಾರೆ. ಇವೊತ್ತು ಸರ್ಕಾರದ ದುಡ್ಡು ಹೀಗೆ ಹೋಗುತ್ತಿದೆಯೇ ಹೊರತು ರೈತರನ್ನು ತಲುಪುತ್ತಿಲ್ಲ. ತೋಟಗಾರಿಕೆ ಇಲಾಖೆಯಲ್ಲಿ ಅಪ್ರಾಮಾಣಿಕ ಅಧಿಕಾರಿಗಳು ಇರುವರೆಗೆ ನೀವು ಕೊಟ್ಟಂಥ ಹಣ ಅಲ್ಲಿನ ರೈತರಿಗೆ ತಲುಪುವುದಿಲ್ಲ. ಇದರ ಬಗ್ಗೆ ಎಚ್ಚರಿಕೆಯಿಂದ ನೋಡಿ ಪ್ರಾಮಾಣಿಕವಾಗಿ ಯೋಚಿಸಬೇಕಾಗಿದೆ. ದಿನನಿತ್ಯ ದುಡಿದು, ಕಷ್ಟಪಟ್ಟು ನಿರುದ್ಯೋಗ ಸಮಸ್ಯೆಯನ್ನು ನಿವಾರಣೆ ಮಾಡಿ ಉದ್ಯಮಕ್ಕೆ ಅಗತ್ಯವಾಗಿರುವ ಕಚ್ಚಾವಸ್ತುಗಳನ್ನು ಪೂರೈಸುತ್ತಿದ್ದರೂ ಅಸಂಘಟಿತ ವರ್ಗವಾಗಿರುವ ರೈತ ಸಮುದಾಯವು ಇಂದು ಸಾವು-ಬದುಕಿನ ನಡುವೆ ತೊಯ್ದಾಡುತ್ತಿದ್ದು ಇವರ ಬದುಕು ಹಸನಾಗಲು ಸರ್ಕಾರ ಪರಿಣಾಮಕಾರಿಯಾಗಿರುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜಾರಿಗೆ ತರಬೇಕೆಂದು ಈ ಸಂದರ್ಭದಲ್ಲಿ ವಿನಂತಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಶ್ರೀನಿವಾಸಗೌಡ (ಕೋಲಾರ): ಮಾನ್ಯ ಉಪಾಧ್ಯಕ್ಷರೆ, ಇವೊತ್ತು ನನ್ನ ತೋಟದಲ್ಲಿ ಬೆಳೆದಿರುವ ನುಸಿರೋಗಕ್ಕೆ ತುತ್ತಾಗಿರುವ ತೆಂಗಿನಕಾಯಿಗಳನ್ನು ತಂದಿದ್ದೇನೆ.

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರು ನುಸಿರೋಗಕ್ಕೆ ತುತ್ತಾಗಿರುವ ಮೂರ್ನಾಲ್ಕು ತೆಂಗಿನಕಾಯಿಗಳನ್ನು ಸದನದಲ್ಲಿ ಪ್ರದರ್ಶಿಸಿದರು)

ಉಪಾಧ್ಯಕ್ಷರು: ಅದರ ಪ್ರದರ್ಶನ ಬೇಡ, ವಿಷಯದ ಮೇಲೆ ಮಾತನಾಡಿ.

(ಈ ಹಂತದಲ್ಲಿ ಆಡಳಿತ ಪಕ್ಷದ ಹಲವಾರು ಮಾನ್ಯ ಸದಸ್ಯರುಗಳು ಎದ್ದು ನಿಂತು ಸದನದಲ್ಲಿ ತೆಂಗಿನಕಾಯಿಗಳನ್ನು ಪ್ರದರ್ಶಿಸುತ್ತಿರುವುದಕ್ಕೆ ತಮ್ಮ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು)

ಶ್ರೀ ಕೆ.ಶ್ರೀನಿವಾಸಗೌಡ: ನುಸಿರೋಗ ಬಂದಿರುವ ತೆಂಗಿನಕಾಯಿಗಳನ್ನು ಸರ್ಕಾರದ ಗಮನಕ್ಕೆ ತಂದು ತೋರಿಸಬೇಡವೇ? ತೋರಿಸಬಾರದೆಂದು ಏನಿದೆ?

ಉಪಾಧ್ಯಕ್ಷರು: ಗೊತ್ತಾಯಿತು. ನಾನು ಮಾನ್ಯ ಸದಸ್ಯರಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ, ದಯಮಾಡಿ ಅವುಗಳನ್ನು ಕೆಳಗಿಡಿ. ಸದನದಲ್ಲಿ ಈ ರೀತಿ ಪ್ರದರ್ಶನ ಮಾಡಬಾರದೆಂದು ತಮಗೆ ಗೊತ್ತಿಲ್ಲವೇ?

ಶ್ರೀ ಅರಗ ಜ್ಞಾನೇಂದ್ರ: ಉಪಾಧ್ಯಕ್ಷರೆ, ತಾವು ದಯವಿಟ್ಟು ರೂಲಿಂಗ್

ಕೊಡಬೇಡಿ.

ಶ್ರೀ ಕೆ.ಶ್ರೀನಿವಾಸಗೌಡ: ಇರುವುದನ್ನು ತೋರಿಸಬಾರದೆಂದರೆ ಹೇಗೆ? ನಾನೇನು ಚಾಕು-ಚೂರಿ ತಂದಿದ್ದೇನೆಯೇ? ರೋಗ ಬಂದಿರುವ ತೆಂಗಿನಕಾಯಿಗಳನ್ನು ಸರ್ಕಾರದ ಗಮನಕ್ಕೆ ತರಲು ತೋರಿಸುತ್ತಿದ್ದೇನೆ.

ಉಪಾಧ್ಯಕ್ಷರು: ಸದನದ ನಿಯಮಾವಳಿ ರೀತ್ಯ ಅವೆಲ್ಲವನ್ನು ಪ್ರದರ್ಶಿಸಬಾರದೆಂದು ಇದೆ. ಇದಕ್ಕೆ ನಾನು ಅವಕಾಶ ಕೊಡುವುದಿಲ್ಲ. ದಯವಿಟ್ಟು ಆ ತೆಂಗಿನಕಾಯಿಗಳನ್ನು ಹೊರಗಡೆ ಕಳುಹಿಸಿ.

(ಈ ಹಂತದಲ್ಲೂ ಆಡಳಿತ ಪಕ್ಷದ ಹಲವಾರು ಸದಸ್ಯರುಗಳು ತಮ್ಮ ತೀವ್ರ ಆಕ್ಷೇಪ ವ್ಯಕ್ತಪಡಿಸುತ್ತಿದ್ದರು)

ಶ್ರೀ ಅರಗ ಜ್ಞಾನೇಂದ್ರ: ಅವರು ಪ್ರದರ್ಶಿಸುತ್ತಿರುವ ತೆಂಗಿನಕಾಯಿ ನಿಮ್ಮ ಕಣ್ಣಿಗೆ ಪಿಸ್ತೂಲಿನಂತೆ ಕಾಣಿಸುತ್ತಿದೆಯೇ?

ಶ್ರೀ ಸಿ.ಸಗೀರ್‌ಅಹಮದ್: ಶ್ರೀನಿವಾಸಗೌಡರೇ, ತೆಂಗಿನಕಾಯಿ ನಿಮ್ಮವರ ಕಣ್ಣಿಗೆ ಪಿಸ್ತೂಲು ಕಂಡಂತೆ ಕಾಣುತ್ತದೆಯೇ? ಅವರು ಮಾತನಾಡುವ ರೀತಿ ನೋಡಿ!

ಶ್ರೀ ಕೆ.ಶ್ರೀನಿವಾಸಗೌಡ: ನೀವೇಕೆ ಕೆಣಕುತ್ತಿದ್ದೀರಿ? ನೀವು ಹಾಗೆ ಗಾಬರಿಯಿಂದ ನೋಡಿದರೆ ಅದು ಹಾಗೇ ಕಾಣುತ್ತದೆ!

ಉಪಾಧ್ಯಕ್ಷರು: ದಯವಿಟ್ಟು ಅದನ್ನು ಹೊರಗಡೆ ಕಳುಹಿಸಬೇಕು.

ಶ್ರೀ ಎಸ್.ಎಸ್.ಪಾಟೀಲ್: ಇದೇ ಸದನದಲ್ಲಿ ಈ ಹಿಂದೆ ಅಕ್ಕಿಯನ್ನು ತಂದು ಪ್ರದರ್ಶಿಸಲಾಗಿದೆ. ಅದನ್ನು ಮಾಡಿದವರು ನೀವಾಗಿದ್ದೀರಿ, ತಾವು ಆ ರೀತಿ ಮಾಡಿದ್ದೀರಿ.

ಶ್ರೀ ವಿಶ್ವೇಶ್ವರ ಹೆಗ್ಗಡೆ ಕಾಗೇರಿ: ಉಪಾಧ್ಯಕ್ಷರೆ, ಇವೊತ್ತು ತೆಂಗು ಬೆಳೆದಿರುವ ರೈತರ ಪರಿಸ್ಥಿತಿ ಏನಿದೆಯೆಂಬುದನ್ನು ಮಾನ್ಯ ಸದಸ್ಯರು ನುಸಿರೋಗ ಬಾಧಿತವಾದ ತೆಂಗಿನಕಾಯಿಗಳನ್ನು ತಂದು ಪ್ರದರ್ಶಿಸುತ್ತಿದ್ದಾರೆಯೇ ವಿನಾ ಚಾಕು-ಚೂರಿ ತಂದೇನೂ ಪ್ರದರ್ಶನ ಮಾಡುತ್ತಿಲ್ಲವಲ್ಲ.

ಉಪಾಧ್ಯಕ್ಷರು: ಅದನ್ನೆಲ್ಲಾ ಪ್ರದರ್ಶನ ಮಾಡಬಾರದೆಂದಿದೆ. ತಾವು ನಿಯಮಾವಳಿ ಪ್ರಕಾರ ನಡೆದುಕೊಳ್ಳಬೇಕು.

5. 30 ಪಿಎಂ

ಉಪಾಧ್ಯಕ್ಷರು: ನಿಯಮಾವಳಿ ಪ್ರಕಾರ ನಡೆದುಕೊಳ್ಳಿ.

ಶ್ರೀ ಎಸ್.ಎಸ್.ಪಾಟೀಲ್: ಹಿಂದೆ ಅಕ್ಕಿ ತಂದಿದ್ದಾರೆ.

(ಗೊಂದಲ)

ಶ್ರೀ ಕೆ.ಶ್ರೀನಿವಾಸ ಗೌಡ: ರೈತರು ಬೆಳೆದ ಬೆಳೆ ಬಗ್ಗೆ ಹೇಳುತ್ತಿದ್ದೇನೆ.

ಉಪಾಧ್ಯಕ್ಷರು: ನೀವು ದಯಮಾಡಿ ರೂಲ್ ಕಡೆಗೆ ಗಮನ ಕೊಡಿ.

(ಗೊಂದಲ)

ಶ್ರೀ ಸಿ.ಬೈರೇಗೌಡ: ಪರಿಸ್ಥಿತಿ ಏನು ಇದೆ ಎನ್ನತಕ್ಕದ್ದನ್ನು ಅವರು ಹೇಳುತ್ತಿದ್ದಾರೆ.

ಉಪಾಧ್ಯಕ್ಷರು: ನೀವು ಹಿರಿಯ ಸದಸ್ಯರು ಇದ್ದೀರಿ. ನಿಯಮಾವಳಿಯನ್ನು ಫಾಲೋ ಮಾಡಲು ಸದಸ್ಯರಿಗೆ ಕೇಳಿಕೊಳ್ಳಬೇಕು.

(ಗೊಂದಲ)

ಶ್ರೀ ಕೆ.ಬಿ.ಮಲ್ಲಿಕಾರ್ಜುನ: ಪಾಯಿಂಟ್ ಆಫ್ ಆರ್ಡರ್ ಇದೆ. ತೆಂಗಿನಕಾಯಿ ತಂದಿರತಕ್ಕದ್ದು ಪ್ರಾಹಿಬಿಟೆಡ್ ಆರ್ಟಿಕಲ್ ಅಲ್ಲ. ಏಕೆ ತರಬಾರದು ಎಂಬ ಬಗ್ಗೆ ಹೇಳುತ್ತಿದ್ದೇನೆ.

MR.DEPUTY SPEAKER: Rule 324 clearly says.. ನೀವು ಹೇಳುವುದು ಬೇಡ. ಇಲ್ಲಿ ಏನು ಇದೆ ನೋಡಿ. '.. shall not display.. any exhibits in the house'.ಎಂದು ರೂಲ್ಸ್ ಇದೆ. ನಿಯಮಾವಳಿ ಪ್ರಕಾರ ನಾವು ಹೋಗುತ್ತಿದ್ದೇವೆ.

ಶ್ರೀ ಕೆ.ಬಿ.ಮಲ್ಲಿಕಾರ್ಜುನ: ನಮ್ಮ ನಾಯಕರಾದಂತಹ ಸಿಂಧ್ಯಾರವರು ಬೆಳಿಗ್ಗೆ ಹೇಳಿದರು. ಹಿಂದೆ ಚಂದ್ರೇಗೌಡರು ಮತ್ತು ದೇಶಪಾಂಡೆಯವರು ಮಾಡಿದ್ದನ್ನು ಮುಂದುವರಿಸುತ್ತಿದ್ದೇವೆಂದು ಹೇಳಿದರು. ಹಿಂದೆ ಬೀರ್ ಬಾಟಲ್ ತಂದಿರತಕ್ಕ ಉದಾಹರಣೆ ಇದೆ, ಅಕ್ಕಿ ತಂದಿರತಕ್ಕ ಉದಾಹರಣೆ ಇದೆ. ಇವೆಲ್ಲವೂ ಇದೆ.

ಶ್ರೀ ಕೆ.ಶ್ರೀನಿವಾಸ ಗೌಡ: ಸಾರ್, ಹಿಂದೆ ರಕ್ತ ತಂದಿರತಕ್ಕ ಉದಾಹರಣೆ ಸಹ ಇದೆ.

ಶ್ರೀ ಕೆ.ಬಿ.ಮಲ್ಲಿಕಾರ್ಜುನ್: ರೈತರ ಸಮಸ್ಯೆ ಆಗಿರತಕ್ಕ ಒಂದು ತೆಂಗಿನಕಾಯಿ ತಂದು ತೋರಿಸತಕ್ಕದ್ದು ಪ್ರಾಹಿಬಿಟೆಡಾ? ದಯವಿಟ್ಟು ತಾವು ರೂಲಿಂಗ್ ಕೊಡಬೇಕು.

ಉಪಾಧ್ಯಕ್ಷರು: ನಿಮ್ಮ ಪಾಯಿಂಟ್ ಆಫ್ ಆರ್ಡರ್‌ನ್ನು ನಾನು ಈಗ ತಳ್ಳಿಹಾಕಿದ್ದೇನೆ. ಕಂಟಿನ್ಯೂ ಮಾಡಿ. ಮಾತನಾಡುವುದಕ್ಕೆ ಬರುತ್ತದೆ. ಮಾತನಾಡಬಹುದು. ಮಾತನಾಡುವುದಕ್ಕೆ ಸಾಕಷ್ಟು ಅವಕಾಶ ಕೊಟ್ಟಿದ್ದೇನೆ. ರೈತರ ಸಮಸ್ಯೆ ನಮಗೂ ಗೊತ್ತಿರುತ್ತದೆ. ಸಾಕಷ್ಟು ಅವಕಾಶ ಕೊಟ್ಟಿದ್ದೇನೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷರೆ, ರೂಲ್ 324ರ ಪ್ರಕಾರ ಸದನದಲ್ಲಿ ಸದಸ್ಯರು ಯಾವ ರೀತಿಯಾಗಿ ನಡೆದುಕೊಳ್ಳಬೇಕು ಎನ್ನುವ ಬಗ್ಗೆ ಒಂದು ಪಟ್ಟಿಯೇ ಇದೆ. ಅದರ ಪ್ರಕಾರ ರೂಲ್ 13, ಸಬ್-ಸೆಕ್ಷನ್ 13, ೧೪, ೧೫ರಲ್ಲಿ ಯಾವ ವಸ್ತುಗಳನ್ನು ತರಬಹುದು, ಯಾವ ವಸ್ತುಗಳನ್ನು ತರಬಾರದು ಎನ್ನತಕ್ಕದ್ದು ಕೂಡ ಇದೆ. ಹಿಂದೆ ಯಾರು, ತಂದಿದ್ದರು ಅವರಿಗೆ ಕೂಡ ಅಧ್ಯಕ್ಷರು ಛೀಮಾರಿ ಹಾಕಿದ್ದಾರೆ. ಹಾಗೆ ಛೀಮಾರಿ ಹಾಕಿಸಿಕೊಳ್ಳಬೇಕು ಎನ್ನುವುದಾದರೆ ನೀವೂ ತನ್ನಿ.

(ಗೊಂದಲ)

ಶ್ರೀ ಕೆ.ಶ್ರೀನಿವಾಸ ಗೌಡ: ತಮಟೆ ಹೊಡೆದುಕೊಂಡು ಬಂದಿದ್ದಾರೆ. ತಮಟೆ ಹೊಡೆದುಕೊಂಡು ಬಂದಿರುವಂತಹ ಪ್ರಕರಣವನ್ನು ನಾವು ಹಿಂದೆ ಸದನದಲ್ಲಿ ನೋಡಿದ್ದೇವೆ. ಅವತ್ತು ನೀವು ಇಲ್ಲಿ ಕುಳಿತಿದ್ದಿರಿ. ಇವತ್ತು ರೈತರಬಾಳು ಸುಂಟರ ಗಾಳಿ ಆಗಿದೆ, ಅದನ್ನು ತಂದು ತೋರಿಸಿದರೆ ಈಗ ಹೀಗೆ ಹೇಳುತ್ತೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಾನು ಮಾಡಿಲ್ಲ. ರೂಲ್ಸ್ ಪ್ರಾಹಿಬಿಟ್ ಮಾಡಿದಾಗ ಅದನ್ನು ಅವರು ಗಮನಿಸಬೇಕಾಗುತ್ತದೆ.

ಶ್ರೀ ಸಿ.ಆರ್.ಸಗೀರ್ ಅಹಮದ್: ಮಾನ್ಯ ಉಪಾಧ್ಯಕ್ಷರೆ, ಕೃಷಿ ರೋಗದ ಬಗ್ಗೆ ಈ ಹಿಂದೆಯೂ ಈ ಸದನದಲ್ಲಿ ಚರ್ಚೆ ಆಗಿದೆ. ನಮ್ಮ ಸರ್ಕಾರ ಬಂದು ಕೇವಲ ಆರು ತಿಂಗಳಲ್ಲಿ ಈ ರೋಗ ಬಂದಿದ್ದು ಅಲ್ಲ. ಇವರು ಇದ್ದಂತಹ ಕಾಲದಿಂದಲೂ ಈ ರೋಗ ಇದೆ. ಇಲ್ಲ ಎಂದಲ್ಲ. ಈಗಲೇ ಹುಟ್ಟಿದೆ ಎನ್ನುವ ವಿಚಾರ ಇಲ್ಲ. ಅದಕ್ಕೆ ಅವರು ಆರ್ಟಿಕಲ್ ಅನ್ನು ತಂದು ಪ್ರದರ್ಶನ ಮಾಡುವ ಅಗತ್ಯವಿಲ್ಲ. ಅವರು ಇದ್ದಂತಹ ಕಾಲದಲ್ಲೂ ಈ ರೋಗ ಇತ್ತು. ತಾವು ಆ ಭಾಗದಲ್ಲಿ ಇದ್ದಂತಹ ಸಂದರ್ಭದಲ್ಲೂ ಮಾತನಾಡಿದ್ದೇವೆ. ಈ ರೋಗ ತಂದವರು ಅವರು.

ಉಪಾಧ್ಯಕ್ಷರು: ನೀವು ಮಾತನಾಡಿ. ಸಲಹೆ ಕೊಡುವುದು ಇದ್ದರೆ ಕೊಡಿ.

ಶ್ರೀ ಕೆ.ಶ್ರೀನಿವಾಸಗೌಡ: ನನ್ನ ಉದ್ದೇಶ ಇದ್ದಿದ್ದು ಏನೆಂದರೆ ನಾನೊಬ್ಬ

ಶಾಸಕನಾಗಿ, ನನ್ನ ತೋಟದಲ್ಲಿ ಈ ತರಹದ ಪರಿಸ್ಥಿತಿ ಇದ್ದರೆ ಸಾಮಾನ್ಯ ಮನುಷ್ಯನ ಸ್ಥಿತಿ ಹೇಗೆ ಇರುತ್ತದೆ ಎನ್ನುವುದನ್ನು ಸರ್ಕಾರದ ಗಮನಕ್ಕೆ ತರಬೇಕು ಎಂದು ನನ್ನ ಉದ್ದೇಶ ಇತ್ತು. ಅದಕ್ಕೋಸ್ಕರವಾಗಿ ತೆಂಗಿನಕಾಯಿ ತಂದಿದ್ದೆ. ಇವತ್ತು ಇದನ್ನು ನೋಡಿದರೆ ಹತ್ತು ದಿವಸಗಳ ಹಿಂದೆ ನಡೆದ ಕಂಬಾಲಪಳ್ಳಿಯ ಹೆಣಗಳ ರೀತಿ ಇದೆ, ಆ ನುಸಿ ಖಾಯಿಲೆ ಬಗ್ಗೆ ಹೇಳುವುದು ನನ್ನ ಉದ್ದೇಶ ಅಷ್ಟೆ. ಕಂಬಾಲಪಳ್ಳಿಯಲ್ಲಿ ಸುಟ್ಟಂತಹ ಹೆಣಗಳು ಯಾವ ರೀತಿ ಪತ್ರಿಕೆಗಳಲ್ಲಿ ಕಾಣಿಸಿದವು. ನಮ್ಮ ಎಲ್ಲ ನಾಯಕರೆಲ್ಲಾ ಹೋಗಿ ನೋಡಿಕೊಂಡು ಬಂದರು. ಇವತ್ತು ಅದೇ ಪರಿಸ್ಥಿತಿ ತೆಂಗಿನ ಕಾಯಿಯ ಎಲ್ಲಾ ಮರಗಳಲ್ಲಿದೆ. ಸರ್ಕಾರ ಕ್ರಮ ಜರುಗಿಸುವಂತಹದ್ದು ನಿಧಾನ ಆದರೆ ದಿನೇ ದಿನೇ ಬಹಳಷ್ಟು ರೋಗ ಹರಡುತ್ತದೆ. ನನಗೂ ಕೂಡ ಎರಡು ಸಾವಿರದಷ್ಟು ಮರ ಇದೆ. ನನ್ನ ಪರಿಸ್ಥಿತಿಯನ್ನು ತಾವು ಅರ್ಥ ಮಾಡಿಕೊಳ್ಳಬೇಕು. ನಾನೂ ಒಬ್ಬ ರೈತನಾಗಿದ್ದೇನೆ. ರೈತನಾಗಿ ರೈತರ ಬೆಳೆಯನ್ನು ನಾವು ಇಲ್ಲಿ ತಂದು ತೋರಿಸಿದ್ದೇವೆ. ತಮಟೆ ತಂದವರ ಬಗ್ಗೆ, ರಕ್ತ ತಂದವರ ಬಗ್ಗೆ ನೀವೇನೂ ಮಾತನಾಡಲಿಲ್ಲ. ಅದೇ ಮಾನ್ಯ ವಿರೋಧ ಪಕ್ಷದ ನಾಯಕರಾಗಿದ್ದ ಮಾನ್ಯ ಖರ್ಗೆ ಅವರು ಅದನ್ನೆಲ್ಲಾ ಶ್ಲಾಘನೆ ಮಾಡಿದ್ದರು. ಇವತ್ತು ರೈತ ಬೆಳೆದಂತಹ ಬೆಳೆಗೆ ನುಸಿ ರೋಗ ಬಂದಿದೆ ಎಂದು ಹೇಳುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇಂತಹ ವಿಚಾರಗಳನ್ನು ನನ್ನ ತಲೆಗೆ ಹಾಕಬೇಡಿ. ನಾವೆಂದೂ ಕೂಡ ಅಧರ ಬಗ್ಗೆ ಹೇಳಲಿಲ್ಲ. ಅಂತಹ ಪ್ರದರ್ಶನವನ್ನೂ ಮಾಡಲಿಲ್ಲ. ತಮಟೆ ಬಾರಿಸುವುದು, ಬೀರ್ ಬಾಟಲ್ ತರುವುದು, ಅಕ್ಕಿ ತರುವುದು ಮಾಡಿಲ್ಲ. ಇಲ್ಲಿ ಏನು ತಂದು ತೋರಿಸಿದ್ದೇವೆ?

ಶ್ರೀ ಎಸ್.ಎಸ್.ಪಾಟೀಲ್: ಅಕ್ಕಿ ಪ್ರದರ್ಶನ ಮಾಡಿದ್ದಾರೆ.

ಶ್ರೀ ಎನ್.ಯೋಗೀಶ್ ಭಟ್: ಕಳಪೆ ಪಡಿತರ ಅಕ್ಕಿಯನ್ನು ನಾನೇ ತಂದಿದ್ದೇನೆ. ಕಳಪೆ ಪಡಿತರ ಅಕ್ಕಿಯನ್ನು ತಂದರು ಎಂದು ಹೇಳಿ ಸ್ಪೀಕರ್ ಸ್ಥಾನದಿಂದ ಸನ್ಮಾನ್ಯ ರಮೇಶ್ ಕುಮಾರ್ ಅವರು ಸಂಬಂಧಪಟ್ಟಂತಹ ಸಚಿವರಿಗೆ ಕಳಿಸಿದ್ದಾರೆ. ಇದನ್ನು ರೆಫ್ಯೂಸ್ ಮಾಡಬೇಕು ಎಂದು ಹೇಳಿ.

(ಮಾನ್ಯ ಅಧ್ಯಕ್ಷರಾದ ಶ್ರೀ ಎಂ.ವಿ.ವೆಂಕಟಪ್ಪ ಅವರು ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದರು)

ಶ್ರೀ ಕಾಗೋಡು ತಿಮ್ಮಪ್ಪ: ತಾವು ಹೇಳುವಂತಹ ಭಾಷೆಯಿಂದಲೇ ಈ ಸದನವನ್ನು ಒಪ್ಪಿಸತಕ್ಕ ಶಕ್ತಿ ಇರುವಾಗ ಅದನ್ನು ಪ್ರದರ್ಶನ ಮಾಡುವುದು ಬೇಡ. ನೀವು ಒಂದು ತೆಂಗಿನಕಾಯಿ ತಂದಿದ್ದೀರಿ, ನಾಳೆ ನಾನು ಇನ್ನೊಂದು ತಂದು ತೋರಿಸುತ್ತೇನೆ.

+ ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಶ್ರೀನಿವಾಸಗೌಡರು ಸ್ವತಃ ತೆಂಗಿನ ಕಾಯಿ ಬೆಳೆಗಾರರು ಆಗಿದ್ದಾರೆ. ಅವರಿಗೆ ಸಮಸ್ಯೆ ಬಗ್ಗೆ ಮಾಹಿತಿ ಇದೆ. ಈ ರೋಗವನ್ನು ಯಾವ ರೀತಿಯಾಗಿ ನಿಯಂತ್ರಣದಲ್ಲಿಡಬಹುದು, ತಡೆಗಟ್ಟಬಹುದು ಎನ್ನತಕ್ಕ ಸಲಹೆಯನ್ನು ಕೊಡತಕ್ಕ ಶಕ್ತಿ ನಿಮ್ಮಲ್ಲಿದೆ. ನಿಮ್ಮಲ್ಲಿ ಮಾಹಿತಿ ಕೂಡ ಇದೆ. ನೀವು ಅಂತಹ ಸಂಸ್ಥೆಯ ಅಧ್ಯಕ್ಷರೂ ಆಗಿದ್ದೀರಿ. ಬಹುಶಃ ತಾವು ತಮ್ಮ ಭಾಷಣದ ಮುಖೇಣ, ಮಾನ್ಯ ಬೈರೇಗೌಡರು ಹೇಳಿದ ವಿಚಾರವನ್ನು ಇವತ್ತು ಇಡೀ ಸಭೆ ಆಲಿಸಿದೆ. ಇದು ರೈತರ ಜೀವನ್ಮರಣ ಪ್ರಶ್ನೆ. ವ್ಯಾಪಕವಾಗಿ ಚರ್ಚೆ ಆಗಬೇಕು ಎನ್ನುವ ಕಾರಣಕ್ಕಾಗಿ ತಾವು ಹೇಳಿರತಕ್ಕಂಥ ಎಲ್ಲ ಸಲಹೆಗಳನ್ನು ಕೂಡ ನಾವು ಕೇಳುತ್ತಿದ್ದೇವೆ. ನಿಮ್ಮೆಲ್ಲರಿಗಿಂತ ಉತ್ತಮವಾದಂತಹ ಸಲಹೆಯನ್ನು ಕೊಡುವುದಕ್ಕೆ ಸಾಧ್ಯ ಇದೆ. ಅದಕ್ಕೆ ತೆಂಗಿನ ಕಾಯಿ ತಂದು ಪ್ರದರ್ಶನ ಮಾಡುವುದಕ್ಕಿಂತ ಹೆಚ್ಚಾಗಿ ನೀವು ಇದಕ್ಕೆ ಪರಿಹಾರ ಕ್ರಮ ಏನು ಎನ್ನತಕ್ಕ ಬಗ್ಗೆ ಕೂಡ ಸೂಚಿಸಬೇಕು. ನೀವು ಸೂಚನೆ ಕೊಡುತ್ತೀರಿ ಎನ್ನತಕ್ಕ ವಿಶ್ವಾಸ ನನಗೆ ಇದೆ. ದಯಮಾಡಿ ತಮ್ಮ ಸಲಹೆ ಯಾವ ರೀತಿಯಾಗಿ ಪರಿಹರಿಸಬೇಕು ಎನ್ನುವ ಬಗ್ಗೆ ಸಲಹೆ ಬರಲಿ.

ಶ್ರೀ ಎ.ರಾಮದಾಸ್: ಆರ್ಟಿಕಲ್ ತಂದು ತೋರಿಸಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸಬೇಕು ಎನ್ನುವ ವಿಚಾರಕ್ಕೆ ಅಲ್ಲ. ಸರ್ಕಾರ ಪ್ರಮುಖವಾಗಿ ಒಂದು ಆದೇಶವನ್ನು ಕೊಟ್ಟಿದ್ದರು. ನುಸಿ ರೋಗ ಬಂದಿರುವಂತಹ ಮರಗಳು ಇದೆ? ಅಲ್ಲಿ ಎಳನೀರನ್ನು ಕುಡಿಯಬೇಡಿ ಎನ್ನುವಂತಹ ವಿಚಾರವನ್ನು ಹೇಳಿದರು. ಇದು ಎಷ್ಟು ಜನಕ್ಕೆ ಗೊತ್ತಾಗಿದೆ ಹೇಳಿ? ಇಂತಹದನ್ನು ಕುಡಿಯಬೇಡಿ ಎಂದು ಹೇಳುವುದಕ್ಕೋಸ್ಕರ ಅವರು ತಂದರೇ ಹೊರತು ಅದನ್ನು ಎಗ್ಸಿಬಿಟ್ ಮಾಡುವ ದೃಷ್ಟಿಯಿಂದ ತರಲಿಲ್ಲ. ಪ್ರತಿನಿತ್ಯ ಕುಡಿಯುವಂತಹ ವ್ಯವಸ್ಥೆ ಆಗಿದೆ. ಅದನ್ನು ತೋರಿಸುವುದಕ್ಕೋಸ್ಕರ ತಂದಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ: ಹೀಗೆ ಮಾತನಾಡುತ್ತಾ ಒಂದು ಹೆಣವನ್ನು ತಂದು ನಿಲ್ಲಿಸಿಕೊಳ್ಳಿ, ಹೆಣ ತಂದು ನಿಲ್ಲಿಸಿಕೊಂಡು ಮಾತನಾಡಿ.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಈ ನುಸಿ ರೋಗವನ್ನು ತಡೆಗಟ್ಟುವುದಕ್ಕೋಸ್ಕರ ಸರ್ಕಾರ ಏನೆಲ್ಲಾ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ? ಸಂಶೋಧನೆ ವಿಷಯದಲ್ಲಿ ಯಾವ ರೀತಿಯಾದಂತಹ ಔಷಧಿಗಳನ್ನು ಶಿಫಾರಸ್ ಮಾಡಲಾಗಿದೆ ಎಂದು ಹೇಳುವಂತಹ ಎಲ್ಲ ವಿಷಯದಲ್ಲಿ ಸರ್ಕಾರದ ಪರವಾಗಿ ಹೇಳಿಕೆ ಕೊಡಲು ಮಾನ್ಯ ಸಚಿವರು ಇದ್ದಾರೆ. ಬಹುಶಃ ಆ ಹೇಳಿಕೆ ಬಂದಮೇಲೆ ಇನ್ನೂ ಅದಕ್ಕೆ ಹೊಸ ತಿರುವನ್ನು ಕೊಡತಕ್ಕ ರೀತಿಯಲ್ಲಿ ನೀವು ಚರ್ಚೆ ಮಾಡಿದ್ದರೆ ಬಹಳ ಚೆನ್ನಾಗಿ ಇತ್ತು ಎಂದು ನನ್ನ ಭಾವನೆ. ಏಕೆಂದರೆ ಈ ಸಭೆಯ ಮುಖೇನ ಚರ್ಚೆ ಆದಾಗ

ಈಗೇನು ಹತ್ತು ಲಕ್ಷ ಜನ ಇದನ್ನು ನಂಬಿರತಕ್ಕ ಜನ ಇದ್ದಾರೆ. ಅವರಿಗೂ ಒಂದು ವರ್ತಮಾನ ಹೋಗಬೇಕು. ಇದರ ಬಗ್ಗೆ ಚರ್ಚೆ ಆಗಿರುವ ಬಗ್ಗೆ ವಿಷಯ ಗೊತ್ತಾಗಬೇಕು. ಪರಿಹಾರದ ಕಾರ್ಯಕ್ರಮಗಳು ಗೊತ್ತಾಗಬೇಕು ಎನ್ನುವ ದೃಷ್ಟಿಯಿಂದ ಬಹುಶಃ ಸರ್ಕಾರದ ಉತ್ತರವನ್ನು ಬಯಸಿದ ಮೇಲೆ ಅದನ್ನು ಚರ್ಚೆ ಮಾಡಿದ್ದರೆ ಚೆನ್ನಾಗಿ ಇತ್ತು ಎಂದು ನನ್ನ ಭಾವನೆ. ಬಹುಶಃ ನೀವು ಬೇಗ ಮುಗಿಸುವುದಾದರೆ ಸಲಹೆಯನ್ನು ಕೊಡುವುದಕ್ಕೆ ಸಾಧ್ಯ ಇದ್ದರೆ ದಯಮಾಡಿ ಸಲಹೆಯನ್ನು ಕೊಡಿ.

ಶ್ರೀ ಸಿ.ಚೆನ್ನಿಗಪ್ಪ: ಮಾನ್ಯ ಸಚಿವರು ನಮಗೆ ಮೂರು ತಿಂಗಳ ಹಿಂದೆ ತುಮಕೂರಿನಲ್ಲಿ ಒಂದು ಹೇಳಿಕೆ ಕೊಟ್ಟರು. ಇನ್ನು ಒಂದೇ ಒಂದು ವಾರದಲ್ಲಿ ಎಲ್ಲ ಔಷಧಿಗಳನ್ನು ಸರಬರಾಜು ಮಾಡುತ್ತೇವೆ, ಈ ರೋಗವನ್ನು ನಾವು ಕಂಟ್ರೋಲ್ ಮಾಡುತ್ತೇವೆಂದು ಹೇಳಿದಂತಹ ಸಚಿವರು ಮೂರು ತಿಂಗಳಾಯಿತು. ನಾವೆಲ್ಲರೂ 100ಕ್ಕೆ 80 ಪರ್ಸೆಂಟ್ ರೈತ ಸಮುದಾಯದಿಂದ ಬಂದಿರತಕ್ಕಂಥ ಶಾಸಕರು. ದಯಮಾಡಿ ಬಹಳ ನೋವಿನಿಂದ ಹೇಳಿರುವಂತಹ ವಿಚಾರ. ಇದು ಗಂಭೀರವಾದಂತಹ ವಿಚಾರ. ಸರ್ಕಾರ ಕೂಡಲೇ ಇದನ್ನು ಆಲೋಚನೆ ಮಾಡಬೇಕು. ಎಲ್ಲದಕ್ಕಿಂತಲೂ ಬಹಳ ಇಂಪಾರ್ಟೆಂಟ್ ವಿಚಾರ ಇದೆ. ಮಾನ್ಯ ಸಚಿವರಲ್ಲಿ ಮಾನ್ಯ ಅಧ್ಯಕ್ಷರ ಮುಖಾಂತರ ವಿನಂತಿ ಮಾಡುತ್ತೇನೆ. ಬಹಳ ಡಿಲೇ ಆಯಿತು. ಸುಮಾರು ಕೋಟ್ಯಾಂತರ ರೂಪಾಯಿ ರೈತರಿಗೆ ಲಾಸ್ ಆಗಿದೆ. ಅದಕ್ಕೆ ನೀವೇ ಕಾರಣಕರ್ತರು. ಅದೂ ಈ ರಾಜ್ಯದ ರೈತರಿಗೆ ಆದಂತಹ ಅನ್ಯಾಯ ಎಂದು ಹೇಳಬೇಕಾಗಿದೆ. ದಯಮಾಡಿ ಕೂಡಲೇ ತಾವು ಔಷಧಿ ಕೊಡುವ ಮುಖೇನ ಅದನ್ನು ಕಂಟ್ರೋಲ್ ಮಾಡಿ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ವಿನಂತಿ ಮಾಡುತ್ತೇನೆ.

+ ಶ್ರೀ ಕೆ.ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೇ, ಇವತ್ತು ನಾನು ತೆಂಗಿನ ಕಾಯಿಯನ್ನು ಸದನದಲ್ಲಿ ಏತಕ್ಕಾಗಿ ಪ್ರದರ್ಶನ ಮಾಡಿದೆ ಎಂಬುದನ್ನು ನಾನು ಆಗಲೇ ಹೇಳಿದೆ. ಹತ್ತು ದಿವಸಗಳ ಹಿಂದೆ ಕಂಬಾಲಪಲ್ಲಿಯಲ್ಲಿ ಸುಟ್ಟಂತಹ ಹೆಣಗಳ ರೀತಿ ಇವತ್ತು ತೆಂಗಿನ ಕಾಯಿಗಳಾಗಿವೆ. ಸರ್ಕಾರ ಈ ರೋಗದ ಬಗ್ಗೆ ಹೆಚ್ಚಿನ ಗಮನ ಹರಿಸಲೆಂಬುದೇ ನಾನು ತೆಂಗಿನ ಕಾಯಿ ಪ್ರದರ್ಶಿಸಿದ್ದರ ಮುಖ್ಯ ಉದ್ದೇಶವಾಗಿತ್ತು. 3-4 ತಿಂಗಳ ಹಿಂದೆ ತುಮಕೂರು ಲೋಕಸಭಾ ಸದಸ್ಯರಾದ ಬಸವರಾಜ್‌ರವರು, ಷಡಕ್ಷರಿಯವರು, ಎಂ.ಎಲ್.ಸಿ.ಯವರಾದ ರಾಜಣ್ಣನವರು ಇವರೆಲ್ಲರನ್ನೂ ಆಗಿನ ತೋಟಗಾರಿಕೆ ಇಲಾಖಾ ಕಾರ್ಯದರ್ಶಿಯವರಾದ ತಿಮ್ಮೇಗೌಡರು ಕೋಕನೆಟ್ ಬೋರ್ಡ್ ಅಧ್ಯಕ್ಷರ ಹತ್ತಿರ ಕರೆದುಕೊಂಡು ಹೋದರು. ನಾನೂ ಅವರ ಜೊತೆಯಲ್ಲಿ ಇದ್ದೆ. ಅವರು ಬಹಳ ಆಸಕ್ತಿಯಿಂದ ನುಸಿ ರೋಗ ಮತ್ತು ಕಪ್ಪು ತಲೆ ಹುಳುಗಳ

ಹಾವಳಿಯನ್ನು ಹೇಗೆ ನಿಯಂತ್ರಣ ಮಾಡಬೇಕೆಂಬ ಬಗ್ಗೆ ಸುಮಾರು ಒಂದು ಗಂಟೆಗಳ ಕಾಲ ನಮಗೆ ತಿಳಿಸಿಕೊಟ್ಟರು. ಇದಕ್ಕೆ ಎಷ್ಟು ಹಣ ಬಿಡುಗಡೆ ಮಾಡಿಸಬೇಕೆಂಬ ಬಗ್ಗೆಯೂ ಸಹಾ ಚರ್ಚೆಯಾಯಿತು. ಇಂತಹ ಒಳ್ಳೆಯ ಇಲಾಖಾ ಕಾರ್ಯದರ್ಶಿಯವರನ್ನೇ ತಾವು ಈಗ ಬದಲಾವಣೆ ಮಾಡಿದ್ದೀರಿ. ನುಸಿ ರೋಗ ಮತ್ತು ಕಪ್ಪು ತಲೆ ಹುಳುಗಳು ಎಲ್ಲಿ ಜಾಸ್ತಿಯಾಗಿದ್ದವೋ ಅಂತಹ ಪ್ರದೇಶಗಳ ಕಡೆ ಗಮನಹರಿಸಿ ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದ ಕಾರ್ಯದರ್ಶಿಯವರನ್ನೇ ತಾವು ಬದಲಾವಣೆ ಮಾಡಿದ್ದೀರಿ. ಇದು ಸರಿಯಲ್ಲ. ನಾವು ಕಣ್ಣಾರೆ ಅವರ ಕಾರ್ಯವೈಖರಿಯನ್ನು 3 ತಿಂಗಳ ಹಿಂದೆ ಕಂಡಿದ್ದರಿಂದ ನಾನು ಈ ಮಾತನ್ನು ಇವತ್ತು ಹೇಳಬೇಕಾಗಿದೆ. 35 ವರ್ಷಗಳ ಹಿಂದೆ ಭಾರತದಿಂದ ನಿರಕ್ಷರತೆಯನ್ನು ನಿರ್ಮೂಲ ಮಾಡಬೇಕೆಂದು ಏನೊಂದು ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿತ್ತೋ ಅದೇ ರೀತಿಯಲ್ಲಿ ಇವತ್ತು ಭಾರತದಲ್ಲಿ ಬೆಳೆಗಳಿಗೆ ಬರುವ ರೋಗಗಳ ನಿರ್ಮೂಲನ ಎಂಬ ಕಾರ್ಯಕ್ರಮವೊಂದನ್ನು ಹಾಕಿಕೊಳ್ಳುವ ಕೆಲಸವನ್ನು ಇವತ್ತು ಸರ್ಕಾರ ಮಾಡಬೇಕಾಗಿದೆ. ಯಾವ ರೀತಿಯಲ್ಲಿ ದೇಶದಲ್ಲಿ ನಿರಕ್ಷರತೆ ಇದ್ದರೆ ದೇಶದ ಅಭಿವೃದ್ಧಿ ಸಾಧ್ಯವಾಗುವುದಿಲ್ಲ ಎನ್ನುವಂತಹ ಅನಿಸಿಕೆಗಳಿದ್ದವೋ ಅದೇ ರೀತಿಯಲ್ಲಿ ಬೆಳೆಗಳಿಗೆ ರೋಗ ಬಂದು ಅವುಗಳು ಹಾಳಾದರೆ ದೇಶ ಅಭಿವೃದ್ಧಿಯಾಗುವುದಿಲ್ಲ. ರೈತನ ಸ್ಥಿತಿಯೂ ಕೂಡ ಕೆಳಮಟ್ಟಕ್ಕೆ ಇಳಿಯುತ್ತದೆ. ಇವತ್ತು ರೈತನ ಮಗನಿಗೆ ಹೆಣ್ಣು ಕೊಡಬೇಕೆಂದರೆ ಜನ ಹಿಂದು-ಮುಂದು ನೋಡುತ್ತಾರೆ. ಸರ್ಕಾರಿ ಕೆಲಸದಲ್ಲಿರುವ ಒಬ್ಬ ಜವಾನನಿಗೆ ಜನ ಹೆಣ್ಣು ಕೊಡಲಿಕ್ಕೆ ಮುಂದೆ ಬರುತ್ತಾರೆ. ರೈತನ ಪರಿಸ್ಥಿತಿ ಇವತ್ತು ಈ ಮಟ್ಟಕ್ಕೆ ತಲುಪಿದೆ. ಇಂತಹ ರೋಗವನ್ನು ನಾವು ಹಿಂದೆ ಕಂಡಿದ್ದರೂ ಕೂಡ, ಪಕ್ಕದ ರಾಜ್ಯಗಳಲ್ಲಿ ಇದು ಬಹಳ ದಿವಸಗಳಿಂದ ಇದ್ದರೂ ಕೂಡ ಈ ಒಂದು ರೋಗವನ್ನು ನಿಯಂತ್ರಣ ಮಾಡುವಲ್ಲಿ ಅಷ್ಟು ಯಶಸ್ವಿಯಾಗಿಲ್ಲ, ಈ ದಿಸೆಯಲ್ಲಿ ಬಹಳ ವಿಳಂಬವಾಗಿದೆ ಎಂದು ನಾನು ಹೇಳುತ್ತೇನೆ. ಮಾನ್ಯ ಸಚಿವರು ನುಸಿ ರೋಗ ನಿಯಂತ್ರಣಕ್ಕಾಗಿ ಯಾವ್ಯಾವ ಜಿಲ್ಲೆಗೆ ಎಷ್ಟೆಷ್ಟು ಹಣವನ್ನು ಒದಗಿಸಲಾಗಿದೆ ಎಂಬ ವಿವರಗಳನ್ನು ಒದಗಿಸಿದ್ದಾರೆ. ಅವರ ಪ್ರಕಾರ ಸರ್ಕಾರ ಮಂಡ್ಯ ಜಿಲ್ಲೆಗೆ 28 ಲಕ್ಷ, ಮೈಸೂರು ಜಿಲ್ಲೆಗೆ 19 ಲಕ್ಷ 12 ಸಾವಿರ, ಚಾಮರಾಜನಗರ ಜಿಲ್ಲೆಗೆ 13 ಲಕ್ಷ 24 ಸಾವಿರ, ತುಮಕೂರು ಜಿಲ್ಲೆಗೆ 35 ಲಕ್ಷ 13 ಸಾವಿರ, ಹಾಸನ ಜಿಲ್ಲೆಗೆ 26 ಲಕ್ಷ 34 ಸಾವಿರ, ಚಿತ್ರದುರ್ಗ ಜಿಲ್ಲೆಗೆ 24 ಲಕ್ಷ 50 ಸಾವಿರ, ದಾವಣಗೆರೆ ಜಿಲ್ಲೆಗೆ 4 ಲಕ್ಷ 50 ಸಾವಿರ, ಕೋಲಾರ ಜಿಲ್ಲೆಗೆ 28 ಲಕ್ಷ 64 ಸಾವಿರ, ಚಿಕ್ಕಮಗಳೂರು ಜಿಲ್ಲೆಗೆ 21 ಲಕ್ಷ 45 ಸಾವಿರ, ಬೆಂಗಳೂರು (ನಗರ) ಜಿಲ್ಲೆಗೆ 14 ಲಕ್ಷ 17 ಸಾವಿರ, ಬೆಂಗಳೂರು (ಗ್ರಾಮಾಂತರ) ಜಿಲ್ಲೆಗೆ 23 ಲಕ್ಷ 91 ಸಾವಿರ, ಶಿವಮೊಗ್ಗ ಜಿಲ್ಲೆಗೆ 2 ಲಕ್ಷ 50 ಸಾವಿರ, ದಕ್ಷಿಣ ಕನ್ನಡ ಜಿಲ್ಲೆಗೆ ಒಂದು ಲಕ್ಷ 50 ಸಾವಿರ, ಉತ್ತರ ಕನ್ನಡ ಜಿಲ್ಲೆಗೆ ಒಂದು ಲಕ್ಷ ರೂಪಾಯಿಗಳು ಹೀಗೆ ಒಟ್ಟಾರೆ 244 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದೆ.

ರೈತರಿಗೆ ಇವತ್ತು ಮಾನೋಕ್ರಾಟಫಸ್ ಇರಬಹುದು, ಎಂಡೋಸಲ್ಫಾನ ಇರಬಹುದು, ಅವುಗಳನ್ನು ಶೇಕಡ 50ರಷ್ಟು ಸಬ್ಸಿಡಿ ದರದಲ್ಲಿ ತಾವು ಕೊಡುವುದಕ್ಕೆ ಹೊರಟಿದ್ದೀರಿ. ರೈತರಿಗೆ ಈ ರೋಗದಿಂದಾದ ಬೆಳೆ ನಷ್ಟಕ್ಕೆ ಪರಿಹಾರವನ್ನು ಯಾರು ಕಟ್ಟಿಕೊಡುತ್ತಾರೆ? ಇದರ ಬಗ್ಗೆ ಕೂಡ ಸರ್ಕಾರ ಗಮನಹರಿಸಬೇಕು. ತೆಂಗಿನ ಗಿಡ ಇರುವವರೆಲ್ಲಾ ಸಾಹುಕಾರರಲ್ಲ. ಸರ್ಕಾರ ಇದನ್ನು ಯೋಚನೆ ಮಾಡಬೇಕು. ಕೋಲಾರ ಜಿಲ್ಲೆಯ ರೈತರಿಗೆ ಟೊಮ್ಯಾಟೊ ಬೆಳೆಯಿಂದಾಗಿ ಅಲ್ಪ ಪ್ರಮಾಣದಲ್ಲಿ ಲಾಭವಾಗುತ್ತಿತ್ತು. ಆದರೆ ಇತ್ತೀಚೆಗೆ ಟೊಮ್ಯಾಟೋಗೆ 'ವೈಟ್ ಆ್ಯಂಟ್ಸ್' ಎಂಬ ರೋಗ ತಗುಲಿ ಬೆಳೆಗಳು ನಷ್ಟವಾಗಿ ಆ ಬೆಳೆಯಿಂದಲೂ ರೈತರು ನಷ್ಟ ಅನುಭವಿಸುವಂತಾಗಿದೆ. ಇವತ್ತು ಮಹಾರಾಷ್ಟ್ರದಿಂದ ಕೋಲಾರಕ್ಕೆ ಬಂದು ಟೊಮ್ಯಾಟೋವನ್ನು ಮಾರುವಂತಾಗಿದೆ. ಕೋಲಾರದ ಎಪಿಎಂಸಿ ಮಾರುಕಟ್ಟೆ ಇಡೀ ಏಷ್ಯಾದಲ್ಲಿಯೇ ಅತ್ಯಂತ ದೊಡ್ಡದಾಗಿದೆ. ಈ ವೈಟ್-ಆ್ಯಂಟ್ಸ್ ಎಂಬ ರೋಗವನ್ನೂ ಸಹಿತ ಸರ್ಕಾರ ನಿಯಂತ್ರಣ ಮಾಡುತ್ತಿಲ್ಲ. ರೈತನಿಂದ ಪ್ರತಿಭಟನೆಯ ಕೂಗು ವ್ಯಕ್ತವಾಗಿಲ್ಲದಿರುವುದರಿಂದ ಆತ ಇಂದು ಇಂತಹ ಸಂಕಷ್ಟಕ್ಕೆ ಸಿಲುಕಿ ಹಾಕಿಕೊಂಡಿದ್ದಾನೆ. ನಾನು ಚೈನಾ ದೇಶಕ್ಕೆ ಮೂರು ಬಾರಿ ಹೋಗಿ ಬಂದಿದ್ದೇನೆ. ನಮ್ಮ ರಾಜ್ಯದ ಕೃಷಿ ಇಲಾಖೆ ಅಥವಾ ವಿಶ್ವವಿದ್ಯಾನಿಲಯದ ವತಿಯಿಂದ ಯಾರಾದರೂ ಕೂಡ ಚೈನಾ ದೇಶಕ್ಕೆ ಹೋಗಿ ಅಲ್ಲಿ ಬೆಳೆ ಹಾಕುವಾಗ ನೋಡಿದ್ದಾರೆಯೇ? ಮುಂಜಾಗ್ರತೆಯಿಂದ ರೋಗ ಬರುತ್ತದೆಂದು ರೈತರಿಗೆ ಅವರು ಸೂಚನೆ ಕೊಟ್ಟಿದ್ದಾರೆಯೇ? ಈ ನುಸಿ ರೋಗದ ಬಗ್ಗೆ ಸರ್ಕಾರ ಗಮನಿಸುವವರೆಗೂ ಯಾವ ಅಧಿಕಾರಿಗಳೂ ಕೂಡ ಇದರ ಬಗ್ಗೆ ಹೇಳಲಿಲ್ಲ. ನನಗೆ ಮೊದಲ ಬಾರಿಗೆ ದೆಹಲಿಯಲ್ಲಿ ಮಾನ್ಯ ಲೋಕಸಭಾ ಸದಸ್ಯರಾದ ಬಸವರಾಜ್‌ರವರು ಈ ನುಸಿ ರೋಗ ತಿಳಿಸಿದ ನಂತರವೇ ನಾನು ನನ್ನ ತೋಟದಲ್ಲಿದ್ದ ತೆಂಗಿನ ಗಿಡಗಳನ್ನು ನೋಡಿಕೊಳ್ಳಬೇಕಾಯಿತು. ಡಾ: ಮಲ್ಲಿಕ್ ಎಂಬುವವರನ್ನು ಈ ರೋಗದ ಬಗ್ಗೆ ಸಂಶೋಧನೆಗಾಗಿ ಸರ್ಕಾರ ಐದು ತಿಂಗಳ ಹಿಂದೆ ನೇಮಕ ಮಾಡಿದೆ. ಅವರು ರೋಗ ನಿಯಂತ್ರಣಕ್ಕಾಗಿ ಏನೇನು ಕ್ರಮಗಳನ್ನು ಕೈಗೊಳ್ಳಬೇಕೆಂದು ಸರ್ಕಾರಕ್ಕೆ ತಿಳಿಸಿದ್ದಾರೆ. ಕೇವಲ ಒಂದೇ ಒಂದು ಕ್ರಮದ ಮೂಲಕ ಮಾತ್ರವೇ ರೋಗವನ್ನು ನಿಯಂತ್ರಣಕ್ಕೆ ತರಲು ಸಾಧ್ಯವೇ ಎಂಬುದನ್ನು ಸರ್ಕಾರ ಹೇಳಬೇಕಾಗುತ್ತದೆ. ಕೋಲಾರದಲ್ಲಿ ನಾವು ರೇಷ್ಮೆ ಬೆಳೆ ಬೆಳೆಯುತ್ತೇವೆ. ಒಂದು ಗೂಡಿಗೆ ಬರೀ 800 ಮೀಟರ್ ಮಾತ್ರ ಬರುತ್ತದೆ...

ಅಧ್ಯಕ್ಷರು: ಮಾನ್ಯ ಶ್ರೀನಿವಾಸಗೌಡರವರೇ, ಇದುವರೆಗೂ ತಾವು ಟೊಮ್ಯಾಟೋ, ರೇಷ್ಮೆಗಳ ಬಗ್ಗ ಮಾತನಾಡುತ್ತಿದ್ದೀರಿ. ನುಸಿ ರೋಗದ ಬಗ್ಗೆ ಮಾತನಾಡಿ. ರೇಷ್ಮೆ ಬಗ್ಗೆ ತಾವು ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಬಹುದು. ಬೇಗನೇ 2-3 ನಿಮಿಷಗಳಲ್ಲಿ ತಮ್ಮ ಭಾಷಣ

ಮುಗಿಸಿ;

ಶ್ರೀ ಕೆ.ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೇ, ರೈತರ ಮಕ್ಕಳಾಗಿ ನಾವು ಏಕಾದರೂ ಹುಟ್ಟಿದೆವೋ ಎನ್ನುವಂತಹ ನೋವು ನನಗಾಗುತ್ತಿದೆ. ಇವತ್ತು ರೈತ ಬೆಳೆದಂತಹ ಬೆಳೆಗಳಿಗೆ ಸೂಕ್ತ ಬೆಲೆ ಸಿಗುತ್ತಿಲ್ಲ. ಒಂದು ವರ್ಷದ ಹಿಂದೆಯೇ ಕಪ್ಪು ತಲೆ ಹುಳು ರೋಗ ಬಂದಾಗ ನಾವು ಮುಂಜಾಗ್ರತೆ ವಹಿಸಿದ್ದಲ್ಲಿ ಇಷ್ಟೆಲ್ಲಾ ಅನಾಹುತಗಳು ಆಗುತ್ತಿರಲಿಲ್ಲ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ರೈತರ ಬೆಳೆಗಳಿಗೆ ಸರ್ಕಾರ ಕೂಡ ಸ್ಪಂದಿಸುತ್ತಿಲ್ಲ, ಪ್ರಕೃತಿಯೂ ಕೂಡ ರೈತರಿಗೆ ವಿರೋಧಿಯಾಗುತ್ತಿದೆ. ಮಾನ್ಯ ಸಚಿವರಿಗೆ ನಾನು ಮಾನ್ಯ ಅಧ್ಯಕ್ಷರ ಮೂಲಕ ಒಂದು ಪ್ರಾರ್ಥನೆಯನ್ನು ಮಾಡುತ್ತಿದ್ದೇನೆ. ಕೋಲಾರ ಜಿಲ್ಲೆಯಲ್ಲಿ ನುಸಿ ರೋಗ ನಿಯಂತ್ರಣಕ್ಕಾಗಿ ಅಧಿಕಾರಿಗಳಿಗೆ ಕೇವಲ ಎರಡು ಜೀಪ್ ಮಾತ್ರ ಕೊಡಲಾಗಿದೆ. ಈ ಎರಡೇ ವಾಹನಗಳಿಂದ ಅವರು ಎಷ್ಟು ತಾಲ್ಲೂಕುಗಳಿಗೆ ಭೇಟಿ ನೀಡಲು ಸಾಧ್ಯವಾಗುತ್ತದೆ? ಎಲ್ಲಾ ಇಲಾಖೆಗಳಿಂದಲೂ ವಾಹನಗಳನ್ನು ಒದಗಿಸಿಕೊಂಡು ನುಸಿ ರೋಗ ನಿಯಂತ್ರಣ ಮಾಡುವ ತಂತ್ರಜ್ಞಾನ ಎಲ್ಲಾ ರೈತರಿಗೂ ಕೂಡ ತಲುಪುವಂತೆ ಮಾಡಿ. ಈ ಕೆಲಸವನ್ನು ಕಳೆದ 3-4 ತಿಂಗಳಿನಿಂದ ನೀವು ಮಾಡಿಲ್ಲ. ಜಿಲ್ಲಾಧಿಕಾರಿಗಳನ್ನು ನೀವು ಟಾಸ್ಕ್‌ಫೋರ್ಸ್ ಅಧ್ಯಕ್ಷರುಗಳನ್ನಾಗಿ ಮಾಡಿದ್ದೀರಿ. ಚುನಾವಣೆ ನಡೆಸುವ ಜವಾಬ್ದಾರಿಯೂ ಸಹಾ ಅವರಿಗೆ ವಹಿಸಲಾಗಿದೆ. ಲಾಟರಿ ಸಿಸ್ಟಮ್ ಮೂಲಕ ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳನ್ನು ಚುನಾಯಿಸುವ ಉಸ್ತುವಾರಿ ಸಹಾ ಅವರಿಗೇ ವಹಿಸಲಾಗಿದೆ. ಹೀಗಿರುವಾಗ ಜಿಲ್ಲಾಧಿಕಾರಿಗಳು ಈ ನುಸಿ ರೋಗ ನಿಯಂತ್ರಣ ಬಗ್ಗೆ ಹೇಗೆ ಗಮನಹರಿಸಲು ಸಾಧ್ಯವಾಗುತ್ತದೆ. ದಯವಿಟ್ಟು ಸರ್ಕಾರ ಎಲ್ಲಾ ಇಲಾಖೆಗಳ ಜೀಪುಗಳನ್ನೂ ಕೂಡ ತೆಗೆದುಕೊಂಡು, ಎಲ್ಲಾ ಇಲಾಖೆಗಳ ಸಿಬ್ಬಂದಿಗಳನ್ನೂ ಸಹಾ ಇನ್‌ವಾಲ್ವ್ ಮಾಡಿಕೊಂಡು ಈ ರೋಗ ನಿಯಂತ್ರಣದ ಬಗ್ಗೆ ರೈತರಿಗೆ ಸೂಕ್ತ ಮಾಹಿತಿ ನೀಡಬೇಕೆಂದು ಕೋರುತ್ತೇನೆ. ಸ್ಪ್ರೇ ಮಾಡಿ ರೋಗವನ್ನು ನಿಯಂತ್ರಣ ಮಾಡಬೇಕು. ರೈತರ ಕಷ್ಟವನ್ನು ಅರಿತು ವ್ಯವಸಾಯ ಇಲಾಖೆ ಮಂತ್ರಿಗಳಿಗೂ ಸಹಿತ ಇದರ ಬಗ್ಗೆ ಗಮನ ಇದೆ. ಅವರಿಗೆ ನಾನು ಬಹಳಷ್ಟು ಕೇಳಿಕೊಂಡಿದ್ದೇನೆ. ಆದ್ದರಿಂದ ಇನ್ನಷ್ಟು ಟಾಸ್ಕ್ ಫೋರ್ಸ್ ಮಾಡಿ ಜಿಲ್ಲಾಧಿಕಾರಿಗಳಿಗೆ ಬಿಟ್ಟರೆ ಆಗುವುದಿಲ್ಲ. ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳಿಂದ ರಿವ್ಯೂ ಮಾಡಿ ನೋಡಿದರೆ ನಿಮಗೆ ಮಾಹಿತಿ ಸಿಗುತ್ತದೆ. ಯಾವ ಯಾವ ಜಾಗದಲ್ಲಿ ಅವರು ಹೋಗಿದ್ದಾರೆ ಏನೆಂದು ಮಾಹಿತಿ ಸಿಗುತ್ತದೆ. ನೀವು ಇಲ್ಲಿಯೇ ಇದ್ದು ನಿಮ್ಮ ಜಿಲ್ಲಾಧಿಕಾರಿಗಳು ಹೋಗದೆ ಇದ್ದರೆ ಹೇಗೆ? ನಿಮ್ಮ ನುಸಿ ರೋಗ ಮತ್ತು ಕಪ್ಪು ತಲೆ ಹುಳು ತೆಂಗಿನ ಕಾಯಿ ತಿಂದು ಹಾಕುತ್ತವೆ. ತೆಂಗಿನ ಗಿಡವನ್ನೂ ತಿನ್ನುತ್ತದೆ, ಮತ್ತು ಮನುಷ್ಯನನ್ನೂ ಕೂಡ ತಿನ್ನುತ್ತವೆ ಎಂದು ಹೇಳಿ ನನಗೆ

ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಮಾತನಾಡುವುದು 6.10ಕ್ಕೆ ಮುಗಿಸೋಣ, ಆನಂತರ ಅವರು ಉತ್ತರ ಕೊಡಲಿ. ನಾವು ಮೊದಲು ತೀರ್ಮಾನ ಮಾಡಿದ ಹಾಗೆ ಐದೂವರೆಗೆ ಮುಕ್ತಾಯವಾಗಬೇಕಾಗಿತ್ತು, ಸಿಂಧ್ಯರವರು ಮತ್ತು ಬೈರೇಗೌಡರು ಸ್ವಲ್ಪ ಹೆಚ್ಚು ಕಡಿಮೆ ಮಾಡಿ ಎಂದು ಹೇಳಿದರು.

ಶ್ರೀ ಬಿ.ಸೋಮಶೇಖರ್: 20 ರಿಂದ 25 ನಿಮಿಷ ಬೇಕು, ನೀವು ಬೇಡವೆಂದು ಹೇಳಿದರೆ ನಾನು ಕುಳಿತುಕೊಳ್ಳುತ್ತೇನೆ. ಪತ್ರಿಕೆಯವರು ಸುಮಾರು ನಾಲ್ಕೈದು ತಿಂಗಳುಗಳಿಂದ ಎಷ್ಟು ಸಹಕಾರಿಯಾಗಿದ್ದಾರೆಂದರೆ, ನಾವು ವಿಧಾನ ಸಭೆಯಲ್ಲಿ ಜನ ಪ್ರತಿನಿಧಿಗಳು ತೀಕ್ಷ್ಣರೀತಿಯಿಂದ ಈ ವಿಚಾರವನ್ನು ನಾವು ಚರ್ಚೆ ಮಾಡಲಿಲ್ಲವೆಂದರೆ, ಜನರು ನಮ್ಮ ಬಗ್ಗೆ ಯಾವ ರೀತಿಯಿಂದ ಯೋಚನೆ ಮಾಡುತ್ತಾರೆಂದು ನಮಗೆ ನಾಚಿಕೆಯಾಗುತ್ತದೆ. ನಾನು ಕೆಲವು ವಿಚಾರಗಳನ್ನು ಅಧ್ಯಯನ ಮಾಡಿದ್ದೇನೆ, ಈ ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರಬೇಕಾಗುತ್ತದೆ, ತಾವು ಅವಕಾಶ ಕೊಟ್ಟರೆ ಹೇಳುತ್ತೇನೆ, ಇಲ್ಲದಿದ್ದರೆ ಕುಳಿತುಕೊಳ್ಳುತ್ತೇನೆ. ಆರು ಕಾಲು ಎಂದು ಕಾನ್‌ಸ್ಟಿಟ್ಯೂಷನ್‌ನಲ್ಲಿ ಎಲ್ಲಿಯೂ ಇಲ್ಲ. ತಾವು ಮನಸ್ಸು ಮಾಡಿದರೆ ಈ ವಿಚಾರ ಲಕ್ಷಾಂತರ ರೈತರ ವಿಚಾರ. ಸುಮಾರು 10 ಲಕ್ಷ ಜನ ಇದ್ದಾರೆ. ಕರ್ನಾಟಕದಲ್ಲಿ ಈ ವಿಚಾರದಲ್ಲಿ ಮುಂದುವರೆಸಿಕೊಂಡು ಹೋಗಿ ನೋಡಿದರೆ ಗೊತ್ತಾಗುತ್ತದೆ. ಚರ್ಚೆಗೆ ಅವಕಾಶ ಕೊಡಲಿಲ್ಲವೆಂದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು: ಈಗಾಗಲೇ ಎರಡು ಗಂಟೆಯಾಗಿದೆ. ಇನ್ನು ಅರ್ಧ ಗಂಟೆ ಚರ್ಚೆ ಮಾಡೋಣ. ಆ ನಂತರ ಅವರು ಉತ್ತರ ಕೊಡುತ್ತಾರೆ.

+ ಶ್ರೀ ಕೆ.ಹೆಚ್.ಹನುಮೇಗೌಡ (ಹಾಸನ): ಸನ್ಮಾನ್ಯ ಅಧ್ಯಕ್ಷರೆ, ಕಳೆದ 8-10 ತಿಂಗಳುಗಳಿಂದ ಭೀಕರವಾದ ನುಸಿ ರೋಗ ತಗುಲಿ ತೆಂಗಿನ ತೋಟಗಳನ್ನು ಸರ್ವ ನಾಶ ಮಾಡುತ್ತಿದೆ. ಇದನ್ನೇ ನಂಬಿಕೊಂಡಿರುವ ಜನ ಹತಾಶರಾಗಿದ್ದಾರೆ. ಏಳೆಂಟು ವರ್ಷಗಳಿಂದ ಬಹಳ ಕಷ್ಟದಿಂದ ಆ ಗಿಡವನ್ನು ಹಾಕಿ ಪೋಷಣೆ ಮಾಡುತ್ತಾರೆ. 90 ರಿಂದ 100 ವರ್ಷ ಆ ತೆಂಗಿನ ಗಿಡ ಆ ಸಂಸಾರವನ್ನು ಸಾಕುತ್ತದೆ. ಹೆತ್ತು ಸಾಕಿದ ಗಂಡು ಮಕ್ಕಳು ಒಂದು ಪಕ್ಷ ತಂದೆತಾಯಿಗಳಿಗೆ ಮೋಸ ಮಾಡಿ ಮನೆ ಬಿಟ್ಟು ಹೋಗಬಹುದು, ಆದರೆ ತೆಂಗಿನ ಗಿಡಗಳು ನಿರಂತರವಾಗಿ 90 ವರ್ಷ ಬೆಳೆಯನ್ನು ಕೊಡುತ್ತವೆ. ಎಷ್ಟೋ ಜನ ರೈತರು ಅವರ ಪರಿಸ್ಥಿತಿಯನ್ನು ಹೇಳಬಾರದು ಅಂತಹ ಕಷ್ಟದ ಸ್ಥಿತಿಗೆ ಸಿಕ್ಕಿಕೊಂಡಿದ್ದಾರೆ. ಬಹಳ ಜನ ಮಾತನಾಡಿದರು. ಇರುವ ವಿಚಾರವನ್ನು

ತಮ್ಮ ಮುಂದೆ ಹೇಳಿಕೊಂಡರು. ಆದರೆ ತೆಂಗನ್ನೇ ನಂಬಿಕೊಂಡು ಜೀವನ ಮಾಡತಕ್ಕಂತಹ ಕೆಲವು ಸಂಸಾರಗಳು ಸರ್ವನಾಶದ ಅಂಚಿಗೆ ಬಂದು ತಲುಪಿವೆ. ಮಳೆ ಬೆಳೆ ಸರಿಯಾಗಿ ಆಗುತ್ತಿಲ್ಲ, ಹಳ್ಳ ಪ್ರದೇಶಗಳಲ್ಲಿ ಒಂದೊಂದು ಸಂಸಾರದವರು 10,20, ಮತ್ತು 30 ತೆಂಗಿನ ಗಿಡಗಳನ್ನು ಹಾಕಿಕೊಂಡಿದ್ದಾರೆ. ಇದರಲ್ಲಿ ಬರತಕ್ಕಂತಹ ಅಲ್ಪಸ್ವಲ್ಪ ಉತ್ಪತ್ತಿಯಲ್ಲಿ ಮನೆ ಸಂಸಾರದ ಖರ್ಚು ಅವರು ನೆರವೇರಿಸಿಕೊಳ್ಳುತ್ತಿದ್ದಾರೆ. ಇದೂ ಹೋದರೆ ಅವರ ಗತಿ ಏನೆಂದು ಹೇಳುವುದಕ್ಕಾಗುವುದಿಲ್ಲ. ಇದು ನೂರು ವರ್ಷದ ಫಸಲು. ವರ್ಷಕ್ಕೆ ಮೂರು ಸಾರಿ ಮಳೆಯಾದರೂ ಕೂಡ ಮೂರು ಹದ ಬಳೆ ಬಿದ್ದರೂ ಕೂಡ 50-60 ಕಾಯಿ ಬಿಡುತ್ತವೆ. ಇನ್ನು ಯಾವ ಬೆಳೆಯಲ್ಲೂ ರೈತರಿಗೆ ಇಂತಹ ಅನುಕೂಲ ಇಲ್ಲ. ಇಂತಹ ಒಂದು ಫಸಲು ರೈತರ ಕೈ ಬಿಟ್ಟು ಹೋದರೆ ಆ ರೈತನ ಪರಿಸ್ಥಿತಿ ಏನಾಗಬೇಕು ಎಂಬ ಆಲೋಚನೆ ಮಾಡಿ ನೋಡಿ ಈ ಸರ್ಕಾರಕ್ಕೆ ನಾನು ಒಂದು ಸಲಹೆ ಕೊಡುತ್ತೇನೆ. ಮನುಷ್ಯನಿಗೆ ಸಾಂಕ್ರಾಮಿಕ ರೋಗ ಬಂದರೆ ಪ್ಲೇಗ್, ಅಥವಾ ವಾಂತಿ ಬೇಧಿ ಎಲ್ಲಿ ಬರುತ್ತದೆ ಅಲ್ಲಿ ತಕ್ಷಣ ಸಂಬಂಧಪಟ್ಟವರಿಗೆ ಕರೆಸಿ ಇಂಜಕ್ಷನ್ ತೆಗೆದುಕೊಳ್ಳಿ ಎಂದು ಯಾರೂ ಹೇಳುವುದಿಲ್ಲ. ಇಮ್ಮಿಡಿಯಟ್ಟಾಗಿ ಸರ್ಕಾರದವರು ಎಲ್ಲ ವ್ಯವಸ್ಥೆ ಮಾಡಿ ಡಾಕ್ಟರ್‌ಗಳಿಗೆ ಕಳುಹಿಸಿ ಔಷಧಿ ಕೊಟ್ಟು ಆ ಏರಿಯಾ ಕಂಪ್ಲೀಟ್ ಕಂಟ್ರೋಲ್ ಮಾಡಿ ರೋಗ ಬೇರೆ ಕಡೆ ಹರಡದಂತೆ ವ್ಯವಸ್ಥೆ ಮಾಡುತ್ತಾರೆ. ಖರ್ಚು ಕಡಿಮೆ ಬೀಳುತ್ತದೆ. ಈಗ ಇದೇ ರೀತಿ ಈ ಫಸಲುಗಳಾದ ಮಾವು ತೆಂಗಿನ ಫಸಲುಗಳಿಗೆ ರೋಗ ಕಂಡ ತಕ್ಷಣ ಇಲಾಖೆಯವರು ಹೋಗಿ ಅಲ್ಲಿ ಔಷಧಿ ಸಿಂಪಡಿಸಿ ಕಂಟ್ರೋಲ್‌ಗೆ ತರದೆ ಇದ್ದರೆ ಇದು ದೇಶದ ಎಲ್ಲಾ ಭಾಗಗಳಿಗೂ ಹರಡುತ್ತದೆ. ಎಲ್ಲ ಮುಗಿಸಿ ಕೊನೆ ಹಂತಕ್ಕೆ ಬಂದು ಕೂತಿದೆ ಆದರೂ ಇನ್ನೂ ಚರ್ಚೆ ನಡೆಯುತ್ತಿದೆ. ರೈತರ ಗತಿ ಏನು, ರೈತರು ಬೆಳೆದರೆ ತಾನೆ ತಿನ್ನುವುದು. ತೆಂಗಿನ ಮರ ಹೀಗಾಗುತ್ತಿದೆ ಎಂದು ಹೇಳುತ್ತಾರೆ. 10 ರಿಂದ 15 ರೂಪಾಯಿ ಕೊಟ್ಟು ಚಟ್ನಿ ಮಾಡಿಕೊಂಡು ತಿಂದರೆ ಅದರ ಕಷ್ಟ ಗೊತ್ತಾಗುತ್ತದೆ. ಅದರಿಂದ ಆಗುವಂತಹ ಎಷ್ಟೋ ಉತ್ಪನ್ನಗಳು ನಾರು, ನಾರಿನಿಂದ ಬರತಕ್ಕಂತಹ ಅಂಶ ಟಿಂಬರ್ ರೇಟ್ ನಿಮಗೆ ಗೊತ್ತಿದೆ. ತೆಂಗಿನ ಮರದಲ್ಲಿ ಮರದ ಮಟ್ಟಾಗುತ್ತದೆ. ಮೊದಲು ಮನೆಗೆ ಬೇಕಾದ ಸೌದೆ ಸುಲಭವಾಗಿ ಕಾಡಿಗೆ ಹೋಗಿ ತೆಗೆದುಕೊಂಡು ಬರುತ್ತಿದ್ದರು. ದನಕರುಗಳ ಸಗಣಿಯಲ್ಲಿ ಬೆರಣಿ ಮಾಡಿಕೊಳ್ಳುತ್ತಿದ್ದರು. ಅದೆಲ್ಲಾ ಮುಗಿದು ಹೋಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ರೈತರ ಮನೆಗಳಲ್ಲಿ ತೆಂಗಿನ ಮಟ್ಟೆ, ಗರಿಗಳು ಮತ್ತು ಸಿಪ್ಪೆಗಳನ್ನು ಉರವಲಾಗಿ ಉಪಯೋಗಿಸುತ್ತಿದ್ದರು. ಇಂತಹ ಫಸಲು ಕೈ ಬಿಟ್ಟು ಹೋಗುತ್ತಿದೆ, ಈ ಭಾಗದ ರೈತರ ಬಗ್ಗೆ ದಯವಿಟ್ಟು ಆಲೋಚನೆ ಮಾಡಿ, ಎಂತಹ ಕಷ್ಟದ ಪರಿಸ್ಥಿತಿಯಲ್ಲಿ ರೈತರು ಸಿಕ್ಕಿಕೊಂಡಿದ್ದಾರೆ, ಅವರ ಕಷ್ಟದ ಪರಿಸ್ಥಿತಿ ಏನು ಅವನು ತಂದಿರತಕ್ಕಂತಹ ಸಾಲವನ್ನು ಹೇಗೆ ತೀರಿಸುತ್ತಾನೆ, ಮನೆಖರ್ಚು ಹೇಗೆ ಮಾಡುತ್ತಾನೆ, ಮನೆಯಲ್ಲಿ ನಾಲ್ಕು ಜನ ಇದ್ದರೆ, ಓದುವ ಖರ್ಚು, ಬಟ್ಟೆ ಬರೆ, ಯಾರು ತಂದು

ಕೊಡುತ್ತಾರೆ, ಊಟಕ್ಕೆ ಯಾರು ವ್ಯವಸ್ಥೆ ಮಾಡುತ್ತಾರೆ, ಇಂತಹ ಅಗಾಧವಾದ ಸಮಸ್ಯೆ ಇನ್‌ವಾಲ್ವ್ ಆಗಿರುವುದರಿಂದ ಈ ವಿಚಾರದಲ್ಲಿ ಸರ್ಕಾರ ಹಗುರವಾಗಿ ತೆಗೆದುಕೊಳ್ಳಬಾರದು. ಈ ಕಾಯಿಲೆ ಇಷ್ಟೊಂದು ಭೀಕರವಾಗಿ ಹರಡಿ ರೈತರ ಸರ್ವನಾಶಕ್ಕೆ ಕಾರಣವಾಗಿದ್ದರೆ ಸರ್ಕಾರ ಕಾರಣ, ಸರ್ಕಾರದ ಅಧಿಕಾರಿಗಳು ಕಾರಣವೆಂದು ನಾನು ಈ ಸಂದರ್ಭದಲ್ಲಿ ಛಾರ್ಜ್ ಮಾಡಿ ಹೇಳುತ್ತೇನೆ. ನಾನು ಮೊದಲೇ ತಿಳಿಸಿದ ಹಾಗೆ ಯಾವುದೋ ಹಳ್ಳಿಯಲ್ಲಿ ನಾಲ್ಕು ಕಡೆ, ಅಥವಾ ಒಂದು ಊರಿನಲ್ಲಿ ಈ ಕಾಯಿಲೆ ಗಿಡಗಳಿಗೆ ಕಂಡ ತಕ್ಷಣ ಅಧಿಕಾರಿಗಳು ಏನು ಮಾಡುತ್ತಿದ್ದರು. ತಕ್ಷಣ ಔಷಧಿ ತೆಗೆದುಕೊಂಡು ಹೋಗಿ ಅಲ್ಲಿ ಸಿಂಪಡಿಸಿ ಅದನ್ನು ಕಂಟ್ರೋಲ್‌ಗೆ ತರಬಹುದಾಗಿತ್ತು. ಅದು ಎಲ್ಲಾ ಕಡೆ ಹರಡಿ ಹಾಳಾಗಿ ಹೋದ ಮೇಲೆ ಡೆಪ್ಯುಟಿ ಕಮೀಷನರ್‌ಗೆ ಹೇಳಿದ್ದಾರೆ. ಅವರು ಹೋದ ಮೇಲೆ 10 ಲಕ್ಷ 20 ಲಕ್ಷ, ಆರು ಲಕ್ಷ ಕೊಡುತ್ತಾರೆ, ಇದು ತೃಣ ಮಾತ್ರ. ಯಾರಿಗೋಸ್ಕರ ಈ ಹಣ ಕೊಡುತ್ತಿದ್ದೀರಿ, ಎಲ್ಲಾದರೂ ಕಾಯಿಲೆ ಕಂಡ ತಕ್ಷಣ ಅಲ್ಲಿ ಹೋಗಿ ಔಷಧಿ ಸಿಂಪಡಿಸಿ ಕಂಟ್ರೋಲ್ ಮಾಡಬಹುದಾಗಿತ್ತು. ಅಧಿಕಾರಿಗಳಿಗೆ ಲಂಚ ಕೊಟ್ಟು ಎಲ್ಲ ಮಾಡಿದರೂ ಅವರು ಕೋಟೆ ಎಲ್ಲ ಬಿದ್ದು ಸರ್ವ ನಾಶವಾದ ಮೇಲೆ ಇವರು ಯುದ್ಧಕ್ಕೆ ಹೋದ ಪರಿಸ್ಥಿತಿಯಾಗಿದೆ. ತೆಂಗಿನ ಮರ ನೆಡುವುದಕ್ಕೆ ಸಾಲ ತೆಗೆದುಕೊಂಡಿದ್ದಾರೆ. ಯಾವ್ಯಾವುದೋ ರೂಪದಲ್ಲಿ ಸಾಲ ತೆಗೆದುಕೊಂಡಿದ್ದಾರೆ. ಬಾವಿ ತೋಡುವುದಕ್ಕೆ ಸಾಲ ಪಡೆದುಕೊಂಡಿದ್ದಾರೆ. ಬೆಳೆ ಹೋಯಿತು ಎಂದರೆ ಕೋ-ಆಪರೇಟಿವ್ ಡಿಪಾರ್ಟ್‌ಮೆಂಟ್‌ನವರು ಕೇಳುತ್ತಾರಾ? ಬ್ಯಾಂಕಿನವರು ಕೇಳುತ್ತಾರಾ? ಬೆಳೆ ಹೋಯಿತು ಎಂದರೂ ಕೇಳುವುದಿಲ್ಲ. ಇದ್ದಿದ್ದು ಇಲ್ಲದ್ದು ಎಲ್ಲ ಹೊತ್ತುಕೊಂಡು ಹೋಗಿ ಹರಾಜು ಹಾಕುತ್ತಾರೆ. ಇಂತಹ ಭೀಕರವಾದ ಪರಿಸ್ಥಿತಿ ಬಂದಿರುವಾಗ ಇದು ಆರು ತಿಂಗಳುಗಳಿಂದ ಪೇಪರ್‌ನಲ್ಲಿ ಬರುತ್ತಿದೆ. ಅವರು ಸ್ಟೇಟ್‌ಮೆಂಟ್ ಬರೆಯುತ್ತಾರೆ, ಇವರೂ ಬರೆಯುತ್ತಾರೆ. ಇವರು ಅಲ್ಲಿ ಏನಾದರೂ ಮಾಡಿದ್ದಾರಾ? ಅಧಿಕಾರಿಗಳಿಗೆ ತೆಂಗಿನ ತೋಟ ಇದೆಯಾ? ಆ ಸಂಕಟ ಗೊತ್ತಾ? ಇದೆಲಾ ಆಲೋಚನೆ ಮಾಡಿ ಮಾಡಬೇಕು. ಎಲ್ಲಿ ಕಾಯಿಲೆ ಕಾಣುತ್ತದೆ ಅಲ್ಲಿ ತಕ್ಷಣ ಹೋಗಿ ಔಷಧಿ ಸಿಂಪಡಿಸಿ ಕಂಟ್ರೋಲ್‌ಗೆ ತರಲಿ. ಒಬ್ಬ ರೈತನಿಗೆ ಕೊಡುತ್ತಾರೆ ಅವನು ಹೋಗಿ ಔಷಧಿ ಹೊಡೆಯುತ್ತಾನೆ. ಇನ್ನೊಬ್ಬ ಪಕ್ಕದಲ್ಲಿ ಬಡವ ಇರುತ್ತಾನೆ ಅವನು ಔಷಧಿ ಹೊಡೆಯುವುದಿಲ್ಲ. ಈ ಔಷಧಿ ಪರಿಣಾಮ 15 ದಿನಗಳ ಕಾಲ ಇರುತ್ತದೆ. 15 ದಿವಸಗಳು ಕಳೆದ ಮೇಲೆ ಪಕ್ಕದ ತೋಟದಲ್ಲಿರುವ ಕಾಯಿಲೆ ಮತ್ತೆ ಅಲ್ಲಿಗೆ ಬರುತ್ತದೆ. ಹೀಗಾಗುವುದರಿಂದ ಇದನ್ನು ಎಫೆಕ್ಟೀವ್ ಆಗಿ ಕಂಟ್ರೋಲ್‌ಗೆ ತರುವುದಕ್ಕೆ ಸಾಧ್ಯವಾಗುವುದಿಲ್ಲ. ಕೆಲವು ಕಡೆ ಬೇಕಾದಷ್ಟು ಉತ್ಪತ್ತಿ ಇರುತ್ತದೆ, ತೆಂಗಿನ ಮರ ಒಂದಕ್ಕೆ ನಂಬಿರುವುದಿಲ್ಲ, 50-100 ಗಿಡಗಳಿದ್ದರೂ ಹೋದರೆ ಹೋಗಲಿ ಬಿಡಿ, ನಮಗೆ ಬೇಕಾದಷ್ಟು ಅನುಕೂಲ ಇದೆ ಎಂದು ಅವನು ಸುಮ್ಮನಾಗುತ್ತಾನೆ. ಅವನ

ತೋಟದಲ್ಲಿ ಉತ್ಪತ್ತಿಯಾದ ಕಾಯಿಲೆ ಇಡೀ ಆ ಭಾಗಕ್ಕೆ ಹರಡುತ್ತದೆ. ನಾನು ಒಂದು ಸಲಹೆ ಕೊಡುತ್ತೇನೆ, ಮಾನ್ಯ ಕೃಷಿ ಸಚಿವರಿಗೆ ಮತ್ತು ತೋಟಗಾರಿಕೆ ಸಚಿವರಿಬ್ಬರಿಗೂ ಗೊತ್ತಿದೆ, ಕಾಯಿಲೆ ಕಂಡ ತಕ್ಷಣ ಮನುಷ್ಯರಿಗೆ ಕಾಯಿಲೆ ಬಂದರೆ ಎಲ್ಲರೂ ವೈದ್ಯರು ಅಲ್ಲಿ ಹೋಗಿ ಹೇಗೆ ಕ್ಯಾಂಪ್ ಹಾಕುತ್ತಾರೋ, ಆ ರೀತಿ ನೀವು ಏಕೆ ಮಾಡಲಿಲ್ಲ. ಆ ರೀತಿ ಮಾಡಿದ್ದರೆ ನಿಮಗೆ ಕಂಟ್ರೋಲ್ ಮಾಡುವುದಕ್ಕೆ ಆಗುತ್ತಿರಲಿಲ್ಲವಾ? ಇದನ್ನು ದಯವಿಟ್ಟು ಆಲೋಚನೆ ಮಾಡಿ ನೋಡಿ. ಇದೆಲ್ಲಾ ಮುಗಿದ ಮೇಲೆ ತಿಂಗಳಿಗೆ ಒಂದು ಸಾರಿ ಔಷಧಿ ಕೊಡಿ ಎಂದು ಕಮಿಟಿ ಮಾಡಿ ಹೇಳುತ್ತೀರಲ್ಲ, ಹಾಗೆ ಮೊದಲು ನೀವು ಏಕೆ ಮಾಡಲಿಲ್ಲ? ನೀವು ಕೊಟ್ಟಿರತಕ್ಕಂತಹ ಔಷಧಿ ಪರಿಣಾಮಕಾರಿಯಾಗಿದೆ ಎಂದು ಯಾವ ಗ್ಯಾರಂಟಿ, ಒಂದು ಸಾರಿ, ಎರಡು ಸಾರಿ, ಮೂರು ಸಾರಿ ಹಾಕಿದ ಮೇಲೆ ಅವು ಅದಕ್ಕೆ ಹೊಂದಿಕೊಂಡು ಬಿಡುತ್ತವೆ. ಅವು ಹಾಳಾಗುವುದಿಲ್ಲ. ಎಷ್ಟೊಂದು ಕೆಟ್ಟ ಪರಿಸ್ಥಿತಿಗೆ ಈ ಸರ್ಕಾರ ಮತ್ತು ಅಧಿಕಾರಿಗಳು ಹೊಣೆಯಾದರು ಎನ್ನುವುದನ್ನು ನೀವು ದಯವಿಟ್ಟು ಆಲೋಚನೆ ಮಾಡಿ ನೋಡಿ. ನೀವು ಯಾರ ತೋಟದಲ್ಲಿ ಕೀಟಗಳು ತಿನ್ನುತ್ತಿವೆ, ಅವರಿಗೆ ಟ್ಯಾಕ್ಸ್ ಹಾಕಿ. ಸೆಸ್ ಹಾಕಿ. ತೆಂಗಿನ ಬೆಳೆ ಒಂದು ಗಿಡಕ್ಕೆ ಅಥವಾ ಒಂದು ವರ್ಷಕ್ಕೆ ಇಷ್ಟು ಎಂದು ಟ್ಯಾಕ್ಸ್ ಹಾಕಿ.

6.00 ಪಿ.ಎಂ

ತೆಂಗಿನ ಬೆಳೆ ಸಂರಕ್ಷಣೆಗೆಂದು ಒಂದು ಎಕರೆಗೆ ಇಷ್ಟು ಟ್ಯಾಕ್ಸ್ ಎಂದು ನೀವು ಹಾಕಿದರೆ ಎಲ್ಲಾ ರೈತರು ಆ ಸೆಸ್ ಹಣವನ್ನು ಕೊಟ್ಟೇಕೊಡುತ್ತಾರೆ. ಇದರಿಂದ ತೆಂಗಿನ ಬೆಳೆ ಸಂರಕ್ಷಣೆಗೆ ಬೇಕಾದ ಔಷಧೋಪಚಾರವನ್ನು ಸಕಾಲಕ್ಕೆ ನೀವು ಮಾಡಲು ಅನುಕೂಲವಾಗುತ್ತದೆ. ಅದನ್ನು ಮಾಡದೇ ರೋಗ ಉಲ್ಬಣವಾಗಿರುವಾಗ ಔಷಧಿ ಹೊಡೆಯಲು ಅಧಿಕಾರಿಗಳಿಗೆ ಜೀಪ್‌ಗಳನ್ನು ಕೊಟ್ಟದ್ದೀವೆಂದರೆ ಇದರಿಂದ ಕೇವಲ ಪೆಟ್ರೋಲ್ ಖರ್ಚಾಗುತ್ತದಷ್ಟೆ. ಏಕೆಂದರೆ ತೆಂಗಿನ ಗಿಡಕ್ಕೆ ಬಂದಿರುವ ರೋಗದ ಸಂಕಟ ಅವರಿಗೆ ಗೊತ್ತಿರುವುದಿಲ್ಲ. ಯಾರು ತೆಂಗಿನಗಿಡಗಳನ್ನು ಹೊಂದಿದ ರೈತಾಪಿ ವರ್ಗದ ಅಧಿಕಾರಿಗಳಿರುತ್ತಾರೆ ಅವರಿಗೆ ಮಾತ್ರ ಆ ಸಂಕಟ ಗೊತ್ತಿರುತ್ತದೆ. ಏಕೆಂದರೆ ತೆಂಗಿನ ಬೆಳೆಯ ಕೃಷಿ ಬಗ್ಗೆ ಅವನಿಗೆ ಚೆನ್ನಾಗಿ ವಿಷಯಗಳು ತಿಳಿದಿರುತ್ತದೆ. ಅದನ್ನು ಬಿಟ್ಟು ಏನೂ ಗೊತ್ತಿಲ್ಲದಿರುವವರಿಗೆ ನೀವು ಔಷಧಿಯನ್ನು ಹೊಡೆಯಲು ಕಳುಹಿಸಿದರೆ ಕಾರ್ಯಕ್ರಮ ಸಫಲವಾಗುವುದಿಲ್ಲ. ಅದನ್ನು ಬಿಟ್ಟು ತೆಂಗಿನ ಮರಕ್ಕೆ ಎಲ್ಲೋ ಔಷಧಿಯನ್ನು ಹೊಡೆಯುತ್ತಾರಷ್ಟೆ. ಇದಕ್ಕೆ ಉದಾಹರಣೆಯಾಗಿ ತೆಂಗಿನ ಕಾಯಿಯನ್ನೇ ತೋರಿಸಿದಾಗ ಕಾಗೋಡು ತಿಮ್ಮಪ್ಪನವರು ರೇಗಾಡಿಬಿಟ್ಟರು. ತೆಂಗಿನಕಾಯಿಗೆ ಏನು ಕಾಯಿಲೆ ಬಂದಿದೆ ಎನ್ನುವುದನ್ನು ತೋರಿಸುವ ಸದುದ್ದೇಶದಿಂದ ತಂದು ತೋರಿಸಿದುದು. ಕಾಗೋಡು ತಿಮ್ಮಪ್ಪನವರೇ ನಿಮ್ಮಲ್ಲಿ ತೆಂಗಿನ ಮರವಿಲ್ಲ,

ನೀವು ಅದರ ಮೇಲೆಯೇ ಅವಲಂಬಿತರಾಗಿಲ್ಲ. ನಿಮ್ಮದು ಹೋಟೆಲ್ ಇರುವುದರಿಂದ ನೀವು ಹೇಗೋ ಅದನ್ನು ನಡೆಸಿಕೊಂಡು ಹೋಗುತ್ತೀರಿ. ಆದರೆ ತೆಂಗಿನಮರವನ್ನೇ ನಂಬಿಕೊಂಡಿರುವ ರೈತರ ಗತಿಯೇನು? ಅವನು ಹೇಗೆ ಜೀವನವನ್ನು ನಡೆಸಬೇಕು? ಇದಕ್ಕಾಗಿ ಅವನೇನು ಮಾಡಬೇಕು ಎಂಬ ಬಗ್ಗೆ ದಯವಿಟ್ಟು ನೀವು ಹೇಳಿ.

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಸಚಿವರು): ಹನುಮೇಗೌಡರೇ, ನೀವೇ ಸರ್ಕಾರದ ಮಂತ್ರಿಗಳಾಗಿದ್ದರೆ ನೀವೇನು ಮಾಡುತ್ತಿದ್ದಿರಿ ಎಂಬುದನ್ನು ಹೇಳಿ.

ಶ್ರೀ ಕೆ.ಹೆಚ್.ಹನುಮೇಗೌಡ: ಕಾಫಿ ತೋಟದವರಾದ ಚಂದ್ರೇಗೌಡರು ನೀವೇನು ಮಾಡುತ್ತಿದ್ದಿರಿ ಎಂದು ನನ್ನನ್ನು ಕೇಳುತ್ತಾರೆ. ಒಂದು ವರ್ಷದಲ್ಲಿ ಪಾಪದ ಮಳೆ ಬಂದುಬಿಡುತ್ತದೆ; ಯಾವಾಗಲೋ ಒಂದು ಸಾರಿ ಗೊಬ್ಬರ ಹಾಕುತ್ತಾರೆ, ಕೂತು ಹಣ ಗಳಿಸಿ ಕಾರ್ ತೆಗೆದುಕೊಳ್ಳುತ್ತಾರೆ. ಹೀಗಿರುವ ಅವರಿಗೂ ನನಗೂ ಸಂಬಂಧವಿರುತ್ತದೆಯೇ?

ಶ್ರೀ ಡಿ.ಬಿ.ಚಂದ್ರೇಗೌಡ: ನಾನೇನು ನಿಮ್ಮನ್ನು ಕಾಫಿ ಪ್ಲಾಂಟ್ ಇಟ್ಟುಕೊಂಡಿದ್ದೀರಿ ಎಂದು ಹೇಳಿದೆನೇ?

ಶ್ರೀ ಕೆ.ಹೆಚ್.ಹನುಮೇಗೌಡ: ನೀವು ಹಾಗೆ ಹೇಳಿದಿರಿ ಎಂದು ನಾನು ಹೇಳಲಿಲ್ಲ. ದಯವಿಟ್ಟು ನನ್ನ ಮಾತನ್ನು ಕೇಳಿ. ತೆಂಗಿನ ಮರಕ್ಕೆ ರೋಗ ಬಂದು ಒದ್ದಾಡುತ್ತಿರುವ ರೈತರು ಬದುಕುವುದಕ್ಕಾಗಿ ಅವರ ರಕ್ಷಣೆಗೆ ನೀವು ಬನ್ನಿ.

ಶ್ರೀ ಡಿ.ಬಿ.ಚಂದ್ರೇಗೌಡ: ನಿಮ್ಮ ವಾದ ಹೇಗಿದೆಯೆಂದರೆ ನೀವೊಬ್ಬರೇ ರೈತರು. ಉಳಿದವರೆಲ್ಲರೂ ಆಗರ್ಭ ಶ್ರೀಮಂತರು ಮತ್ತು ಇವರೆಲ್ಲರೂ ಹುಟ್ಟಿದ ತಕ್ಷಣ ಶ್ರೀಮಂತಿಕೆಯನ್ನು ಭಗವಂತನು ಕೊಟ್ಟುಕಳುಹಿಸಿದ್ದಾನೆ ಎನ್ನುವ ಹಾಗೆ ನೀವು ಮಾತನಾಡುತ್ತಿದ್ದೀರಿ. ನಾವು ಆಗಿನಿಂದಲೂ ಇಲ್ಲಿ ಕುಳಿತು ನೀವೇನಾದರೂ ಒಳ್ಳೆಯ ಸಲಹೆಯನ್ನು ಕೊಡುತ್ತೀರೇನೋ, ಅದನ್ನು ಪ್ರಾಮಾಣಿಕವಾಗಿ ನಾವು ಜಾರಿಗೆ ಕೊಡುವುದಕ್ಕೆ ಪ್ರಯತ್ನ ಮಾಡಲು ನೋಡೋಣವೆಂದು ಅಷ್ಟು ಹೊತ್ತಿನಿಂದಲೂ ಕುಳಿತಿದ್ದೇವೆ. ಅದನ್ನು ಬಿಟ್ಟು ನಾನು ಎದ್ದುನಿಂತರೆ ನೀವು ಪ್ಲಾಂಟರ್ ಎನ್ನುತ್ತೀರಿ, ಮತ್ತೊಬ್ಬರು ನಿಂತರೆ ನೀವು ಮಹಾರಾಜರು ಎಂದು ಹೇಳುತ್ತೀರಿ, ಇನ್ನೊಬ್ಬರು ನಿಂತರೆ ನೀವು ಅಡಿಕೆ ತೋಟ ಇಟ್ಟಿರುವವರು ಎಂದು ನೀವು ಹೇಳುತ್ತಾ ಹೋದರೆ ಸದನವನ್ನು ನಡೆಸುವ ಬಗೆ ಹೇಗೆ? ಅತ್ಯಂತ ಹಿರಿಯ ಸದಸ್ಯರಾಗಿರುವ ನೀವು ಈ ರೀತಿಯಲ್ಲಿ ಮಾತನಾಡಬಾರದೆಂದು ದಯಮಾಡಿ ನಿಮ್ಮನ್ನು ಕೇಳುತ್ತೇನೆ.

ಶ್ರೀ ಕೆ.ಹೆಚ್.ಹನುಮೇಗೌಡ: ನನಗೆ ನೋವಾಗುತ್ತಿರುವುದರಿಂದ ತೆಂಗಿನ ಬೆಳೆ

ಸರ್ವನಾಶದ ಅಂಚಿಗೆ ಹೋಗಿರುವುದನ್ನು ಹೇಳುತ್ತಿದ್ದೇನೆ. ರೈತರು ಸರ್ವನಾಶವಾಗುತ್ತಿದ್ದಾರೆ. ಇದಕ್ಕೆ ಯಾರು ಹೊಣೆಯೋ ಅವರೇ ಪೂರ್ಣವಾಗಿ ಜವಾಬ್ದಾರರಾಗುತ್ತಾರೆ. ಒಟ್ಟಿನಲ್ಲಿ ಚಂದ್ರೇಗೌಡರು ಜವಾಬ್ದಾರರಲ್ಲವೆಂದು ಹೇಳುತ್ತೇನೆ. ನಾನು ಒಂದು ಸಲಹೆಯನ್ನು ಮಾನ್ಯ ಕೃಷಿ ಮಂತ್ರಿಗಳಿಗೆ ಮತ್ತು ತೋಟಗಾರಿಕೆ ಮಂತ್ರಿಗಳಿಗೆ ಕೊಡುವುದೇನೆಂದರೆ ಇಂಥ ಭಯಾನಕ ಯಾವ ಕಾಯಿಲೆಯಾದರೂ ತೆಂಗಿನ ಮರಕ್ಕೆ ಆಗಬಹುದು ಅಥವಾ ಮಾವಿನ ಮರಕ್ಕೆ ಆಗಬಹುದು ಅಥವಾ ಇನ್ನ್ಯಾವುದಾದರೂ ಬೆಳೆಗೆ ಬಂದಿದೆ ಎಂದು ಗೊತ್ತಾದ ತಕ್ಷಣ ಅಧಿಕಾರಿಗಳು ತಕ್ಷಣವೇ ಔಷಧಿಯನ್ನು ತೆಗೆದುಕೊಂಡು ಹೋಗಿ ಬಂದು ನಿಗಧಿತ ಸಮಯದೊಳಗೆ ಆ ಏರಿಯಾದ ಮರಗಳಿಗೆ ಸಿಂಪಡಿಸಿ ರೋಗವನ್ನು ಕಂಟ್ರೋಲ್‌ಗೆ ತರಬೇಕು. ಈ ಕೆಲಸವನ್ನು ಸಂಬಂಧಪಟ್ಟ ಅಧಿಕಾರಿಗಳು ಮಾಡದಿದ್ದರೆ ಕೆಲಸದಿಂದ ತೆಗೆಯಲಾಗುವುದು ಎನ್ನುವ ಎಚ್ಚರಿಕೆಯೊಂದಿಗೆ ನಿರ್ದೇಶನವನ್ನು ಕೊಡಬೇಕು. ಇದಕ್ಕೆ ಹಣದ ಅವಶ್ಯಕತೆಗೆ ನೀವು ಒಂದು ಎಕರೆಗೆ 5 ರೂಪಾಯಿ ಅಥವಾ 10 ರೂಪಾಯಿನಂತೆ ಸೆಸ್ ಹಾಕಿ ಅಥವಾ 50 ರೂಪಾಯಿಗಳನ್ನು ಹಾಕಿ ವಸೂಲಿ ಮಾಡಬಹುದು. ಒಂದು ಎಕರೆಯಲ್ಲಿ ಸುಮಾರು 50ಕ್ಕಿಂತ ಹೆಚ್ಚಿನ ತೆಂಗಿನ ಮರಗಳು ಇರುತ್ತದೆ. ಇದಕ್ಕೆ ರೋಗ ತಗಲಿರುವುದನ್ನು ಕಂಟ್ರೋಲ್‌ಗೆ ಮಾಡಿದರೆ ರೈತರು 50 ರೂಪಾಯಿಗಳನ್ನು ಕೊಡುವುದಿಲ್ಲವೆ? ಯಾವುದಾದರೂ ಊರಿನಲ್ಲಿ ಪ್ಲೇಗ್ ಹರಡಿದೆಯೆಂದು ಗೊತ್ತಾದರೆ ಅಲ್ಲಿರುವ ಮಕ್ಕಳು, ದೊಡ್ಡವರು ಎಲ್ಲರಿಗೂ ಕಡ್ಡಾಯವಾಗಿ ಚುಚ್ಚುಮದ್ದನ್ನು ಹಾಕಿದ ಹಾಗೆ ಈ ಕಾರ್ಯವನ್ನು ನೀವು ಮಾಡಬೇಕು. 1942ನೇ ಇಸವಿಯಲ್ಲಿ ಪ್ಲೇಗ್ ಬಂದಿದ್ದಾಗ ನಾನು ಚಿಕ್ಕ ಹುಡುಗನಾಗಿದ್ದೆ. ನಮ್ಮ ಶಾಲೆಯಲ್ಲಿರುವ ಎಲ್ಲರಿಗೂ ಸ್ಕೂಲ್ ಗೇಟ್‌ನ್ನು ಭದ್ರಮಾಡಿ ಚುಚ್ಚುಮದ್ದನ್ನು ಹಾಕಿದರು. ಆ ರೀತಿಯಲ್ಲಿ ಕಡ್ಡಾಯವಾಗಿ ಎಲ್ಲಾ ಮರಗಳಿಗೂ ಔಷಧಿಯನ್ನು ಸಿಂಪಡಿಸಬೇಕು. ಆಗ ಮಾತ್ರ ರೋಗ ಕಂಟ್ರೋಲ್‌ಗೆ ಬರುತ್ತದೆ. ಕಪ್ಪು ತಲೆ ಹುಳು ಎನ್ನುವ ತೆಂಗಿನ ಗರಿ ತಿನ್ನುವ ಹುಳು ಮೊದಲು ಮಂಗಳೂರಿನಲ್ಲಿ 100ಕ್ಕೂ ಹೆಚ್ಚು ಮರಗಳಿಗೆ ಬಂದಾಗ ಅದನ್ನು ಆಗಲೇ ನೀವು ಕಂಟ್ರೋಲ್‌ಗೆ ತಂದಿದ್ದರೆ ಈ ಹುಳು ಬೇರೆ ಕಡೆ ಹಬ್ಬುತ್ತಿರಲಿಲ್ಲ. ಆದರೆ ನೀವು ಹಾಗೆ ಏಕೆ ಮಾಡಲಿಲ್ಲವೆನ್ನುವುದನ್ನು ನಾವು ಕೇಳಬಾರದೆ? ಅದೇರೀತಿ ನುಸಿ ರೋಗ ಕೂಡ ನಮ್ಮ ರಾಜ್ಯದ ಯಾವುದೋ ಒಂದು ಭಾಗದಲ್ಲಿ ಕಂಡುಬಂದಾಗ ತಕ್ಷಣ ನೀವು ಕ್ರಮಗಳನ್ನು ತೆಗೆದುಕೊಂಡು ಕಂಟ್ರೋಲ್‌ಗೆ ತರಬಹುದಾಗಿತ್ತು. ಇಲ್ಲೂ ಕೂಡ ನೀವು ತಕ್ಷಣದ ಕ್ರಮಗಳನ್ನು ತೆಗೆದುಕೊಂಡಿಲ್ಲ. ಇದನ್ನು ನಾವು ಕೇಳಬಾರದೆ? ಎಲ್ಲಾ ಕಡೆಯಲ್ಲೂ ತೆಂಗಿನ ಮರಗಳು ಈ ರೋಗದಿಂದಾಗಿ ಸರ್ವನಾಶವಾದ ಮೇಲೆ ಇದನ್ನು ತಡೆಗಟ್ಟಲು ಈಗ ಇಲ್ಲಿ ಕುಳಿತು ಹೋರಾಟವನ್ನು ಮಾಡುತ್ತಿದ್ದೀರಿ. ಈ ಹೋರಾಟ ಆ ರೈತನಿಗೆ ತಲುಪುತ್ತದೆಯೇ? ಈ ಹೋರಾಟದಿಂದ ಆ ರೈತ ಬದುಕುತ್ತಾನೆಯೇ? ತೆಂಗಿನ ಮರಗಳು ಬದುಕುತ್ತವೆಯೆ?

ಆ ರೈತನ ಹೆಂಡತಿ ಮಕ್ಕಳು ಉದ್ಧಾರವಾಗಲು ಸಾಧ್ಯವೆ? ಅವರು ಹೊಟ್ಟೆ ತುಂಬ ಊಟ ಮಾಡಲು ಸಾಧ್ಯವೆ? ಕಂಟ್ರೋಲ್ ಮಾಡಬೇಕಾದಾಗ ಮಾಡದೇ ಈಗ ಎಲ್ಲರೂ ಬೊಬ್ಬೆ ಹೊಡೆದರೆ ಏನು ಪ್ರಯೋಜನವಾಗುತ್ತದೆ. ಆದುದರಿಂದ ಸೂಕ್ತವಾದ ಪರಿಣಿತರನ್ನು ಕೇಳಿ ಅಧಿಕಾರಿಗಳಿಗೆ ಜವಾಬ್ದಾರಿಕೆಯನ್ನು ಫಿಕ್ಸ್ ಮಾಡಿ ಇಂಥ ಕಾರ್ಯಗಳನ್ನು ಮಾಡಲೇಬೇಕು ಎಂದು ಹೇಳಿ. ಈಗಲಾದರೂ ತಕ್ಷಣ ಔಷಧಿಯನ್ನು ಹೊಡೆದು ನುಸಿರೋಗವನ್ನು ತಡೆಗಟ್ಟಲು ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಸನ್ಮಾನ್ಯ ಪಾಪಣ್ಣನವರು ಸೇರಿದಂತೆ ಇನ್ನೂ ಆರೇಳು ಜನರು ಈ ನುಸಿರೋಗದ ಬಗ್ಗೆ ಮಾತನಾಡುವವರಿದ್ದಾರೆ. ಇವರೆಲ್ಲರೂ ಮಾತನಾಡಲು ಸುಮಾರು ಒಂದು ಗಂಟೆ ಮೇಲೆ ಬೇಕಾಗುತ್ತದೆ. ಇದಕ್ಕೆ ಉತ್ತರ ಕೊಟ್ಟಮೇಲೆ ಮತ್ತೆ ಕ್ಲಾರಿಫಿಕೇಶನ್ ಕೂಡ ಇರುತ್ತದೆ. ಇದಕ್ಕೂ ಉತ್ತರ ಕೊಡಬೇಕಾಗುತ್ತದೆ. ಇದಕ್ಕೆಲ್ಲಾ ಹೆಚ್ಚಿನ ಸಮಯ ಬೇಕಾಗುತ್ತದೆಯಾದ ಕಾರಣ ಇದನ್ನು ನಾಳೆಗೆ ತೆಗೆದುಕೊಳ್ಳೋಣ. ಈಗ ಬಿಲ್‌ನ್ನು ತೆಗೆದುಕೊಳ್ಳೋಣ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ನುಸಿ ರೋಗದ ಬಗ್ಗೆ ಚರ್ಚೆಯ ಪ್ರಾರಂಭದಲ್ಲಿಯೇ ನಾನು ತಮ್ಮಲ್ಲಿ ಮನವಿ ಮಾಡಿಕೊಂಡು ಪಂಚಾಯತ್ ರಾಜ್ ವಿಧೇಯಕವನ್ನು ಮಂಡನೆ ಮಾಡುವಾಗಲೇ ಕೆಲವು ವಿಚಾರಗಳನ್ನು ಹೇಳುತ್ತೇನೆಂದು ಹೇಳಿದ್ದೆ. ಈಗ ನುಸಿರೋಗದ ಬಗ್ಗೆ ನಮ್ಮ ಪಕ್ಷದವರೇ ಮಾತನಾಡುತ್ತಿದ್ದಾರೆ. ನಾನೂ ಕೂಡ ಮಾತನಾಡಲು ಸಮಯದ ಅಭಾವವಿದೆ. ಆದರೆ, ಈಗ ಪಂಚಾಯತ್ ರಾಜ್ ವಿಧೇಯಕವನ್ನು ಮಂಡನೆ ಮಾಡಲಾಗುವುದೆಂದು ತಾವೇನು ಹೇಳುತ್ತಿದ್ದೀರಿ ಇದಕ್ಕೆ ಮೊದಲೇ ನಾನು ಹೇಳಲಿರುವ ವಿಚಾರಗಳು ಆಡಳಿತ ಪಕ್ಷದವರಿಗೂ, ವಿರೋಧ ಪಕ್ಷದವರಿಗೂ ಹಾಗೂ ಇಡೀ ರಾಜ್ಯಕ್ಕೂ ಅನುಕೂಲವಾಗುವುದರಿಂದ ಆ ವಿಚಾರಗಳನ್ನು ಹೇಳಲು ವಿಧೇಯಕದ ಮಂಡನೆಯ ಮುಂಚೆಯೇ ನನಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನೀವೇನು ಹತ್ತು ನಿಮಿಷದಲ್ಲಿ ವಿಧೇಯಕ ಮಂಡನೆ ಮಾಡಬಹುದು ಎಂದು ಹೇಳುತ್ತಿದ್ದೀರಿ ಅದು ಸಾಧ್ಯವಾಗುವುದಿಲ್ಲ. ವಿಧೇಯಕದ ಮಂಡನೆ ಮುಂಚೆಯೇ ಚರ್ಚೆಯಾಗಬೇಕು. ಚರ್ಚೆಯಾದಾಗ ನಿಮ್ಮ ವಾದವೇನಾದರೂ ನಮಗೆ ಕನ್‌ವಿನ್ಸ್ ಆದರೆ ನಿಮ್ಮ ವಾದವನ್ನು ನಾವು ಒಪ್ಪಿಕೊಳ್ಳುತ್ತೇವೆ. ನಮ್ಮ ವಾದ ನಿಮಗೆ ಕನ್‌ವಿನ್ಸ್ ಆದರೆ ನೀವು ಅದನ್ನು ಒಪ್ಪಿಕೊಳ್ಳಬಹುದು. ನಾನು ಈ ವಿಚಾರವನ್ನು ಘೋರ್ಪಡೆಯವರಿಗೆ ಮಾತ್ರ ಹೇಳುತ್ತಿಲ್ಲ.

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್

ಸಚಿವರು): ಬಿಲ್ ಕನ್ಸಿಡರೇಶನ್ ಸಮಯದಲ್ಲಿ ಸಾಕಷ್ಟು ವಿಚಾರಗಳನ್ನು ಹೇಳಲು ಅವಕಾಶವಿರುತ್ತದೆ.

SRI P.G.R.SINDHIA: Before the introduction of the Bill we would like to submit certain things anticipated in the interest of these institutions. ಅದಕ್ಕೆ ನಮಗೆ ಹೆಚ್ಚಿನ ಸಮಯ ಬೇಕಾಗುತ್ತದೆ.

ಅಧ್ಯಕ್ಷರು: ಸಾಕಷ್ಟು ಸಮಯ ಕೊಡೋಣ. ಇವೊತ್ತು 8 ಗಂಟೆಯವರೆಗೆ ಸದನ ನಡೆಸೋಣ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಆಗಬಹುದು.

MR.SPEAKER: We will take up this subject tomorrow. I will give sufficient time.

ಶ್ರೀ ವಿ.ಪಾಪಣ್ಣ: ಮಾನ್ಯ ಅಧ್ಯಕ್ಷರೆ, ಅರ್ಧ ಚರ್ಚೆ ಇವೊತ್ತು ಮತ್ತರ್ಧ ಚರ್ಚೆ ನಾಳೆ ಎನ್ನುವುದು ಸರಿಯಲ್ಲ. ನುಸಿರೋಗದ ಬಗ್ಗೆ ತಕ್ಷಣ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿರುವುದರಿಂದ ಇದರ ಬಗ್ಗೆ ಚರ್ಚೆಯಾಗಬೇಕಾಗಿದೆ.

ಅಧ್ಯಕ್ಷರು: ನಾಳೆ ಇದಕ್ಕೆ ಉತ್ತರ ಕೊಟ್ಟು ಮತ್ತೆ ಕ್ಲಾರಿಫಿಕೇಶನ್ ಕೇಳಲು ಹೆಚ್ಚಿನ ಸಮಯವನ್ನು ನಿಮಗೆ ಕೊಡಲಾಗುವುದು.

ಶ್ರೀ ಜಗದೀಶ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಈಗ ನೀವು ಬಿಲ್ ಇಂಟ್ರಡ್ಯೂಸ್ ಮಾಡಿದರೆ ಅದರ ಮೇಲೆ ಚರ್ಚೆ ಮುಂದುವರಿದು ನಾಳೆಯೂ ಕೂಡ ಅದೇ ನಡೆಯುತ್ತದೆ. ಆಗ ನುಸಿರೋಗದ ಬಗ್ಗೆ ಚರ್ಚೆ ಸರಿಯಾಗಿ ನಡೆಯಲು ಆಗುವುದಿಲ್ಲವಾದ ಕಾರಣ ಈಗೇನು ನುಸಿರೋಗದ ಬಗ್ಗೆ ಚರ್ಚೆಯಾಗುತ್ತಿದೆ ಅದು ಪೂರ್ಣವಾದ ಮೇಲೆ ನೀವು ಬಿಲ್ ಇಂಡ್ರಡ್ಯೂಸ್ ಮಾಡಲು ಅವಕಾಶ ಕೊಡಿ.

ಅಧ್ಯಕ್ಷರು: ಸುಮಾರು ಐದಾರು ದಿವಸದಿಂದ ಸರ್ಕಾರಿ ಕಾರ್ಯಕಲಾಪಗಳು ಯಾವುದೂ ನಡೆದಿಲ್ಲವೆಂದು ಸರ್ಕಾರದವರು ಹೇಳುತ್ತಿದ್ದಾರೆ. ಮೊದಲು ಬಿಲ್ ಇಂಟ್ರಡ್ಯೂಸ್ ಮಾಡಿಬಿಡಲಿ.

SRI P.G.R.SINDHIA: Before the introduction of the Bill we would like to convince the government and the hon.members because government is created by this

House. This is number one. Number two - We are aware that the ruling party members are very important in this aspect. ನಾವು ಅವರ ಭಾವನೆಗಳನ್ನು ಕೆಣಕಬೇಕೆಂಬ ದೃಷ್ಟಿಯಿಂದ ಹೇಳುತ್ತಾ ಇಲ್ಲ. But we have got certain reservations. We would like to be heard. ಅದಾದನಂತರ ನಿಮ್ಮ ಇಚ್ಛೆ ಏನಿದೆ. You have the majority. We are aware of it. ನಮಗೆ ಏನು ಅಷ್ಟು ತಿಳುವಳಿಕೆ ಇಲ್ಲವೇ? ನಿಮಗೆ ಮೆಜಾರಿಟಿ ಇದೆ, ನೀವು ಮಾಡಿಕೊಂಡು ಹೋಗಬಹುದು. ಅದಕ್ಕೆ ನಾವು ಏನು ತಕರಾರು ಮಾಡುವುದಕ್ಕಾಗುವುದಿಲ್ಲ. But with our experience whatever we would like to submit, Sir, I appeal to you, please give us some time for discussion before it is introduced. ಅವರು 31ನೇ ತಾರೀಖಿನೊಳಗೆ ಈ ಬಿಲ್ ಮಾಡಬೇಕೆಂಬುದು ಮಾನ್ಯ ಮುಖ್ಯಮಂತ್ರಿಯವರ ಮತ್ತು ಸರ್ಕಾರದ ಮಂತ್ರಿಮಂಡಲದ ಇಚ್ಛೆಯಾಗಿದೆ. ನಮ್ಮದು ಇದರ ಬಗ್ಗೆ ಕೆಲವು ರಿಜರ್ವೇಷನ್ಸ್ ಇದೆ. ಈ ಬಿಲ್ ಇಂಟ್ರಡ್ಯೂಸ್ ಮಾಡುವ ಮೊದಲು ನಾವು ಅವುಗಳನ್ನೂ ಎಕ್ಸ್‌ಪ್ರೆಸ್ ಮಾಡಬೇಕಾಗಿದೆ.

ಅಧ್ಯಕ್ಷರು: ತಾವು ಎಕ್ಸ್‌ಪ್ರೆಸ್ ಮಾಡಿ.

ಶ್ರೀ ಪಿ.ಜಿ.ಆರ್.ಸಿಂಧ್ಯ: ನಾವು ಇಂಟ್ರಡಕ್ಷನ್ ಟೈಮ್‌ನಲ್ಲಿ ಮಾಡಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ಘೋರ್ಪಡೆಯವರು ಮಾತನಾಡಲು ಅವಕಾಶ ಕೊಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ನುಸಿ ರೋಗದ ಬಗ್ಗೆ ಈಗ ಚರ್ಚೆಯಾಗುತ್ತಿರುವಂಥಾದ್ದು, ಅದು ಮುಗಿಯಲಿ.

ಅಧ್ಯಕ್ಷರು: ನೀವೆಲ್ಲರೂ ಮಾತನಾಡಲು ನಾನು ಒಪ್ಪಿಕೊಂಡೆ, ಈಗ ಮಾನ್ಯ ಮಂತ್ರಿಯವರು ಎರಡು ನಿಮಿಷ ಮಾತನಾಡಲಿ.

SRI M.Y.GHORPADE: We have to function according to the rules of the House. Rules permit the government to introduce any bill with your permission. Once the bill is introduced, then it will be moved for consideration. When it is moved for consideration, then

I will be the first man to welcome the Opposition criticism on this matter.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಕನ್ನಡದಲ್ಲಿ ಮಾತನಾಡಲಿ, ಇದು ಏನು ಇಂಗ್ಲೆಂಡ್ ಅಸೆಂಬ್ಲಿಯಲ್ಲಿ ಮಾತನಾಡುವ ರೀತಿಯಲ್ಲಿ ಮಾತನಾಡುತ್ತಿದ್ದಾರೆ.

ಶ್ರೀ ಎಂ.ವೈ.ಘೋರ್ಪಡೆ: ನಾವು ಸಭೆಯ ರೂಲ್ಸಿನ ಪ್ರಕಾರ ನಡೆದುಕೊಳ್ಳಬೇಕಾಗುತ್ತದೆ. ನಾವು ಬಿಲ್ ಇಂಟ್ರಡ್ಯೂಸ್ ಮಾಡುವಂಥಾದ್ದು ರೂಲ್ಸ್ ಪ್ರಕಾರ ಮೊದಲ ಹಂತವಾಗಿದೆ. ಅದನ್ನು ಇಂಟ್ರಡ್ಯೂಸ್ ಮಾಡುವಂತಹ ಕಾಲದಲ್ಲಿ ಯಾವುದೇ ಚರ್ಚೆಯಾಗುವುದಿಲ್ಲ. ನಾವು ನೀವು ಮಾಡಿರುವಂತಹ ರೂಲ್ಸ್ ಪ್ರಕಾರ ನಾವು ನಡೆದುಕೊಳ್ಳಬೇಕಾಗುತ್ತದೆ. ಇದಾದನಂತರ ಬಿಲ್ ಅನ್ನು ಕನ್ಸಿಡರೇಶನ್‌ಗೋಸ್ಕರ ಸಭೆಯ ಮುಂದಿಟ್ಟಾಗ ತಾವು ಅಭಿಪ್ರಾಯಗಳನ್ನು ಹೇಳಲು ಸಾಕಷ್ಟು ಅವಕಾಶ ಎಲ್ಲರಿಗೂ ಇರುತ್ತದೆ. ಈಗ ಬಿಲ್ ಇಂಟ್ರಡ್ಯೂಸ್ ಮಾಡುವಂಥಾದ್ದಕ್ಕೆ ಅಡ್ಡ ಬರುವಂಥಾದ್ದಕ್ಕೆ ಯಾವ ಕಾನೂನು ಇಲ್ಲ.

ಶ್ರೀ ಓ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೇ, ನಾವು ಯಾವುದೇ ಕಾನೂನಿನ ಅಡಿಯಲ್ಲಿ ಈ ಸದನದ ಕಾರ್ಯ ಕಲಾಪಗಳನ್ನು ಅಡ್ಡಿಪಡಿಸುವಂಥಾದ್ದಕ್ಕೆ ತಯಾರಿಲ್ಲ. ಈ ಸದನದ ಕಾರ್ಯಕಲಾಪಗಳನ್ನು ಅಡ್ಡಿಪಡಿಸುವಂಥಾ ವಿಚಾರದಲ್ಲಿ ನಾವು ಕೊನೆಯವರು. ನಾವು ಯಾವುದೇ ಕಾರಣದಿಂದಲೂ ಈ ಸದನದ ಕಾರ್ಯಕಾಲಪಗಳನ್ನು ಅಡ್ಡಿಪಡಿಸುವುದಕ್ಕೆ ತಯಾರಿಲ್ಲ, ಎರಡನೆಯದಾಗಿ ಕಾನೂನು ಪುಸ್ತಕವನ್ನು ಬಿಟ್ಟು ಬೇರೆ ಏನನ್ನು ನಾವು ಹೇಳುವುದಿಲ್ಲ. ನಾನು ಈಗ ಹೇಳುವಂಥಾದ್ದು ತಾವು ಏನು ಮಸೂದೆ ತಿದ್ದುಪಡಿಯನ್ನು ಮಂಡಿಸುವುದಕ್ಕೆ ಹೊರಟಿದ್ದೀರಿ. ಆ ಮಂಡನೆಯ ವಿಚಾರದಲ್ಲಿ ನಾವು ಕಾನೂನು ಬಗ್ಗೆಯೇ ಮಾತನಾಡುವುದಕ್ಕೆ ಬಯಸುತ್ತಿರುವಂಥಾದ್ದು. **Kaul & Shekdar Book quote** ಮಾಡಬೇಕಾಗಿದೆ ಉದಾಹರಣೆಗಳನ್ನು ಹೇಳಬೇಕಾಗಿದೆ. ಅದಕ್ಕೋಸ್ಕರ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಆದುದರಿಂದ ತಾವು ದಯಮಾಡಿ ಈಗ ಪ್ರಸ್ತಾಪವಾಗಿರುವಂತಹ ವಿಚಾರವನ್ನು ಮುಗಿಸಿ, ಆನಂತರ ಬಿಲ್ ಇಂಟ್ರಡ್ಯೂಸ್ ಮಾಡುವುದಕ್ಕೆ ನಿಂತುಕೊಳ್ಳಿ, ಆಗ ನಾವು ನಮ್ಮ ಅಬ್ಜೆಕ್ಷನ್ ಏನಿದೆ ಅದನ್ನು ಹೇಳುತ್ತೇವೆ. ಅದನ್ನು ತಾವು ಕ್ಲಾರಿಫೈ ಮಾಡಿ ಆದಾದನಂತರ ಬಿಲ್ ಪಾಸ್ ಮಾಡೋಣ.

ಶ್ರೀ ಎಂ.ವೈ.ಘೋರ್ಪಡೆ: ಮಾನ್ಯ ಅಧ್ಯಕ್ಷರೆ, ಅಜೆಂಡಾದ ಪ್ರಕಾರ ಬಿಲ್ ಮಂಡನೆ ಮಾಡಲು ಮೂರು ದಿವಸಗಳಿಂದಲೂ ಇಲ್ಲಿ ನಾನು ಕುಳಿತಿದ್ದೇನೆ. ಈ ಬಿಲ್ ಅನ್ನು

ಮೂರು ದಿವಸಗಳಿಂದಲೂ ಅಜೆಂಡಾದಲ್ಲಿ ಸೇರಿಸಿದೆ, ಅದನ್ನು ಇಲ್ಲಿಯವರೆಗೂ ಯಾರು ಆಕ್ಷೇಪ ಮಾಡಿರಲಿಲ್ಲ. ಇದಕ್ಕೆ ತಮ್ಮ ಅನುಮತಿ ಇದೆ ಎಂದು ಗ್ರಹಿಸಿದ್ದೆ. ಆದರೆ ಈಗ ಅಡ್ಡವಾಗುತ್ತಿದ್ದಾರೆ, ಈ ರೀತಿ ಅಡ್ಡವಾಗುವುದಕ್ಕೆ ಯಾವ ಕಾನೂನು, ಇಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸಚಿವರು ಈ ಸದನದಲ್ಲಿದ್ದಾರೆ. ನಾವಿದ್ದಾಗ ಸಹಕಾರ ಬಿಲ್ ಇಂಟ್ರಡ್ಯೂಸ್ ಮಾಡುವಂಥ ಸಂದರ್ಭದಲ್ಲಿ ಮೂರು ದಿವಸ ಬಿಡಲಿಲ್ಲ. ಆಗ ಮಾನ್ಯ ಸಾರಿಗೆ ಸಚಿವರು ಇದ್ದರು, ಅವರು ಹೇಳಬೇಕಾಗುತ್ತದೆ.

(ಗೊಂದಲ)

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಈ ರೀತಿಯ ಮಸೂದೆಗಳನ್ನು ಮಂಡನೆ ಮಾಡುವಂತಹ ಸಂದರ್ಭದಲ್ಲಿ ಅಧ್ಯಕ್ಷರಾಗಿದ್ದಂಥವರು, ವಿರೋಧಪಕ್ಷದ ನಾಯಕರಾಗಿದ್ದಂಥವರು, ಮಂತ್ರಿಮಂಡಲದಲ್ಲಿ ಹಲವಾರು ವರ್ಷಗಳ ಕಾಲ ಕೆಲಸ ಮಾಡಿರುವಂಥವರು, ಇದ್ದೀರಿ ಇಂತಹ ವಿಧೇಯಕಗಳನ್ನು ಮಂಡನೆ ಮಾಡುವಂತಹ ಸಂದರ್ಭದಲ್ಲಿ ವಿರೋಧಪಕ್ಷದವರಾಗಿ ತಾವೇ ಇದ್ದಂತಹ ಸಂದರ್ಭದಲ್ಲಿ ಇದನ್ನು ನಿಲ್ಲಿಸಿರುವಂಥಾದ್ದು ಉಂಟು. ಆಗ ವಿರೋಧಪಕ್ಷದವರು ತಮ್ಮ ವಾದವನ್ನು ಮಂಡಿಸಿದ ಮೇಲೆ ಅದನ್ನು ನಾವು ಕೇಳಿ ಎಲ್ಲೋ ತಪ್ಪಿದೆ ಎಂದು ಅದನ್ನು ವಾಪಸ್ಸು ತೆಗೆದುಕೊಂಡಂತಹ ಉದಾಹರಣೆಗಳು ಹಲವಾರು ಇವೆ. ಆದುದರಿಂದ, ಇದರ ಬಗ್ಗೆ ರೂಲಿಂಗ್ ಆಗಿದೆ. ಆದುದರಿಂದ ತಾವು ದಯಮಾಡಿ ನಮಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಡಿ.ಬಿ.ಚಂದ್ರೇಗೌಡ: ನೀವು ಹೇಳುವಂಥಾದ್ದು ಆಯಿತು, ನಮಗೂ ಹೇಳುವುದಕ್ಕೆ ಅವಕಾಶ ಕೊಡಿ, ಸದನದಲ್ಲಿ ಸರ್ಕಾರಕ್ಕೂ ಹೇಳುವಂಥಾದ್ದಕ್ಕೆ ಅವಕಾಶ ಕೊಡಿ.

ಶ್ರೀ ಸಿ.ಬೈರೇಗೌಡ: ಮಾನ್ಯ ಅಧ್ಯಕ್ಷರೆ, ಈ ರೀತಿಯಾದಂತಹ ಘಟನೆ ಈ ಸದನದಲ್ಲೇ ನಡೆದಿಲ್ಲಾ.

ಅಧ್ಯಕ್ಷರು: ಮಾನ್ಯ ಬೈರೇಗೌಡರೇ, ಮಾನ್ಯ ಡಿ.ಬಿ.ಚಂದ್ರೇಗೌಡರು ಮಾತನಾಡಲು ಅವಕಾಶ ಕೊಡಿ, ಎಷ್ಟು ಜನರು ಮಾತನಾಡುತ್ತೀರಿ, ಒಬ್ಬೊಬ್ಬರಾಗಿ ಮಾತನಾಡಿ.

ಶ್ರೀ ಸಿ.ಭೈರೇಗೌಡ: ಮಾನ್ಯ ಅಧ್ಯಕ್ಷರೇ, ಈ ರೀತಿ ಲೋಕಸಭೆಯಲ್ಲಿ ಮತ್ತು ರಾಜ್ಯಸಭೆಯಲ್ಲಿ ಆಗಿರುವಂತಹ ಉದಾಹರಣೆಗಳು ಇವೆ. ಒಂದು ಬಿಲ್ ಇಂಟ್ರಡ್ಯೂಸ್ ಮಾಡುವಂತಹ ಸಂದರ್ಭದಲ್ಲಿ ದಿನಗಟ್ಟಲೆ ಚರ್ಚೆಯಾಗಿರುವಂಥಾದ್ದು, ಮತ್ತೆ ಇಂಟ್ರಡ್ಯೂಸ್ ಮಾಡುವುದಕ್ಕೆ ಸಾಧ್ಯವಿಲ್ಲದಿರುವಂತಹ ಘಟನಾವಳಿಗಳು ಈ ದೇಶದ ಲೋಕಸಭೆಯಲ್ಲೂ ಮತ್ತು ರಾಜ್ಯಸಭೆಯಲ್ಲೂ ನಡೆದಿದೆ. ಇದು ಏನು ಈ ಸದನಕ್ಕೆ ಮೀಸಲಾಗಿರುವಂಥಾದ್ದು ಅಲ್ಲ. ಇದು ಮೊದಲ ಸಾರಿ ನಡೆದಿರುವಂತಹ ಘಟನೆ ಏನು ಅಲ್ಲ. ಆದುದರಿಂದ ನೀವು ಬಿಲ್ ಇಂಟ್ರಡ್ಯೂಸ್ ಮಾಡುವಂತಹ ಸಂದರ್ಭದಲ್ಲಿ ನಾವು ಹೇಳುವಂಥಾದ್ದನ್ನು ಕೇಳಬೇಕಾಗುತ್ತದೆ. ನಮಗೂ ಕೂಡ ಮಾತನಾಡಲು ಅವಕಾಶವನ್ನು ಕೊಡಬೇಕಾಗುತ್ತದೆ.

ಅಧ್ಯಕ್ಷರು: ಮಾನ್ಯ ಭೈರೇಗೌಡರೇ, ಚಂದ್ರೇಗೌಡರಿಗೆ ಮಾತನಾಡಲು ಅವಕಾಶ ಕೊಡಿ.

+ ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಅಪ್ಪಣೆ ಕೇಳಿ ಹೇಳುತ್ತಿದ್ದೇನೆ. ನಾವು ಇಷ್ಟು ಹೊತ್ತು ಅವರು ಮಾತನಾಡುವಂತಸ ಸಂದರ್ಭದಲ್ಲಿ ಮಧ್ಯೆ ಪ್ರವೇಶ ಮಾಡಲಿಲ್ಲ, ಬಹಳ ಗಂಭೀರವಾಗಿ ಕುಳಿತು ಅವರು ಮಾತನಾಡಿದ್ದನ್ನು ಕೇಳಿದ್ದೇವೆ. ಈಗ ನಾನು ತಮ್ಮ ಅವಗಾಹನೆಗೆ ತರುವಂಥಾದ್ದು ಏನೆಂದರೆ ಸಂಸದೀಯ ವ್ಯವಹಾರ ಸಚಿವನಾಗಿ ಮೊದಲನೆಯದಾಗಿ ಹೇಳುವಂಥಾದ್ದು ಏನೆಂದರೆ ಶಾಸನಸಭೆ ಸೇರಿದ ದಿವಸದಿಂದ ಹಿಡಿದು ಇವತ್ತಿನವರೆಗೂ ಸರ್ಕಾರದ ಯಾವುದೇ ಕಲಾಪಗಳು ನಡೆದಿಲ್ಲವೆನ್ನುವುದನ್ನು ತಾವೇ ಹೇಳಿದ್ದೀರಿ. ಹಿರಿಯ ಮಂತ್ರಿಗಳಾಗಿದ್ದಂಥವರು, ಬಹಳ ವರ್ಷಗಳ ಕಾಲ ಮಂತ್ರಿಗಳಾಗಿದ್ದಂಥವರು ಅನೇಕ ಮಸೂದೆಗಳನ್ನು ಇಲ್ಲಿ ನಾವು ಚರ್ಚೆ ಮಾಡುವಾಗ ಲೋಕಸಭೆ, ರಾಜ್ಯಸಭೆಗಳನ್ನು, ಕಲಾಪಗಳನ್ನು ಎಲ್ಲವನ್ನು ಉದಾಹರಿಸಿದ್ದಾರೆ. ನಾನು ಕೂಡ ರಾಜ್ಯಸಭೆಯಲ್ಲಿ, ಲೋಕಸಭೆಯಲ್ಲಿ ಸದಸ್ಯನಾಗಿ ಇದ್ದವನು, ಮತ್ತೆ ಇಲ್ಲಿ ಕೂಡ ಮೇಲ್ಮನೆಯ ಮತ್ತು ಕೆಳಮನೆಯ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ನನ್ನ ಅನುಭವವನ್ನು ಸಹ ತಾವು ಕೇಳಬೇಕು. ತಮ್ಮ ಅಭಿಪ್ರಾಯಗಳನ್ನು ಅಭಿವ್ಯಕ್ತ ಮಾಡುವಂಥಾದ್ದಕ್ಕೆ ಸರ್ಕಾರ ಯಾವ ರೀತಿಯಲ್ಲೂ ಅಡ್ಡಿ ಬರುವುದಿಲ್ಲ. ಆದರೆ ಮಾನ್ಯ ಮಂತ್ರಿಯವರು ಬಿಲ್ ಇಂಟ್ರಡ್ಯೂಸ್ ಮಾಡುವ ಸ್ಟೇಜ್‌ನಲ್ಲಿ ಏನು ಹೇಳುತ್ತಾರೋ, ಏನು ಬಿಡುತ್ತಾರೋ, ಎನ್ನುವುದನ್ನು ಊಹೆ ಮಾಡಿ ಹೇಳುವುದಕ್ಕೆ ನಾನು ತಯಾರಿಲ್ಲ. ಇನ್ನು ಬೇರೆ ಬಿಸಿನೆಸ್‌ಗಳು ಇವೆ, ಮಾನ್ಯ ಮುಖ್ಯಮಂತ್ರಿಯವರು ಒಂದು ರೆಸಲ್ಯೂಶನ್ ಪ್ರೆಸೆಂಟ್ ಮಾಡಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಫೈನಾನ್ಸ್ ಬಿಸಿನೆಸ್‌ನಲ್ಲಿ ಕಾಮನ್ ಅರೇಂಜ್‌ಮೆಂಟ್ಸ್

ಮಾಡಬೇಕೆಂದು ಇದ್ದಾರೆ. ಇದನ್ನು ಸಭೆಯ ಮುಂದೆ ತರಬೇಕು. ಇನ್ನು ಬೇರೆ ಬೇರೆ ಮಂತ್ರಿಗಳು ಅವರ ಖಾತೆಗೆ ಸಂಬಂಧಪಟ್ಟ ಮಸೂದೆಗಳು ಮಂಡಿಸಲು ಕಾಯುತ್ತಿದ್ದಾರೆ. ಇದಾವುದನ್ನು ನಿರೀಕ್ಷೆ ಮಾಡದೇ ಬರೀ ಚರ್ಚೆ ಮಾಡುವಂಥಾದ್ದರ ಬಗ್ಗೆ ಅಲೋ ಮಾಡುವುದಾದರೆ ರೂಲ್ಸ್ ಪ್ರಕಾರ ಒಂದು ಗಂಟೆಗಿಂತ ಹೆಚ್ಚಿಗೆ ಹೋಗುವ ಹಾಗೆ ಇಲ್ಲ. ನಿಯಮ 69ರ ಅಡಿಯಲ್ಲಿ ಚರ್ಚೆಗೆ ಅವಕಾಶ ಕೊಟ್ಟರೆ 70ರ ನಿಯಮದಲ್ಲಿ ತಾವು ಅನುಮತಿ ಕೊಟ್ಟಮೇಲೆ ಚರ್ಚೆಗೆ ಅವಕಾಶವಿರುವಂಥಾದ್ದು ಒಂದು ಗಂಟೆ ಮಾತ್ರ. ಆದರೆ ನಾನು ಅದನ್ನು ಕೇಳುವುದಕ್ಕೆ ಹೋಗಿಲ್ಲ.

ಶ್ರೀ ಹೆಚ್.ಸಿ.ಬಸವರಾಜು: ಮಾನ್ಯ ಅಧ್ಯಕ್ಷರೇ, ಲಕ್ಷಾಂತರ ಜನರು ತೆಂಗಿನ ನುಸಿ ರೋಗದ ಬವಣೆಯಿಂದ ನರಳುತ್ತಿದ್ದಾರೆ.

(ಗೊಂದಲ)

ಶ್ರೀ ಡಿ.ಬಿ.ಚಂದ್ರೇಗೌಡ: ಮಾನ್ಯ ಅಧ್ಯಕ್ಷರೆ, ಆ ಕಾರಣಕ್ಕಾಗೆ ಬಹಳ ಗಂಭೀರವಾಗಿ ಮಾನ್ಯ ಹಿರಿಯ ಸದಸ್ಯರುಗಳಿಂದ ಸರ್ಕಾರಕ್ಕೆ ಸಲಹೆಗಳು ಬರಬಹುದೆಂದು ನಾವು ಎದುರು ನೋಡುತ್ತಿದ್ದೇವೆ. ತಮಗೆ ಮಾತನಾಡುವುದಕ್ಕೆ ಅವಕಾಶವಿದೆ, ತಾವು ಅವರಿಗೆ ಅನುಮತಿಯನ್ನು ಕೊಟ್ಟಿದ್ದೀರಿ. ಆದರೆ ಅದರ ದುರುಪಯೋಗವಾಗಬಾರದೆಂದು ನನ್ನ ಸಲಹೆಯಾಗಿದೆ. ನಾನು ಸಂಸದೀಯ ವ್ಯವಹಾರ ಸಚಿವನಾಗಿ ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ದಯಮಾಡಿ ತಾವು ಸರ್ಕಾರದ ರಕ್ಷಣೆಗೆ ಬರಬೇಕೆಂದು ಹೇಳುತ್ತೇನೆ. ನಾವು ಈ ಬಿಸಿನೆಸ್ ಮಾಡುವುದೇ ಬೇಡವೆಂದಲ್ಲ, ಇದನ್ನು ಚರ್ಚೆ ಮಾಡುವುದು ಬೇಡವೆಂದು ಹೇಳುವುದಿಲ್ಲ. ತಾವುಗಳು ಏನೇನು ಪರಿಹಾರಗಳನ್ನು ಮತ್ತು ಸಲಹೆಗಳನ್ನು ಕೊಡುತ್ತೀರೋ ಅದನ್ನು ಸರ್ಕಾರ ಗಂಭೀರವಾಗಿ ಗಮನಿಸುತ್ತದೆ. ನಾವು ಏನು ಕಾಟಾಚಾರಕ್ಕೆ ಕೇಳಬೇಕೆಂಬ ದೃಷ್ಟಿಯಿಂದ ಇಲ್ಲ.

ಶ್ರೀ ಕೆ.ಹೆಚ್.ಹನುಮೇಗೌಡ: ರೈತರ ಬವಣೆ ಎಲ್ಲರಿಗೆ ಅರ್ಥವಾಗಲಿ ಎಂದು ನಾನು ಸುಮ್ಮನೆ ಹೇಳಿದ್ದೆನೆ ಹೊರತು ಅವರ ಮೇಲಿನ ದ್ವೇಷಕ್ಕಾಗಿ ಹೇಳಲಿಲ್ಲ. ಅವರು ಇನ್ನು ಹೆಚ್ಚು ಹೆಚ್ಚು ಮೇಲಕ್ಕೆ ಹೋಗಲಿ, ಲಕ್ಷಾಂತರ ರೈತರು ಇವತ್ತು ಐದು, ಹತ್ತು ತೆಂಗಿನ ಮರಗಳನ್ನು ಇಟ್ಟುಕೊಂಡು ಸರ್ವನಾಶವಾಗುತ್ತಿದ್ದಾರಲ್ಲ ಅವರ ಕಡೆಗೆ ಸರ್ಕಾರದ ಗಮನ ಸೆಳೆಯಬೇಕೆನ್ನುವ ಉದ್ದೇಶದಿಂದ ಹೇಳಿದ್ದೆ ವಿನಹ ಮತ್ತೇನು ಇಲ್ಲ, ಕೇಳಿದರೆ ಒಳ್ಳೆಯದು, ರೈತರಿಗೆ ಅನುಕೂಲ ಮಾಡಿಕೊಟ್ಟರೆ ರೈತರು ನಿಮಗೆ ಓಟು ಹಾಕುತ್ತಾರೆ...

ಶ್ರೀ ಡಿ.ಬಿ.ಚಂದ್ರೇಗೌಡ: ನಮ್ಮ ಸರ್ಕಾರಕ್ಕೆ ರೈತರ ಬಗ್ಗೆ ಕಳಕಳಿ ಇಲ್ಲದೆ ಇದ್ದರೆ ಅಧಿಕಾರಕ್ಕೆ ಬಂದ ತಕ್ಷಣ ಸಚಿವಸಂಪುಟದಲ್ಲಿ ಮೊದಲನೆ ತೀರ್ಮಾನವನ್ನು

ನಾವೇನಾದರೂ ತೆಗೆದುಕೊಂಡಿದ್ದರೆ ಈ ತೆಂಗಿನ ಮರದ ನುಸಿ ರೋಗದ ಬಗ್ಗೆ ಸುದೀರ್ಘವಾಗಿ ಚರ್ಚೆಯನ್ನು ಮಾಡಿದ್ದೇವೆ, ಹಣವನ್ನು ಒದಗಿಸಿದ್ದೇವೆ ವಿಜ್ಞಾನಿಗಳನ್ನು ನೇಮಕ ಮಾಡಿದ್ದೇವೆ, ಎಲ್ಲಾ ಜಿಲ್ಲೆಗಳಿಂದ ವರದಿಯನ್ನು ತರಿಸಿದ್ದೇವೆ, ನಮ್ಮ ಕಳಕಳಿಯ ಬಗ್ಗೆ ಚರ್ಚೆ ಮಾಡುವುದು ಬೇಡ. ಕಳೆದ ನಲವತ್ತು ವರ್ಷಗಳಿಂದ ನೋಡಿದ್ದೇವೆ, ಪದೇ ಪದೇ ನಮಗೆ ಅವಕಾಶ ಕೊಟ್ಟಿದ್ದಾರೆ, ನಾವು ಕೆಲಸವನ್ನು ಕೂಡ ಮಾಡಿದ್ದೇವೆ, ಕೆಲಸ ಮಾಡಿಲ್ಲವೆಂದಲ್ಲ, ಆ ವಿಚಾರ ಬೇಡ ಅಕ್ಷರಶಃ ಪಾಲಿಸತಕ್ಕಂಥ ಜವಾಬ್ದಾರಿಯನ್ನು ಈ ಸರ್ಕಾರ ಹೊರುತ್ತದೆ ಎನ್ನುವ ವಿಶ್ವಾಸದಿಂದಲೇ ಸಲಹೆಗಳನ್ನು ಕೊಡಿ, ಬರಿ ಬೈಯುವ ಕೆಲಸ ಬೇಡ.

(Interruptions)

MR.SPEAKER: Chapter-VI of Rules of Procedure and Conduct of Business - " Arrangement of Business and List of Business - Arrangement of Government Business:

Rule 29: 'On days allotted for the transaction of Government business such business shall have precedence and ths Secretary shall arrange that business in such order......." ಅದು ಕೂಡ ಮುಖ್ಯವಾದ ವಿಷಯವೇ ಇಲ್ಲವೆಂದಲ್ಲ, ನೀವೆಲ್ಲಾ ಮಾತನಾಡುವುದಕ್ಕೆ ಕನಿಷ್ಠ ಒಂದೂವರೆ ಗಂಟೆಯಾದರೂ ತೆಗೆದುಕೊಳ್ಳುತ್ತೀರಿ, ಅದನ್ನೇ ನಾಳೆ ತೆಗೆದುಕೊಂಡರೆ I am ready to allow another 2 hours for discussion.

(ಗೊಂದಲ)

ಶ್ರೀ ಕೆ.ಶ್ರೀನಿವಾಸಗೌಡ: ರೈತರು ಈ ರೋಗದಿಂದ ಬಳಲುತ್ತಿದ್ದಾರೆ, ಅದರ ಬಗ್ಗೆ ಚರ್ಚೆ ಮಾಡುವುದು ಬಿಟ್ಟು ಬರಿ ರಾಜಕಾರಣಮಾಡಿಕೊಂಡಿದ್ದರೆ ಹೇಗೆ.....

ಅಧ್ಯಕ್ಷರು: ಶ್ರೀನಿವಾಸಗೌಡರೆ, ನಿಮಗೆ ಹೆಚ್ಚು ಸಮಯ ಕೊಡುತ್ತೇವೆಂದರು ಬೇಡವೆನ್ನುತ್ತೀರಲ್ಲಾ...

ಶ್ರೀ ಅರಗಜ್ಞಾನೇಂದ್ರ: ಅಧ್ಯಕ್ಷರೆ, ದಯವಿಟ್ಟು ನಮ್ಮ ರಕ್ಷಣೆಗೆ ಬರಬೇಕು, ಬರೀ ರಾಜಕಾರಣ ಮಾಡುವುದಕ್ಕೆ ಮಸೂದೆಯನ್ನು ಮಂಡನೆ ಮಾಡುತ್ತಾರೆ, ಅದು ಮುಖ್ಯವೋ ಇದು ಮುಖ್ಯವೋ, ಲಕ್ಷಾಂತರ ಕುಟುಂಬಗಳ ಜೀವನ್ಮರಣದ ಪ್ರಶ್ನೆ ಇದು.

ಅಧ್ಯಕ್ಷರು: ರಕ್ಷಣೆಗೆ ಬಂದಿದ್ದೇವಲ್ಲ, ಇದು ರಾಜಕಾರಣವಲ್ಲ, ನಾಳೆ ನಿಮಗೆ ಇನ್ನು ಹೆಚ್ಚಿಗೆ ಸಮಯ ಕೊಡೋಣ, Another 2 hours I am going to allot.

ಶ್ರೀ ವಿಶ್ವೇಶ್ವರ ಹೆಗ್ಗಡೆ ಕಾಗೇರಿ: ಘೋರ್ಪಡೆಯವರು ಬೇಕಾದರೆ ಒಂದೆರಡು ದಿವಸ ಕಾಯುತ್ತಾರೆ ಈ ವಿಷಯವನ್ನು ಇವತ್ತು ಮುಗಿಸಿಬಿಡೋಣ.

ಅಧ್ಯಕ್ಷರು: ಅದು ಮುಗಿಯುವುದಿಲ್ಲ, ಅದು ಅಷ್ಟು ಸುಲಭವಲ್ಲ, ಇನ್ನು ಒಂದು ಒಂದೂವರೆ ಗಂಟೆ ತೆಗೆದುಕೊಳ್ಳುತ್ತದೆ. Then, I have to take the sense of the House. ಸೆನ್ಸ್ ಯಾವರೀತಿ ಬರುತ್ತದೆಯೋ ಆ ರೀತಿ ಮಾಡೋಣ. ಸದನದಲ್ಲಿ ಯಾವ ರೀತಿ ಬಹುಮತ ಬರುತ್ತದೆಯೋ ಆ ರೀತಿ ನಾವು ಮಾಡಬೇಕಾಗುತ್ತದೆ, ತಾವು ಯಾವುದನ್ನು ಕೇಳದಿದ್ದರೆ ಹೇಗೆ?

ಶ್ರೀ ವಿ.ಪಾಪಣ್ಣ: ಈ ವಿಚಾರ ಗಂಭೀರವಾಗಿದೆ ಮೂರು ನಿಮಿಷ ಕಾಲಾವಕಾಶ ಕೊಡಿ.

ಅಧ್ಯಕ್ಷರು: ಮೂರು ನಿಮಿಷವಲ್ಲ, ನಾಳೆ ಅರ್ಧಗಂಟೆ ಬೇಕಾದರೆ ಮಾತನಾಡಿ, ಎಲ್ಲರಿಗೂ ಮಾತನಾಡಲು ಅವಕಾಶ ಕೊಡುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಅಧ್ಯಕ್ಷರೆ, ದಯಮಾಡಿ ನಿಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇವೆ, ಮೊದಲು ನುಸಿ ರೋಗದ ಬಗ್ಗೆ ಚರ್ಚೆ ಮುಗಿಯಲಿ, ಆದಾದಮೇಲೆ ನೀವು ತಿದ್ದುಪಡಿಯ ಬಗ್ಗೆ ವಿಚಾರ ಮಾಡಿ ನಾವು ಇನ್ನು ಮಾತನಾಡುವುದಿದೆ, ನಾವು ಮಾತನಾಡಿದ ಮೇಲೆ ತಾವು ಏನು ಹೇಳುತ್ತೀರೊ ಅದರ ಪ್ರಕಾರ ನಾವು ನಡೆದುಕೊಳ್ಳುತ್ತೇವೆ, ನಾವೇನು ತಮ್ಮ ಮಾತನ್ನು ಮೀರುವುದಿಲ್ಲ, ನಾವು ಸಹಕರಿಸುತ್ತೇವೆ.

MR.SPEAKER: Alright, are you going to complete by 7.O'clock, so that we will take up the Bill at 7, O'clock?

(ಗೊಂದಲ)

ಒಬ್ಬ ಸದಸ್ಯರು: ನುಸಿರೋಗದ ಬಗ್ಗೆ ಈಗಲೇ ಮಾತನಾಡಿದಾಕ್ಷಣ ನುಸಿರೋಗ ಹೋಗುತ್ತದೆಂದರೆ ಇನ್ನು ಎರಡುಗಂಟೆ ಕಾಲಾವಕಾಶ ಕೊಡಬಹುದು, ಈಗ ಮಂತ್ರಿಗಳು ಅದನ್ನು ಮಂಡನೆ ಮಾಡುವುದಕ್ಕೆ ನಿಂತಿದ್ದಾರೆ ತಾವು ಹೀಗೆ ಮಾಡಿದರೆ ಹೇಗೆ? ನಾಳೆ ಸಮಯ ಕೊಡುತ್ತೇವೆಂದು ತಾವು ಹೇಳಿದರು, ನುಸಿ ರೋಗವನ್ನು

ಈಗಲೇ ಕಳುಹಿಸಿಬಿಡುತ್ತೇವೆ ಎಂದರೆ ಹೇಗೆ?

ಒಬ್ಬ ಸದಸ್ಯರು: ನುಸಿ ರೋಗಕ್ಕೆ ತಕ್ಷಣ ಪರಿಹಾರ ಕೊಡುವುದಕ್ಕಾಗುತ್ತದೆಯೇ? ಈಗ ಮಾತನಾಡಿದರೆ ನುಸಿ ರೋಗ ಬಗೆಹರಿಯುತ್ತದೆಯೇ?

ಅಧ್ಯಕ್ಷರು: ಹೆಚ್ಚಿಗೆ ಸಮಯ ಕೊಡುತ್ತೇವೆಂದರೆ ಬೇಡವೆನ್ನುತ್ತೀರಿ ಹೇಗೆ, ನಾಳೆ ಬೇಕಾದರೆ ಎರಡು ಗಂಟೆ ಸಮಯ ಕೊಡೋಣ, ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ನುಸಿ ರೋಗದ ಬಗ್ಗೆ ಚರ್ಚೆ ಆರಂಭವಾಗಿದೆ, ತಾವೇ ಅವಕಾಶ ಕೊಟ್ಟಿದ್ದೀರಿ, ಆ ವಿಷಯ ಪೂರ್ಣ ಮುಗಿಯಲಿ. ಏಕೆಂದರೆ ರೈತರಿಗೆ ಸಂಬಂಧಿಸಿದಂತೆ ಬಹಳ ಮುಖ್ಯವಾದ ವಿಚಾರ, ಇವತ್ತು ಲಕ್ಷಾಂತರ ತೆಂಗಿನ ಗಿಡಮರಗಳ ರೋಗದ ಬಗ್ಗೆ ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲಿ ಅದಕ್ಕೆ ಪ್ರಾಮುಖ್ಯತೆ ಕೊಡಬೇಕು. ಅದು ಬಿಟ್ಟು ಆ ಬಿಲ್ಲನ್ನು ನಾಳೆ ತೆಗೆದುಕೊಳ್ಳಬಹುದು, ಈ ಚರ್ಚೆ ಮುಗಿಯಲಿ.

MR.SPEAKER: You please agree that the Bill will be taken up at 7 O'clock.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಈ ಚರ್ಚೆ ಮುಗಿದ ನಂತರ ನಾವು ಆ ಬಿಲ್ ಬಗ್ಗೆ ನಾವು ಮಾತನಾಡಬೇಕು, ಪ್ರಿಲಿಮಿನರಿ ಸಬ್‌ಮಿಷನ್ ನಮ್ಮದು ಇದೆ.

ಶ್ರೀ ಎಂ.ವೈ.ಘೋರ್ಪಡೆ: ಅವರು ತಮ್ಮ ಅಬ್ಜೆಕ್ಷನ್ ಏನೆಂದು ಹೇಳಲಿ ಆಮೇಲೆ ತಾವು ರೂಲಿಂಗ್ ಕೊಡಿ ಅಧ್ಯಕ್ಷರೆ.

ಅಧ್ಯಕ್ಷರು: ತಾವು ಬಿಲ್ ಮೇಲೆ ಮಾತನಾಡಿ ತಮಗೆ ಸಮಯವನ್ನು ಕೊಡುತ್ತೇವೆ.

ಶ್ರೀ ಕೆ.ಹೆಚ್.ಹನುಮೇಗೌಡ: ನುಸಿ ರೋಗದ ಬಗ್ಗೆ ಮಾಹಿತಿಯನ್ನು ಎಲ್ಲರೂ ತಂದಿದ್ದೇವೆ, ಅರ್ಧ ಮಾತನಾಡಿದ್ದೇವೆ, ಪೂರ್ತಿ ಮಾತನಾಡಿದ ಮೇಲೆ ಬಿಲ್ ಅನ್ನು ತರಲಿ ಏನು ಮುಳುಗಿ ಹೋಗುವುದಿಲ್ಲ.

ಶ್ರೀ ಎಂ.ವೈ.ಘೋರ್ಪಡೆ: ಅಧ್ಯಕ್ಷರೆ ರೂಲ್ಸ್ ತುಂಬಾ ಕಾಂಪಿಟೆನ್ಸ್ ಆಗಿದೆ, ಅವರು ಲೆಜಿಸ್ಲೇಟೀವ್ Competence ಅನ್ನು ಪ್ರಶ್ನೆ ಮಾಡುವುದಾದರೆ ಸುದೀರ್ಘವಾಗಿ ಮಾತನಾಡುವುದಕ್ಕೆ ರೂಲ್ ಅನುಮತಿ ನೀಡುತ್ತದೆ ಇಲ್ಲದೆ ಹೋದರೆ ರೀ ಇಂಟರ್‌ವೆನ್‌ಷನ್ಗೆ ಅವರ ಅಪೊಸಿಷನ್ ಹೇಳಲಿ ನಂತರ ತಾವು ರೂಲಿಂಗ್ ಕೊಡಿ; ರೂಲ್ಸ್ ಪ್ರಕಾರ ಹೋಗುವುದಾದರೆ ಹೀಗೆ ಮಾಡಬೇಕು, ಅದನ್ನು ಬಿಟ್ಟು ಹೋಗುವುದಾದರೆ ನಾನೇನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಸಿ.ಚೆನ್ನಿಗಪ್ಪ: ಮಾನ್ಯ ಅಧ್ಯಕ್ಷರೆ, ನಮ್ಮ ವಿರೋಧಪಕ್ಷದ ನಾಯಕರು ಹೇಳಿದ ಹಾಗೆ ಚರ್ಚೆಗೆ ಅವಕಾಶ ಮಾಡಿಕೊಡಿ, ಅನಂತರ ಬಿಲ್ ಅನ್ನು ತೆಗೆದುಕೊಳ್ಳಬಹುದು, ನಿಮಗೆ ಈ ಸದನದ ಬಲವಿದೆ, ಆ ಬಿಲ್ ಪಾಸ್ ಆಗುತ್ತದೆ.

ಶ್ರೀ ಡಿ.ಬಿ.ಚಂದ್ರೇಗೌಡ: ತಾವು ಹೇಳುವ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳಬೇಕೆನ್ನುವುದು ನಮ್ಮ ಇಚ್ಛೆಯಲ್ಲ, ಆದರೆ ದಯಮಾಡಿ ಅರ್ಥ-ಮಾಡಿಕೊಳ್ಳಬೇಕು, ಲೆಜಿಸ್ಲೇಟೀವ್ ಕಾಂಪಿಟೆನ್ಸ್ ಇದೆಯೋ ಇಲ್ಲವೋ ಎನ್ನುವುದರ ಬಗ್ಗೆ ಮಾತ್ರ ಚರ್ಚೆ ಮಾಡಬಹುದು at the stage of introduction. ನಂತರ ಕನ್ಸಿಡರ್ ಸ್ಟೇಜ್‌ನಲ್ಲಿ ಗಂಟೆಗಟ್ಟಲೆ ಮಾತನಾಡಬಹುದು, Let it go on. There is no limit.

ಶ್ರೀ ಪಿ.ಜಿ.ಆರ್.ಸಿಂಧ್ಯ: ತಾವು ಈ ತತ್ವವನ್ನು ಯಾವಾಗ ಹೇಳಬಹುದಾಗಿತ್ತು ಎಂದರೆ, ಆ ಕಡೆ ಹೋಗಿರುವವರೆಲ್ಲಾ ನಮಗೆ ಸಹಕಾರವನ್ನು ಹಾಗೆಯೇ ಕಳೆದ ಇಪ್ಪತ್ತು ವರ್ಷಗಳಿಂದ ಕೊಟ್ಟುಬಿಟ್ಟಿದ್ದರೆ ಒಳ್ಳೆಯದಾಗಿತ್ತು, ತಾವು ಏನೇನು ಭಾಷಣವನ್ನು ಮಾಡಿದ್ದೀರಿ ಎನ್ನುವುದನ್ನು ನಿಮ್ಮ ತೃಪ್ತಿಗೋಸ್ಕರ ಓದಬೇಕಲ್ಲ. ಕಳೆದ ಆರು ತಿಂಗಳ ಹಿಂದೆ ಖರ್ಗೆಯವರು, ಹೆಚ್.ಕೆ.ಪಾಟೀಲ್‌ರವರು, ಚಂದ್ರೇಗೌಡರು, ಘೋರ್ಪಡೆಯವರು ಏನು ಹೇಳಿದ್ದಾರೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ, ಆದರೆ ಬಾಕಿಯವರದು ನಾನು ಹೇಳಬೇಕಾಗುತ್ತದೆ. ಆದುದರಿಂದ ಅಧ್ಯಕ್ಷರೆ, ಮೊದಲು ನುಸಿ ರೋಗದ ಬಗ್ಗೆ ಚರ್ಚೆ ನಡೆಯಲಿ ಅದಾದ ಮೇಲೆ ಈ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಸಿ.ಭೈರೇಗೌಡ: ಮಾನ್ಯ ಚಂದ್ರೇಗೌಡರು ವಿರೋಧಪಕ್ಷದ ನಾಯಕರಾಗಿದ್ದಾಗ ಬಳಸಿರತಕ್ಕಂಥ ಪದಗಳು ನಮಗೆ ಸ್ವಲ್ಪ ಜ್ಞಾಪಕವಿದೆ.

ಶ್ರೀ ಡಿ.ಬಿ.ಚಂದ್ರೇಗೌಡ: ಚಂದ್ರೇಗೌಡರ, ಕಳೆದ ಮೂವತ್ತು ವರ್ಷಗಳಿಂದ ಸಂಸದೀಯ ಜೀವನದಲ್ಲಿ ಬದುಕಿರುವ ನನಗೆ ಒಂದು ಪ್ರತೀತಿ ಇದೆ, ಎಂದೂ ನಾನು ಬಳಕೆ ಮಾಡಿದ ಪದವನ್ನು ಕಡತದಿಂದ ತೆಗೆದುಹಾಕಿಲ್ಲ, ನಾನು ಬಳಕೆ ಮಾಡುವ ಪದವನ್ನೇ ಬಳಸಿರುತ್ತೇನೆ, ದಯವಿಟ್ಟು ಅದನ್ನು ನನಗೆ ಹೇಳಬೇಡಿ.

ಶ್ರೀ ಸಿ.ಭೈರೇಗೌಡ: ನಾನು ತಾವು ಅಸಂಸದೀಯ ಪದಗಳನ್ನು ಬಳಸಿದ್ದೀರೆಂದು ನಾನು ಹೇಳಲೇ ಇಲ್ಲ, ಆದರೆ ತಾವು ವಿರೋಧಪಕ್ಷದ ನಾಯಕರಾಗಿದ್ದಾಗ ಬಳಸಿದ ಅದೆಲ್ಲವನ್ನೂ ಇವತ್ತು ವಾಪಸ್ ಕೊಡುವುದಕ್ಕೆ ತಮಗೆ ಜ್ಞಾಪಕ ಮಾಡಿಕೊಡಬೇಕು, ತಾವು ಅದನ್ನು ಆಲಿಸಬೇಕು....

(ಗೊಂದಲ)

ಶ್ರೀ ಡಿ.ಬಿ.ಚಂದ್ರೇಗೌಡ: ನನಗೆ ವಾಪಸ್ ಕೊಡುವಂತಹ ಪರಿಸ್ಥಿತಿಯಲ್ಲಿ ನಾನಿಲ್ಲ....

ಅಧ್ಯಕ್ಷರು: ನುಸಿ ರೋಗದ ಬಗ್ಗೆ ಏಳು ಗಂಟೆಯವರೆಗೆ ಮಾತನಾಡಿ, ಏಳು ಗಂಟೆಗೆ ಅವರು ಬಿಲ್ ಅನ್ನು ಇಂಟ್ರಡ್ಯೂಸ್ ಮಾಡುತ್ತಾರೆ.

SRI P.G.R.SINDHIA: About introduction itself we have reservation.

ಅಧ್ಯಕ್ಷರು: ಇದು ಮುಗಿದ ಮೇಲೆ ಮಾತನಾಡಿ.

6.30 ಪಿ.ಎಂ

SRI P.G.R.SINDHIA: About intorduction itself we have reservation.

MR.SPEAKER: By 7 O'clock we will conclude discussion on this coconut tree mite disease. Or, if you want more time we will take it up tomorrow.

+ ಶ್ರೀ ವಿ.ಪಾಪಣ್ಣ (ಹುಣಸೂರು): ಸನ್ಮಾನ್ಯ ಅಧ್ಯಕ್ಷರೇ, ಇವತ್ತು ತೆಂಗಿಗೆ ಬಂದಿರುವುದು ನುಸಿಪೀಡೆ. ಅದು ರೋಗವಲ್ಲ. ನಿಮ್ಮ ಟಿಪ್ಪಣಿಯಲ್ಲಿ ರೋಗ ಎಂದು ಕೊಟ್ಟಿದ್ದೀರಿ. ದಯಮಾಡಿ ಅದು ರೋಗವಲ್ಲ, ಅದು ನುಸಿಪೀಡೆ. ಇದು ಗಿಡದಲ್ಲಿ ರಸವನ್ನು ಹೀರಿ, ಗಿಡದ ಕಾಯಿಗಳನ್ನು ಮತ್ತು ಗಿಡವನ್ನು ಸಾಯಿಸುತ್ತಿದೆ 'ರೋಗ ಎನ್ನುವುದೇ ಬೇರೆ, ಕೀಟ ತಿನ್ನುವುದೇ ಬೇರೆ' ಆದ್ದರಿಂದ ಇದನ್ನು ನುಸಿಪೀಡೆ ಎಂದು ಹೇಳಬೇಕೇ ಹೊರತು ರೋಗ ಎಂದು ಹೇಳಕೂಡದು ಎಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ಈ ನುಸಿಪೀಡೆಯ ಬಗ್ಗೆ ಅಂಕಿಅಂಶಗಳನ್ನು ರಿಪೀಟ್ ಮಾಡಲು ನಾನು ತಯಾರಿಲ್ಲ. ನಮ್ಮ ತಾಲ್ಲೂಕಿನಲ್ಲೇ 8 ಸಮಿತಿಗಳನ್ನು ಮಾಡಿ, 8 ವಿಂಗ್ ಮಾಡಿ ಕಳುಹಿಸಿದ್ದೇವೆ. ತೋಟಗಾರಿಕೆ ಇಲಾಖೆಯವರು ಔಷಧಿ ಕೊಡುವುದರಲ್ಲಿಯೂ ಬಡವ, ಶ್ರೀಮಂತ ಎಂದು ಮಾಡಿದ್ದಾರೆ. ಆ 8 ಸಮಿತಿಯವರು 8 ವೆಹಿಕಲ್‌ಗಳಲ್ಲಿ ಇಡೀ ತಾಲ್ಲೂಕಿನಾದ್ಯಂತ ಇರುವ ಗಿಡಗಳಿಗೆಲ್ಲ ಔಷಧಿ ಹೊಡೆಯಬೇಕು ಎಂದು ಹೊರಟಾಗ, ಅವರು ಔಷಧಿ ಕೊಡುವಾಗ ಒಬ್ಬ ಶ್ರೀಮಂತರಿಗೆ ಕೊಡುತ್ತಾರೆ, ಒಬ್ಬ ಬಡವನಿಗೆ ಕೊಡುತ್ತಾರೆ, ಮಧ್ಯೆ ಮಧ್ಯೆ ಬಿಡುತ್ತಾರೆ.

ಈ ರೀತಿಯ ಕಾರ್ಯಕ್ರಮದಿಂದ ನೀವು ನುಸಿಪೀಡೆಯನ್ನು ನಿಯಂತ್ರಿಸಲು ಆಗುವುದಿಲ್ಲ. ಇವತ್ತು ರಾಜ್ಯಾದ್ಯಂತ ಬಂದಿರುವ ನುಸಿಪೀಡೆಯನ್ನು ನಿಯಂತ್ರಿಸಬೇಕಾದುದು ನಮ್ಮ ನಿಮ್ಮೆಲ್ಲರ ಆದ್ಯಕರ್ತವ್ಯ. ಅದಕ್ಕೆ ಬಳಸಿಕೊಳ್ಳಬೇಕಾಗಿರುವುದು ರೆವಿನ್ಯೂ ಇಲಾಖೆ, ಕೃಷಿ ಇಲಾಖೆ, ಗ್ರಾಮ ಪಂಚಾಯಿತಿ, ಕಾರ್ಪೊರೇಷನ್, ಪುರಸಭೆ ಮತ್ತು ತೋಟಗಾರಿಕೆ ಇಲಾಖೆಗಳನ್ನು, ಪುರಸಭೆ ವ್ಯಾಪ್ತಿಯಲ್ಲಿ ಬರತಕ್ಕಂಥ ಮನೆಯ ಮುಂದೆ ಎರಡು ತೆಂಗಿನ ಗಿಡಗಳಿದ್ದರೆ, ಅವೆರಡು ಗಿಡಕ್ಕೆ ಈಗ ಔಷಧಿ ಹೊಡೆಯದೇ ಹೋದರೆ, ಅದರಲ್ಲಿರುವ ಮೈಟ್ಸ್‌ನ ಜನರೇಷನ್ ಒಂದು ವಾರದಲ್ಲಿ ಒಂದು ಲಕ್ಷ ಉತ್ಪತ್ತಿಯಾಗುತ್ತದೆ. ರಾಜ್ಯದಲ್ಲಿ ಕೇವಲ ಎರಡು ಗಿಡಗಳನ್ನು ಹಾಗೆ ಬಿಟ್ಟರೆ ಸಾಕು. ಆ ಎರಡು ಗಿಡಗಳಿಂದ ಇಡೀ ರಾಜ್ಯಾದ್ಯಂತ ಇರುವ ಗಿಡಗಳಿಗೆ ಮೈಟ್ಸ್ ಸಪ್ಲೈ ಆಗುತ್ತದೆ. ಆದ್ದರಿಂದ ಇದನ್ನು ಸಮರೋಪಾದಿಯಲ್ಲಿ ಮಾಡಬೇಕು. ಈ ಎಲ್ಲಾ ಇಲಾಖೆಗಳ ಅಧಿಕಾರಿಗಳಿಂದ ಎಂಟು ದಿವಸಗಳ ಕಾಲ ಬೇರೆ ಯಾವುದೇ ಕೆಲಸ ಮಾಡಿಸದೆ ಇದರಲ್ಲಿ ತೊಡಗಿಸಬೇಕು. ಅವರು ಮನೆಯ ಮುಂದೆ ಇರುವಂಥ ಎರಡು ಗಿಡಗಳಿಗೂ ಔಷಧಿ ಕಟ್ಟುವಂಥ ಕಾರ್ಯಕ್ರಮವನ್ನು ಮಾಡಬೇಕು. ಈಗ ಸರ್ಕಾರದಲ್ಲಿ ಔಷಧಿ ತೆಗೆದುಕೊಳ್ಳುವುದರಲ್ಲೂ ಜಗಳ ಮಾಡುತ್ತಿದ್ದಾರೆ. ಮೋನೋಕ್ರೋಟೋಪಾಸ್ ನೂವಾಕ್ರಾನ್ ಎಂಬ ಔಷಧಿಯು ಸೀಬಾ ಕಂಪನಿಯದ್ದಾಗಿದ್ದು, ಅದು ಬೆಸ್ಟ್ ಕಂಪನಿ ಎಂದು ಇಡೀ ಪ್ರಪಂಚದಲ್ಲೇ ಹೆಸರಿದೆ. ಆ ನೂವಾಕ್ರಾನ್ ಮೋನೋಕ್ರೋಟೋಪಾಸ್-36 ಎನ್ನುವ ಔಷಧಿಯನ್ನು ಬಿಟ್ಟು ಬೇರೆ ಔಷಧಿ ತೆಗೆದುಕೊಳ್ಳುವುದಕ್ಕೆ ಚರ್ಚೆ ನಡೆಯುತ್ತಿದೆ ಎಂದು ನಾವು ಪತ್ರಿಕೆಗಳಲ್ಲಿ ಓದಿದ್ದೇವೆ. ಔಷಧಿ ತೆಗೆದುಕೊಳ್ಳುವ ವಿಷಯದಲ್ಲಿ, ಸೀಬಾ ಕಂಪನಿಯ ನೂವಾಕ್ರಾನ್‌ಅನ್ನೇ ತೆಗೆದುಕೊಳ್ಳಬೇಕೆಂದು ಅಧ್ಯಕ್ಷರ ಮುಖಾಂತರ ತೋಟಗಾರಿಕೆ ಸಚಿವರು ಮತ್ತು ಕೃಷಿ ಸಚಿವರಲ್ಲಿ ನಾವು ವಿನಂತಿ ಮಾಡುತ್ತಿದ್ದೇವೆ. ಬೇರಿನಲ್ಲಿ ಡೆಕೋಟಾಲ್ ಔಷಧಿ ಕಟ್ಟುವುದು ಎಂದು ಯಾರೋ ಹೇಳುತ್ತಿದ್ದರು. ಏಕೆ ಬೇಕು ಸ್ವಾಮಿ ಈ ಡೆಕೋಟಾಲ್? ನೂವಾಕ್ರಾನ್ ಔಷಧಿಯು ಪೆಸ್ಟಿಸೈಡ್, ಇನ್ಸೆಕ್ಟಿಸೈಡ್ ಮತ್ತು conduit ಆಗಿಯೂ ಕೆಲಸ ನಿರ್ವಹಿಸುತ್ತದೆ. ಹೀಗಿರುವಾಗ ಮತ್ತೇಕೆ 15 ದಿವಸದ ಮೇಲೆ ಆ ಔಷಧಿ ಹೊಡೆಸುತ್ತೀರಿ? ಏಕೆ ರೈತರನ್ನು ತಪ್ಪು ದಾರಿಗೆ ಎಳೆಯುತ್ತಿದ್ದೀರಿ? ಇದು ಹಣ ಹೊಡೆಯುವುದಕ್ಕೆ ಮಾಡುತ್ತಿರುವ ಕಾರ್ಯಕ್ರಮ. ನೂವಾಕ್ರಾನ್ ಅನ್ನುವಂಥಾದ್ದು ಇನ್‌ಸೆಕ್ಟಿಸೈಡ್ ಮತ್ತು conduit ಎರಡೂ ಆಗಿ ಆ್ಯಕ್ಟ್ ಮಾಡುತ್ತದೆ. ರಸಹೀರಿ ಹುಳ ಸಾಯುವಂಥಾದ್ದು ಒಂದು, ಸ್ಪರ್ಶದಿಂದ ಸಾಯುವಂಥಾದ್ದು ಇನ್ನೊಂದು. ಅದನ್ನು ಹಾಕಿದಾಗ ಎರಡು ರೀತಿಯಲ್ಲಿ ಆ್ಯಕ್ಷನ್ ಆಗಿ ಎರಡು ಹುಳುವೂ ಸಾಯುತ್ತವೆ. ಹೀಗಿರುವಾಗ 15 ದಿವಗಳಾದ ಮೇಲೆ ಡೆಕೋಟಾಲ್ ಏಕೆ ಬೇಕು. ಅದನ್ನು ಏಕೆ ಸಪ್ಲೈ ಮಾಡಿಸುತ್ತೀರಿ? ಇಂಥ ಸಂದರ್ಭದಲ್ಲಿ ನುಸಿಪೀಡೆಯನ್ನು ನಿಯಂತ್ರಿಸುವುದು ನಮ್ಮೆಲ್ಲರ ಆದ್ಯಕರ್ತವ್ಯವಾಗಿದೆ. ಈ ಎಲ್ಲಾ ಇಲಾಖೆಗಳನ್ನು ಎಂಟು

ದಿವಸ ಯಾವ ಕೆಲಸವನ್ನು ಮಾಡಿಸದೇ, ಮನೆಯ ಮುಂದೆ ಇರುವ ಎರಡು ಗಿಡಗಳಿಗೂ ಔಷಧಿ ಕಟ್ಟಿಸಬೇಕು ಎಂದು ಅಧ್ಯಕ್ಷರ ಮೂಲಕ ನಾನು ಮನವಿ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಹೆಚ್.ಸಿ.ಬಸವರಾಜು (ಪಿರಿಯಾಪಟ್ಟಣ): ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಬಡವರ ಬಂಧುವಾದ ಕಲ್ಪವೃಕ್ಷಕ್ಕೆ ಬಂದಿರತಕ್ಕಂಥ ಈ ನುಸಿಪೀಡೆಯಿಂದ ಮೈಟ್ ಅಟ್ಯಾಕ್ ಆಗಿ, ಅದು ರಸವನ್ನು ಹೀರಿ, ಆ ಗಿಡವನ್ನು, ಕಾಯಿಯನ್ನು ಸಾಯಿಸುತ್ತದೆ. ಇಂಥ ಒಂದು ಪೀಡೆಯನ್ನು ತೊಲಗಿಸಬೇಕು ಎನ್ನುವುದು ಬಹಳ ಗಹನವಾದಂಥ, ಗಂಭೀರವಾದಂಥ ಪ್ರಶ್ನೆ. ಈ ರಾಜ್ಯದ ಮೂರು ಕೋಟಿ ರೈತಾಪಿ ಜನರ ಆಗುಹೋಗುಗಳ ಬಗ್ಗೆ ಇವತ್ತು ನಾವು ಚರ್ಚೆ ಮಾಡುತ್ತಿದ್ದೇವೆ. ಇಂಥ ಒಂದು ಸಂದರ್ಭದಲ್ಲಿ ನಾನಾದರೂ ಹೇಳುವುದೇನೆಂದರೆ ಕಳೆದ ಒಂದೆರಡು ವರ್ಷಗಳಿಂದ ಕಪ್ಪುತಲೆ ಹುಳು ಬಂದು ತೆಂಗಿನ ಅರ್ಧ ವಂಶವನ್ನೇ ನಾಶ ಮಾಡಿರತಕ್ಕಂಥಾದ್ದು ನಮ್ಮೆಲ್ಲರಿಗೂ ತಿಳಿದಂಥ ವಿಷಯ. ಅದರಿಂದ ಚೇತರಿಸಿಕೊಳ್ಳುತ್ತಿರತಕ್ಕಂಥ ಈ ಸಂದರ್ಭದಲ್ಲಿ ಈ ನುಸಿಪೀಡೆ ಬಂದು, ಉಳಿದಿರತಕ್ಕಂಥ ಅಲ್ಪಸ್ವಲ್ಪ ಮರಗಳ ಮೇಲೆ ಅಟ್ಯಾಕ್ ಮಾಡಿ ಅವುಗಳನ್ನು ಕೂಡ ನಿರ್ನಾಮ ಮಾಡಿ ಇಡೀ ರೈತ ಸಮೂಹವನ್ನು ಕೊಲೆ ಮಾಡತಕ್ಕಂಥ ಒಂದು ಸನ್ನಿವೇಶ ಈ ರಾಜ್ಯದಲ್ಲಿ ಬಂದಿರತಕ್ಕಂಥಾದ್ದು ಬಹಳ ದುರ್ದೈವ. ಇಂಥ ಒಂದು ಗಂಭೀರವಾದಂಥ ಸಮಸ್ಯೆಯನ್ನು ಯಾವ ರೀತಿ ನಿಭಾಯಿಸಬೇಕು, ಯಾವ ರೀತಿ ಈ ಪೀಡೆಯನ್ನು ಕಂಟ್ರೋಲ್‌ಗೆ ತೆಗೆದುಕೊಂಡು ಬಂದು ರೈತರಿಗೆ ರಕ್ಷಣೆ ಕೊಡಬೇಕು, ಇದು ಬರಲು ಕಾರಣವೇನೆನ್ನುವುದನ್ನು ತಿಳಿದುಕೊಂಡು, ಅದಕ್ಕೆ ಯಾವ ಔಷಧಿ ಕೊಡಬೇಕು, ಅದನ್ನು ಯಾವ ರೀತಿ ಕಂಟ್ರೋಲ್ ಮಾಡಬೇಕು ಎನ್ನುವ ಬಗ್ಗೆ ಕಳೆದ ಐದು ತಿಂಗಳಿಂದ ಸರ್ಕಾರ ಮಾಡಿರುವುದನ್ನು ನೋಡಿದಾಗ ಖಂಡಿತವಾಗಿ ಈ ಸರ್ಕಾರ ನುಸಿಪೀಡೆಯನ್ನು ನಿಯಂತ್ರಿಸುವಲ್ಲಿ ವಿಫಲವಾಗಿದೆ, ರೈತಾಪಿ ಜನಗಳಿಗೆ ದ್ರೋಹ ಮಾಡಿದೆ, ತೆಂಗು ಬೆಳೆಗಾರರ ಕತ್ತನ್ನು ಹಿಸುಕಿದೆ ಎಂದು ಹೇಳಿದರೆ ತಪ್ಪಾಗಲಾರದು, ಇದು ಬಹಳ ದುರ್ದೈವ. ಈ ಸದನದಲ್ಲಿರತಕ್ಕಂಥವರಲ್ಲಿ ನೂರಕ್ಕೆ ಎಪ್ಪತ್ತೈದು ಭಾಗ ರೈತರ ಮಕ್ಕಳಾಗಿದ್ದಾರೆ. ರೈತರ ಯಾವುದೇ ಒಂದು ಸಮಸ್ಯೆ ಬಂದಾಗ ನಾವೆಲ್ಲರೂ ಮಾತನಾಡುತ್ತೇವೆ. ಆದರೆ ಅದನ್ನು ಕಾರ್ಯರೂಪಕ್ಕೆ ತರತಕ್ಕಂಥಾದ್ದು ಬಹಳಕಡಿಮೆ. ಇದಕ್ಕೆ ಇದೇ ಸಾಕ್ಷಿ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಾರ್ಗಿಲ್ ಯುದ್ಧ ಬಂದಾಗ ನಾವು ಯಾವ ರೀತಿ ದೇಶವನ್ನು ರಕ್ಷಣೆ ಮಾಡಿಕೊಂಡೆವೋ ಅದೇ ರೀತಿ ರೈತಾಪಿ ಜನಗಳಿಗೆ ತೊಂದರೆ ಕೊಡಲು ಬಂದಿರುವ ಈ ನುಸಿಪೀಡೆ ಇರಬಹುದು ಅಥವಾ ಇನ್ನೊಂದು ಇರಬಹುದು, ಅದನ್ನು ನಿಯಂತ್ರಿಸಬೇಕು, ಅದನ್ನು ಯುದ್ಧೋಪಾದಿಯಲ್ಲಿ ನಿಗ್ರಹಿಸಲು ಏಕೆ ಹೋಗುವುದಿಲ್ಲ

ಎಂದು ನನಗೆ ಆಶ್ಚರ್ಯವಾಗುತ್ತಿದೆ. ಪ್ರತಿಯೊಬ್ಬರೂ ಕೂಡ ರೈತರ ಬಗ್ಗೆ ಮಾತನಾಡುತ್ತಾರೆ. ಓಟು ಕೇಳಲು ಹೋದಾಗ ನಾವು ರೈತರ ಬಗ್ಗೆ ಮಾತನಾಡುತ್ತೇವೆ. ಪ್ರತಿಯೊಂದು ಕ್ಷಣದಲ್ಲೂ ಕೂಡ ರೈತರ ಬಗ್ಗೆ ಕಾಳಜಿ ವಹಿಸುತ್ತೇವೆ ಎಂದು ಎಲ್ಲ ಪಕ್ಷದವರು ಮಾತನಾಡುತ್ತಾರೆ. ಆದರೆ ಇಂಥ ಒಂದು ಕಾಯಿಲೆ ಬಂದಾಗ, ಈ ರೀತಿ ರೈತರು ಸಂಕಷ್ಟಕ್ಕೆ ಸಿಕ್ಕಿಕೊಂಡಾಗ ಎಲ್ಲರೂ ಕೂಡ ತಲೆಮರೆಸಿಕೊಳ್ಳತಕ್ಕಂಥಾದ್ದು ಏಕೆ ಬೇಕು, ಅದನ್ನು ಏಕೆ ಮಾಡುತ್ತಿದ್ದೀರಿ, ಈ ಸದನದಲ್ಲಿ ಎಲ್ಲರಿಗೂ ಏಕೆ ಇದರ ಬಗ್ಗೆ ಕಾಳಜಿ ಇಲ್ಲ ಎನ್ನುವುದು ನನಗೆ ಇನ್ನೂ ಅರ್ಥವಾಗುತ್ತಿಲ್ಲ. ಈಗಾಗಲೇ ಮಾತನಾಡಿದಂಥ ಸ್ನೇಹಿತರು ಹೇಳಿದ ಹಾಗೆ ಈ ಮೈಟ್ ಈಗಾಗಲೇ ಮುಕ್ಕಾಲು ಭಾಗ ತೆಂಗನ್ನು ನಾಶ ಮಾಡಿದೆ. ಅಲ್ಲಿಇಲ್ಲಿ ಉಳಿದಿರತಕ್ಕಂಥ ಕಾಲು ಭಾಗ ಗಿಡಗಳನ್ನಾದರೂ ಉಳಿಸಬೇಕಾದಂಥ ಕಾಲ ಸನ್ನಿಹಿತವಾಗಿದೆ. ಆ ದೃಷ್ಟಿಯಿಂದ ಕೂಡಲೇ ಇದಕ್ಕೆ ಔಷಧಿಯನ್ನು ಸಿಂಪಡಿಸಬೇಕು. ನಾನಾದರೂ ಹೇಳುವುದು ಇಷ್ಟೇ, ಇದು ಯಾವುದೇ ಒಬ್ಬ ವ್ಯಕ್ತಿಯ ಅಥವಾ ಒಬ್ಬ ರೈತನ ಸಮಸ್ಯೆಯಲ್ಲ. ಇದು ಸಮಾಜದ, ಇಡೀ ಕರ್ನಾಟಕ ರಾಜ್ಯದ ಸಮಸ್ಯೆ. ಈ ಸಮಸ್ಯೆಯನ್ನು ನಾವೆಲ್ಲಾ ಒಂದಾಗಿ ಎದುರಿಸಬೇಕಾಗಿದೆ. ಇಂಥ ಸಂದರ್ಭದಲ್ಲಿ ಸಾಮೂಹಿಕವಾದಂಥ ಒಂದು ತೀರ್ಪನ್ನು ಕೊಡಬೇಕಾಗಿದೆ. ಸರ್ಕಾರದವರು ಟಾಸ್ಕ್ ಫೋರ್ಸ್ ಮಾಡಿದ್ದೇವೆ ಎಂದು ಹೇಳಿದರು. ಟಾಸ್ಕ್ ಫೋರ್ಸ್ ಮಾಡಿ ಇ.ಓ, ಬಿ.ಡಿ.ಓ, ತಹಶೀಲ್ದಾರ್, ಝಡ್.ಪಿ.ಇಂಜಿನಿಯರ್ ಎಲ್ಲರನ್ನೂ ಅದರಲ್ಲಿ ಸೇರಿಸಿದ್ದಾರೆ. ಅವರೆಲ್ಲರೂ ಒಟ್ಟಿಗೆ ಸೇರಬೇಕಾದರೆ 15 ದಿವಸ ಅಥವಾ ಒಂದು ತಿಂಗಳು ಆಗುತ್ತದೆ. ಆ ಎಲ್ಲ ಇಲಾಖೆಯವರನ್ನು ಸೇರಿಸಿ ಹೇಗೆ ಕಾರ್ಯಕ್ರಮ ಮಾಡಬೇಕು ಎನ್ನುವ ಸರ್ಕಾರದ ಆದೇಶವನ್ನು ಪಾಲಿಸಬೇಕಾದರೆ ಒಂದು ತಿಂಗಳಾಗುತ್ತದೆ. ಅವರು ಬಂದರೆ ಇವರು ಬರುವುದಿಲ್ಲ, ಇವರು ಬಂದರೆ ಅವರು ಬರುವುದಿಲ್ಲ. ಹೀಗಾಗಿ ಕಾಲ ವಿಳಂಬವಾಯಿತು. ಔಷಧಿ ಕೊಡುವುದರಲ್ಲೂ ಕಾಲ ವಿಳಂಬವಾಯಿತು. ಹಣ ಕೊಡುವುದರಲ್ಲೂ ಕಾಲ ವಿಳಂಬವಾಯಿತು, ಈಗ ಎರಡೂವರೆ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ ಎಂದು ಸರ್ಕಾರ ಹೇಳುತ್ತಿದೆ. ಈ ಎರಡೂವರೆ ಕೋಟಿ ರೂಪಾಯಿ ಹಣವನ್ನು ಸರಿಯಾಗಿ ಖರ್ಚು ಮಾಡಿದರೆ ಒಂದು ವಾರಕ್ಕೆ ಸಾಲುವುದಿಲ್ಲ. ಇದರ ತೀವ್ರತೆ ಎಷ್ಟಿದೆ ಎಂದರೆ ಈಗ ನಾವು ಹಣಕ್ಕೆ ಬೆಲೆ ಕಟ್ಟಲು ಆಗುವುದಿಲ್ಲ. ಏಕೆಂದರೆ ಲಕ್ಷಾಂತರ ತೆಂಗಿನ ಮರಗಳಿಂದ ರಾಜ್ಯಕ್ಕೆ ಬರತಕ್ಕಂಥ ಉತ್ಪತ್ತಿಯನ್ನು ನಾವು ಲೆಕ್ಕ ಹಾಕಿದಾಗ ಇದಕ್ಕೆ ನಾವು ಎಷ್ಟೇ ಹಣ ಖರ್ಚು ಮಾಡಿದರೂ ಅದು ನೆಗ್ಲಿಜಿಬಲ್ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇವೆ. ಸರ್ಕಾರ ಆಮೆ ವೇಗದಲ್ಲಿ ಕೆಲಸ ಮಾಡುತ್ತಿದೆ. ಈ ರೀತಿ ಆಮೆ ವೇಗದಲ್ಲಿ ಹೋದರೆ ನುಸಿಪೀಡೆಯನ್ನು ಕಂಟ್ರೋಲ್ ಮಾಡುವುದು ಇರಲಿ, ಅದು ಪೂರ್ತಿಯಾಗಿ ಕಲ್ಪವೃಕ್ಷ ಬೆಳೆಯನ್ನೇ ನಾಶ ಮಾಡಿ ಕೊನೆಗೆ ಅದು ಇನ್ಯಾವುದಾದರೂ ಬೆಳೆಗೆ ಹೋಗುವಂಥ ಸಂದರ್ಭ ಇದೆ. ತೆಂಗು ಆದಮೇಲೆ ಈಚಲು ಗಿಡಕ್ಕೆ ಹೋಗಬಹುದು ಅಥವಾ ಅಡಿಕೆ

ಗಿಡಕ್ಕೆ ಹೋಗಬಹುದು ಅಥವಾ ಬೇರೆ ಬೆಳೆಗಳಿಗೆ ಹೋಗತಕ್ಕಂಥ ಅವಕಾಶ ಜಾಸ್ತಿ ಇದೆ. 'Prevention is better than cure' ಎನ್ನುವ ಹಾಗೆ ಇದನ್ನು ಮೊದಲೇ ಪ್ರಿವೆನ್‌ಷನ್ ಮಾಡಿದ್ದಿದ್ದರೆ ಅದಕ್ಕೆ ಇಷ್ಟು ಅವಕಾಶವಾಗುತ್ತಿರಲಿಲ್ಲ. ಆದರೆ ಇದರಲ್ಲಿ ಸರ್ಕಾರ ವಿಫಲವಾಗಿದೆ. ಈಗಲಾದರೂ ಇರತಕ್ಕಂಥ ಗಿಡಗಳನ್ನು ಉಳಿಸಿಕೊಳ್ಳಬೇಕಾದರೆ ಇವತ್ತು ಇಡೀ ರಾಜ್ಯದಲ್ಲಿ ಹೇಗೆ ಹಿಂದೆ ಕಾಲರಾ ರೋಗ, ಪ್ಲೇಗ್ ಕಾಯಿಲೆ ಬಂದಾಗ ಯಾವ ರೀತಿ ವ್ಯವಸ್ಥೆ ಮಾಡುತ್ತಿದ್ದೆವು ಆ ರೀತಿಯಲ್ಲಿ ಸಾಮೂಹಿಕ ಜವಾಬ್ದಾರಿ ಮೇಲೆ ಇಡೀ ರಾಜ್ಯದಲ್ಲಿರತಕ್ಕಂಥ ಗಿಡಗಳನ್ನು ನಾವು, poor or rich man either in city or village ಇದು ಎಲ್ಲಾದರೂ ಇರಲಿ ಅದು ಈ ಕರ್ನಾಟಕ ರಾಜ್ಯದ ಆಸ್ತಿ, ಆ ಆಸ್ತಿಯನ್ನು ಕಾಪಾಡಿಕೊಳ್ಳುವುದು ನಮ್ಮ ಕರ್ತವ್ಯ. ಆದ್ದರಿಂದ ಸಾಮೂಹಿಕವಾಗಿ ಯುದ್ಧೋಪಾದಿಯಲ್ಲಿ ಸಮಗ್ರವಾಗಿ ಆ ಕಾಯಿಲೆ ಮೇಲೆ ನಾವು ಇವತ್ತು ಯುದ್ಧ ಮಾಡಿ ಆ ಪೀಡೆಯನ್ನು ತೊಲಗಿಸಬೇಕಾಗಿದೆ. ಈಗ ಒಂದು ತೆಂಗಿನ ಮರಕ್ಕೆ 10 ರೂಪಾಯಿ ಖರ್ಚು ಆಗುವುದಾದರೆ ಅದಕ್ಕೆ 5 ರೂಪಾಯಿ ಸರ್ಕಾರದಿಂದ ಕೊಟ್ಟರೆ 5 ರೂಪಾಯಿ ಸಂಬಂಧಪಟ್ಟ ರೈತ ಕೊಡಬೇಕಾಗುತ್ತದೆ. ಒಂದು ಹಳ್ಳಿಗೆ ಹೋದಾಗ ಕೆಲವು ರೈತರು ಹಣ ಕೊಡುತ್ತಾರೆ ಕೆಲವರು ಕೊಡುವುದಿಲ್ಲ. ಕೆಲವರಿಗೆ ಇದರಲ್ಲಿ ಆಸಕ್ತಿ ಇರುತ್ತದೆ ಇನ್ನು ಕೆಲವರಿಗೆ ನಿರಾಸಕ್ತಿ ಇರುತ್ತದೆ. ಹೀಗೆ ನಾನಾ ರೀತಿಯ ಜನ ಇರುತ್ತಾರೆ. ಆದರೆ ಒಬ್ಬ ರೈತ ಆತನ ನಿರಾಸಕ್ತಿಯಿಂದಾಗಿ ಅವನ ತೆಂಗಿನ ತೋಟಕ್ಕೆ ಔಷಧಿ ಸಿಂಪಡಿಸದೇ ಇದ್ದಾಗ, ಆ ತೋಟಕ್ಕೆ ಸರ್ಕಾರ ಔಷಧಿ ಸಿಂಪಡಿಸದೇ ಇದ್ದರೆ, ಆ ಗಿಡಗಳಿಗೆ ಟ್ರೀಟ್‌ಮೆಂಟ್ ಕೊಡದೇ ಹೋದರೆ ಆ ಒಂದು ಭಾಗದ, ಕ್ಷೇತ್ರದ ಗಿಡಗಳು ನಾಶವಾಗುವುದಲ್ಲದೆ ಇಡೀ ಜಿಲ್ಲೆಯ ತೆಂಗಿನ ತೋಟ ನಾಶವಾಗುತ್ತಿರುವುದರ ಬಗ್ಗೆ ಸರ್ಕಾರದ ಗಮನಕ್ಕೆ ತರುತ್ತೇನೆ. ಆ ದೃಷ್ಟಿಯಿಂದ ಸರ್ಕಾರ ಯಾವುದೇ ರೀತಿಯ ಸಂಕುಚಿತ ಮನೋಭಾವವನ್ನು ತೋರದೆ, ಆತ ಶ್ರೀಮಂತ ರೈತ, ಆತ ಬಡ ರೈತ ಎಂದು ಭೇದಭಾವ ತೋರದೆ ಈ ರೋಗದ ನಿವಾರಣೆಗೆ ಎಷ್ಟು ಕೋಟಿ ರೂಪಾಯಿ ಖರ್ಚಾದರೂ ಪರವಾಗಿಲ್ಲ ಅದನ್ನು ಚಾಲೆಂಜ್ ಆಗಿ ತೆಗೆದುಕೊಂಡು 3 ತಿಂಗಳ ಒಳಗೆ ಇಲ್ಲದ ಹಾಗೆ ಮಾಡುತ್ತೇವೆ, ಇದರ ವಂಶವನ್ನು ನಿರ್ವಂಶ ಮಾಡುತ್ತೇವೆ ಎನ್ನತಕ್ಕಂಥ ಫಲವನ್ನು ಈ ಸದನದ ಮೂಲಕ ತೆಗೆದುಕೊಂಡು ಸರ್ಕಾರ ಕಾರ್ಯೋನ್ಮುಖವಾದರೆ ಇದನ್ನು ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವೇ ವಿನ: ಇಲ್ಲದಿದ್ದರೆ ಕಾಟಾಚಾರಕ್ಕೆ ನಮ್ಮ ದೇಶದ 75 ಭಾಗ ಜನರು ರೈತರಾಗಿದ್ದಾರೆ, ಅವರು ನಮ್ಮ ದೇಶದ ಬೆನ್ನೆಲುಬು ಎಂದು ಏನು ಭಾಷಣದಲ್ಲಿ ಮಾತ್ರ ಹೇಳುತ್ತೇವೋ ಮತ್ತು ಅದು ಭಾಷಣದಲ್ಲಿ ಮಾತ್ರ ಉಳಿಯುತ್ತದೆ ಅದೇ ರೀತಿ ಆ ರೈತರು ಹಾಳಾಗತಕ್ಕಂಥದ್ದು ಸತ್ಯ. ಈ ಸದನ ಏನಾದರೂ ಕೂಡ ಈ ಕ್ರಮ ತೆಗೆದುಕೊಳ್ಳದೇ ಇದ್ದರೆ ನಾವೆಲ್ಲರೂ ಪಾಪ ಮಾಡಿದ ಹಾಗೆ ಆಗುತ್ತದೆ. ಈ ರಾಜ್ಯದ ನಾಲ್ಕೂವರೆ ಕೋಟಿ ಜನಕ್ಕೆ ಅನ್ಯಾಯ ಮಾಡಿದ ಹಾಗೆ

ಆಗುತ್ತದೆ. ಆ ದೃಷ್ಟಿಯಿಂದ ಪಕ್ಷಭೇದ ಬಿಟ್ಟು ಎಲ್ಲರಿಗೂ ಮನವರಿಕೆ ಮಾಡಿಕೊಡುವಂಥದ್ದು, ಸರ್ಕಾರ ಇದನ್ನು ಚಾಲೆಂಜ್ ಆಗಿ ತೆಗೆದುಕೊಳ್ಳಬೇಕು. ವಿರೋಧ ಪಕ್ಷದವರು ಹೇಳಿದರು ಅದಕ್ಕೋಸ್ಕರ ವಿರೋಧ ಮಾಡುತ್ತೇವೆ ಎನ್ನುವ ರೀತಿಯಲ್ಲಿ ಮಾಡಬಾರದು. ಇವತ್ತು ಮಾನ್ಯ ಸದಸ್ಯರು ತೆಂಗಿನಕಾಯಿಯನ್ನು ಸದನದಲ್ಲಿ ತಂದು ತೋರಿಸಿದರೆ ಅದರಲ್ಲಿ ಏನೂ ಕೆಟ್ಟ ಭಾವನೆ ಇಲ್ಲ. ಇಲ್ಲಿ ಎಷ್ಟೋ ಜನರಿಗೆ ಆ ಕಾಯಿಲೆಯ ತೀವ್ರತೆ ಬಗ್ಗೆ ಗೊತ್ತಿಲ್ಲದೆ ಇರತಕ್ಕಂಥವರು ಇರುತ್ತಾರೆ. ಅದಕ್ಕೋಸ್ಕರ ಎಲ್ಲಾ ಸನ್ಮಾನ್ಯ ಸದಸ್ಯರ ಗಮನ ಸೆಳೆಯಲಿಕ್ಕೆ ಆ ಕಾಯಿಲೆಯ ತೀವ್ರತೆ ಬಗ್ಗೆ ತಿಳಿಸುವುದಕ್ಕೆ ಮಾನ್ಯ ಸದಸ್ಯರು ಇಲ್ಲಿ ತಂದು ಪ್ರದರ್ಶನ ಮಾಡಿದ್ದಾರೆಯೇ ವಿನ: ಬೇರೆ ಯಾವ ಭಾವನೆಯಿಂದಲೂ ಅಲ್ಲ. ಆ ತೆಂಗಿನ ಕಾಯಿಯನ್ನು ತಂದು ತೋರಿಸಿದ್ದಕ್ಕೆ ಎಲ್ಲರೂ ಎದ್ದು ನಿಂತು ಗಲಾಟೆ ಮಾಡಿದ್ದು ಸರಿಯಲ್ಲ. ನಿಮ್ಮ ಪಕ್ಷ ಮೆಜಾರಿಟಿ ಇರಬಹುದು, ನಮ್ಮ ಪಕ್ಷ ಮೈನಾರಿಟಿ ಇರಬಹುದು, ಮೈನಾರಿಟಿಯನ್ನು ರಕ್ಷಣೆ ಮಾಡುವುದು ನಿಮ್ಮೆಲ್ಲರ ಕರ್ತವ್ಯ ಕೂಡ ಹೌದು.

ಶ್ರೀ ಕೆ.ವಿಜಯಕುಮಾರ್ ಶೆಟ್ಟಿ: ಮಾನ್ಯ ಅಧ್ಯಕ್ಷರೆ, ತೆಂಗಿನ ಕಾಯಿ ವಿಚಾರ ಆಗಲೇ ಮುಗಿದು ಹೋಯಿತು. ಪುನ: ಅದನ್ನೇ ಮಾತನಾಡಿ ಸಮಯ ಹಾಳುಮಾಡುತ್ತಿದ್ದಾರೆ. ಅದು ಮಾಡಬಾರದು. ಇಲ್ಲಿ ಮಾತನಾಡಬೇಕಾದರೆ ಕೆಲವು ಸಿಸ್ಟಮ್ಸ್ ಇವೆ. ರೂಲ್ಸ್ ಆಫ್ ಪ್ರೊಸೀಜರ್ ಏನು ಇದೆ ಅದರ ಒಳಗಡೆಯೇ ಮಾತನಾಡಬೇಕು.

(ಗೊಂದಲ)

ಶ್ರೀ ಹೆಚ್.ಸಿ.ಬಸವರಾಜು: ಮಾನ್ಯ ಅಧ್ಯಕ್ಷರೆ, ರೈತರ ಸಮಸ್ಯೆ ಬಗ್ಗೆ, ಆಡಳಿತ ಪಕ್ಷದವರಿಗೆ ಕಾಳಜಿ ಇಲ್ಲವೇನೋ ಎನ್ನುವ ಸಂಶಯ ಬರುತ್ತಿದೆ. ತೀವ್ರವಾದಂಥ ಬರ್ನಿಂಗ್ ಪ್ರಾಬ್ಲಮ್ ಬಗ್ಗೆ ಡಿಸ್ಕಸ್ ಮಾಡುವಾಗ- ಹಾಗೆ ಹೇಳಿದಿರಿ, ಹೀಗೆ ಹೇಳಿದಿರಿ ಎಂದು ಹೇಳುವುದು ಇದು ಸರಿಹೋಗುವುದಿಲ್ಲ. ನಾವೆಲ್ಲರೂ ಕೂಡ ಪಕ್ಷಭೇದ ಮರೆತು ಈ ವಿಷಯದ ಮೇಲೆ ಒಮ್ಮತವಾದ ಒಂದು ರೆಸಲ್ಯೂಷನ್ ಪಾಸ್ ಮಾಡಿ ಈ ಕರ್ನಾಟಕ ರಾಜ್ಯದಲ್ಲಿ ಈ ನುಸಿ ಪೀಡೆಯನ್ನು ಮೂಲತ: ತೊಲಗಿಸಬೇಕು. ಶ್ರೀಮಂತ ರೈತ ಹಣ ಕೊಟ್ಟರೆ ಅವನ ತೋಟಕ್ಕೆ ಮಾತ್ರ ಔಷಧಿ ಕೊಡುವುದು, ಬಡವನಿಗೆ ಆತ ಹಣ ಕೊಡದಿದ್ದರೆ ಕೊಡದೇ ಇರುವುದ ಈ ರೀತಿ ಮಾಡುವುದ ಬೇಡ. ಒಂದು ಹಳ್ಳಿಗೆ ಹೋದಾಗ ಸಾಮೂಹಿಕವಾಗಿ ಒಬ್ಬ ರೈತನಿಗೆ ಒಂದು ತೆಂಗಿನ ಮರ ಇದ್ದರೂ ಕೂಡ ಸರ್ಕಾರದಿಂದ ವಾಲಂಟರಿ ಆಗಿ ಆ ಮರಗಳಿಗೆ ಇಂಜೆಕ್ಷನ್, ಔಷಧಿಯನ್ನು ಕೊಡಬೇಕು. ಈ ರಾಜ್ಯದಲ್ಲಿ ಎಷ್ಟು ಲಕ್ಷ ತೆಂಗಿನ ಸಸಿಗಳು ಇವೆಯೋ ಅಷ್ಟಕ್ಕೂ ಕೂಡ ಔಷಧಿಯನ್ನು ಸಿಂಪಡಿಸಿ ನುಸಿ ರೋಗವನ್ನು ನಿಯಂತ್ರಣಕ್ಕೆ ತರಕ್ಕಂಥದ್ದು ಸರ್ಕಾರದ ಕರ್ತವ್ಯ ಆಗಿದೆ. ಇದರಲ್ಲಿ ಏನಾದರೂ ವಿಫಲವಾದರೆ ಅದರಿಂದ ಕೋಟ್ಯಾಂತರ ಜನ

ರೈತರು ಬೀದಿಪಾಲಾಗುತ್ತಾರೆ, ಅವರೆಲ್ಲರೂ ಕೂಡ ವಿಷ ತೆಗೆದುಕೊಂಡು ಸಾಯುವ ಕಾಲ ಬರಬಹುದು, ಆದಕ್ಕೆ ಅವಕಾಶ ಮಾಡಿಕೊಡಬೇಡಿ ಎನ್ನುವ ಎಚ್ಚರಿಕೆಯನ್ನು ಸರ್ಕಾರಕ್ಕೆ ಕೊಡುತ್ತಿದ್ದೇನೆ. ಇಷ್ಟು ಮಾತನಾಡಲು ನನಗೆ ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ. ಧನ್ಯವಾದಗಳು.